ಗುರುವಾರ, ಮೇ 11, 2023 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ಸಂದರ್ಶನಕ್ಕೆ ಹೋಗುವ ಮುನ್ನ



ನಮ್ಮದು 35 ವರ್ಷಗಳ ಶ್ರೇಷ್ಠತೆ ಹಾಗೂ ದೀರ್ಘ ಪರಂಪರೆ

Aakash + BYJU'S

ನಮ್ಮ ತರಗತಿಗಳ ಕಾರ್ಯಕ್ರಮದ ಮೂಲಕ ನಾವು ನಿರಂತರವಾಗಿ ವಿಜೇತರನ್ನು ನೀಡುತ್ತಲೇ ಬಂದಿದ್ದೇವೆ

Name	Course	AIR	Marks	Exam	Year
Kalpana Kumari	Classroom	1	691/720	NEET (UG)	2018
Bhavik Bansal	Classroom	2	700/720	NEET (UG)	2019
Akanksha Singh	4 Year Classroom	2	720/720	NEET (UG)	2020
Mrinal Kutteri	2 Year Classroom	1	720/720	NEET (UG)	2021
Tanmay Gupta	2 Year Classroom	1	720/720	NEET (UG)	2021
Karthika G Nair	2 Year Classroom	1	720/720	NEET (UG)	2021
Vatsa A Batra	2 Year Classroom	2	715/720	NEET (UG)	2022

ಕರ್ನಾಟಕ ದಲ್ಲಿ ಸತತವಾಗಿ ವಿಜೇತರನ್ನು ಪರಿಚಯಿಸುತ್ತಿರುವ ಹೆಮ್ಮೆ ನಮ್ಮದು

1 — 3 AIR — Hrishikesh N Gangule, 2 Year Classroom, AIIMS, New Delhi, NEET-UG 2022, STATE TOPPER

1 — 5 AIR — Jashan Chhabra, 2 Year Classroom, AIIMS, New Delhi, NEET-UG 2021, STATE TOPPER

ನಾವು ಸತತವಾಗಿ ಎರಡು ಬಾರಿ ಕರ್ನಾಟಕದಲ್ಲಿ ಮುಂಚೂಣಿಯಲ್ಲಿದ್ದೇವೆ!

NEET (UG) 2022ರಲ್ಲಿ ಕರ್ನಾಟಕದ ಶಾಖೆಗಳಿಂದ ಮೇಲ್ಪಂಕ್ತಿಯಲ್ಲಿದ್ದೇವೆ

AIR 129 — 695/720 — Pranav Mishra, 1 Year Classroom, VMMC, Delhi

AIR 184 — 695/720 — Saahil Tiwari, 3 Year Classroom, JIPMER, Puducherry

AIR 187 — 695/720 — Mohammad Ayan, 3 Year Classroom, AIIMS, New Delhi

AIR 226 — 691/720 — Manas Kudlapur Rakesh, 2 Year Classroom, JIPMER, Puducherry

and many more ...

ರಿಪೀಟರ್ ಕೋರ್ಸ್‌ಗಳಲ್ಲಿ ಅದ್ಭುತವಾದ ಯಶಸ್ಸನ್ನು ಸಾಧಿಸಿದ್ದೇವೆ

Shaheer Iqbal Syed — NEET - Marks 2021: 179, 2022: 579 — M S Ramaiah Medical College and Hospital

Gokul — NEET - Marks 2021: 297, 2022: 577 — E.S.I Medical College

Mandeep Jakhar — NEET - Marks 2021: 368, 2022: 656 — AFMC, Pune

Nithyashree — NEET - Marks 2021: 328, 2022: 598 — Mandya Institute of Medical Sciences

and many more success stories ...

Though every care has been taken to publish the result correctly, yet Aakash Educational Services Ltd. shall not be responsible for inadvertent error, if any.

ಪ್ರವೇಶ ಇದೀಗಷ್ಟೇ ಪ್ರಾರಂಭವಾಗಿದೆ. ತ್ವರೆ ಮಾಡಿ. ಇಂದೇ ತರಗತಿಗೆ ಸೇರಿ ಹಾಗೂ 90% ವರೆಗೆ ವಿದ್ಯಾರ್ಥಿವೇತನದ ಲಾಭ ಪಡೆಯಿರಿ

NEET / JEE 2024
Repeater Courses
(For12th pass students)

- Hostel Facility Available*
- Special Focus on Physics & Chemistry
- Exclusive Doubt Sessions
- Comprehensive Study Material & All India Tests
- Student Centric Approach

Hurry! Batches filling fast.
* Please Contact the nearest Branch for more details...

Appear for instant Admission & Scholarship Test. Register now for FREE
visit: iacst.aakash.ac.in or scan the code

CLASS 8th – 10th Studying Students — Integrated courses for NTSE / Olympiads / School Boards

CLASS 11th Moving from Class 10 to Class 11 — 2 Year Integrated courses for NEET / JEE / KCET

CLASS 12th Studying Students — 1 Year Integrated courses for NEET / JEE / KCET

NEET 2023
Rank & College Predictor

- Predict your NEET 2023 Rank & College based on your expected score
- Get National & State Specific Counselling Guidance

Scan the QR code to visit NEET 2023 Rank & College Predictor

25 Branches in Karnataka

Bengaluru
Banaswadi: 9311476789
Banerghatta Road: 8800013043
Hebbal: 8800013045
HSR Layout: 8800013044
Indiranagar: 8800013046
Jayanagar: 8800013047
Rajajinagar: 8800013048
Rajarajeshwari Nagar: 7836999994
Seegehalli: 8800902396
T. Dasarahalli: 8800878217
Whitefield: 8800013049
Kolar: 8800876124
Mysuru
(Kuvempunagar): 8800013052
(Suburban Branch): 7428899148
Ballari: 8800898251
Belagavi: 8800012965
Davanagere: 8800898210
Dharwad: 8800909381
Hassan: 8800897304
Hubballi: 8800013051
Kalaburagi: 8800901459
Mandya: 8800901164
Mangaluru: 8800012964
Shivamogga: 8800898692
Udupi: 8800898735

Scan code to locate the nearest branch

Download Aakash App — GET IT ON Google Play | Download on the App Store

CALL (TOLL-FREE) 1800-102-2727

VISIT aakash.ac.in

Aakash + BYJU'S

II ಪ್ರಜಾವಾಣಿ
ಗುರುವಾರ • ಮೇ 11, 2023

ಪ್ರಜಾ ಮತ

ಜನತಂತ್ರದ ಹಬ್ಬ 2023


ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಶಿಗ್ಗಾವಿಯಲ್ಲಿ ಮತ ಚಲಾಯಿಸಿದರು

ಸಿದ್ದರಾಮನಹುಂಡಿಯಲ್ಲಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯಯ ಮತ ಚಲಾಯಿಸಿದರು

ಕನಕಪುರದ ದೊಡ್ಡಾಲಹಳ್ಳಿಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ ಚಲಾಯಿಸಿದರು

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಕಲಬುರಗಿಯ ಬಸವ ನಗರದ ಮತಗಟ್ಟೆಯಲ್ಲಿ ಮತ ಚಲಾಯಿಸಿದರು

ಎಚ್‌.ಡಿ. ದೇವೇಗೌಡ, ಪತ್ನಿ ಚನ್ನಮ್ಮ ಅವರು ಹೊಳೆನರಸೀಪುರ ಕ್ಷೇತ್ರದ ಪಡುವಲಹಿಪ್ಪೆ ಮತಗಟ್ಟೆಯಲ್ಲಿ ಮತದಾನ ಮಾಡಿದರು

ಶಿಕಾರಿಪುರದಲ್ಲಿ ಬಿ.ಎಸ್‌. ಯಡಿಯೂರಪ್ಪ ಹಾಗೂ ಬಿಜೆಪಿ ಅಭ್ಯರ್ಥಿ ವಿಜಯೇಂದ್ರ ಅವರು ಮತ ಚಲಾಯಿಸಲು ಸರದಿ ಸಾಲಿನಲ್ಲಿ ನಿಂತಿದ್ದರು

ರಾಮನಗರದ ತಾಲ್ಲೂಕಿನ ಕೇತಗಾನಹಳ್ಳಿಯಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ, ಮಗ ನಿಖಿಲ್‌, ಪತ್ನಿ ಅನಿತಾ ಅವರು ಮತ ಚಲಾಯಿಸಿದರು

ಹುಬ್ಬಳ್ಳಿಯಲ್ಲಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಮತ ಚಲಾಯಿಸಿದರು

ಎನ್‌ಆರ್‌ ನಾರಾಯಣ ಮೂರ್ತಿ ಮತ್ತು ಸುಧಾ ಮೂರ್ತಿ ಮತ ಚಲಾಯಿಸಿದರು


ಬಸವನಗುಡಿ ವಿಧಾನಸಭಾ ಕ್ಷೇತ್ರದಲ್ಲಿ ಮತ ಚಲಾಯಿಸಿ ಗುರುತನ್ನು ತೋರಿಸುತ್ತಿರುವ ಸಾಹಿತಿ ಚಂದ್ರಶೇಖರ್ ಕಂಬಾರ

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬೆಂಗಳೂರಿನಲ್ಲಿ ಮತ ಚಲಾಯಿಸಿದರು


ಬಸವನಗುಡಿಯಲ್ಲಿ ಮತ ಚಲಾಯಿಸಿದ ಗುರುತನ್ನು ತೋರಿಸುತ್ತಿರುವ ಚಿತ್ರ ನಟ ಉಪೇಂದ್ರ

ಅಶ್ವಿನಿ ಪುನೀತ್ ರಾಜ್‌ಕುಮಾರ್ ಮತ ಚಲಾಯಿಸಿದರು

ಭಾರತಿ ವಿಷ್ಣುವರ್ಧನ್ ಮತ ಚಲಾಯಿಸಿದರು


ಮೈಸೂರಿನಲ್ಲಿ ಜಿಲ್ಲಾ ಚುನಾವಣಾ ರಾಯಭಾರಿ, ಕ್ರಿಕೆಟಿಗ ಜಾವಗಲ್ ಶ್ರೀನಾಥ್ ಮತದಾನ ಮಾಡಿದರು

ಬೆಂಗಳೂರಿನ ಬನಶಂಕರಿಯ ನಟ ರಮೇಶ್ ಅರವಿಂದ್ ದಂಪತಿ ಮತದಾನ ಮಾಡಿದರು

ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸುತ್ತೂರಿನಲ್ಲಿ ಮತ ಚಲಾಯಿಸಿದರು

ಜನಪದ ಕಲಾವಿದೆ, ಪದ್ಮಶ್ರೀ ಸುಕ್ರಿ ಬೊಮ್ಮ ಗೌಡ ಅವರು ಅಂಕೋಲಾ ತಾಲ್ಲೂಕಿನ ಬಡಗೇರಿಯ ಮತಗಟ್ಟೆಯಲ್ಲಿ ಮತ ಚಲಾಯಿಸಿದರು

ಮಾಗಡಿ ತಾಲ್ಲೂಕಿನ ಹುಲಿಕಲ್ ಗ್ರಾಮದಲ್ಲಿ ಸಾಲುಮರದ ತಿಮ್ಮಕ್ಕ ಮತ ಚಲಾಯಿಸಿದರು

ಅರಸೀಕೆರೆ ತಾಲ್ಲೂಕಿನ ಕಾಳೇನಹಳ್ಳಿ ಹಟ್ಟಿಯಲ್ಲಿ ಚಿತ್ರನಟ ಡಾಲಿ ಧನಂಜಯ ತಮ್ಮ ಅಜ್ಜಿಯೊಂದಿಗೆ ಬಂದು ಮತ ಚಲಾಯಿಸಿದರು

ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ಪತ್ನಿ ತ್ರಿಷಿಕಾ ಕುಮಾರಿ ಅವರು ಮೈಸೂರಿನಲ್ಲಿ ಮತ ಚಲಾಯಿಸಿದರು

ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ. ವೀರೇಂದ್ರ ಹೆಗ್ಗಡೆ ಹಾಗೂ ಪತ್ನಿ ಹೇಮಾವತಿ ಹೆಗ್ಗಡೆ ಅವರು ಧರ್ಮಸ್ಥಳದಲ್ಲಿ ಮತ ಚಲಾಯಿಸಿದರು


ಚಲನಚಿತ್ರ ನಟ ಯಶ್ ಅವರು ಬೆಂಗಳೂರಿನಲ್ಲಿ ಮತ ಚಲಾಯಿಸಿದರು

ಕಲಬುರಗಿ ಜಿಲ್ಲೆಯ ಚಿತ್ತಾಪುರ ಮತಗಟ್ಟೆ ಬಳಿ ಮತಚೀಟಿಯೊಂದಿಗೆ ಹಣ ಹಂಚಿಕೆ • ಸಾಗರ: ಅಭ್ಯರ್ಥಿ ವಿರುದ್ಧ ಪ್ರಕರಣ

ಮತದಾನ: ಬಹುತೇಕ ಶಾಂತ, ಕೆಲವೆಡೆ ಜಟಾಪಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಗೆ ಬುಧವಾರ ರಾಜ್ಯದಾದ್ಯಂತ ಮತದಾನ ಶಾಂತಿಯುತವಾಗಿ ನಡೆದಿದ್ದು, ಕೆಲವೆಡೆ ಮತದಾರರಿಗೆ ಹಣದ ಆಮಿಷವೊಡ್ಡಿರುವ ಹಾಗೂ ವಿವಿಧ ಪಕ್ಷಗಳ ಕಾರ್ಯಕರ್ತರ ನಡುವೆ ಜಟಾಪಟಿ ನಡೆದಿರುವ ಪ್ರಕರಣಗಳೂ ವರದಿಯಾಗಿವೆ.

ಐವರು ಬಿಜೆಪಿ ಕಾರ್ಯಕರ್ತರು ವಶಕ್ಕೆ (ಕಲಬುರಗಿ ವರದಿ): ಜಿಲ್ಲೆಯ ಚಿತ್ತಾಪುರ ಪಟ್ಟಣದ ಮತಗಟ್ಟೆ ಬಳಿ ಮತಚೀಟಿಯೊಂದಿಗೆ ಹಣ ಹಂಚಿಕೆ ಮಾಡುತ್ತಿದ್ದ ಐವರು ಆರೋಪಿಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಬಿಜೆಪಿ ಅಭ್ಯರ್ಥಿ ಮಣಿಕಂಠ ರಾಠೋಡ ಪರ ಐವರು ಹಣ ಹಂಚುತ್ತಿದ್ದರು ಎಂದು ಗೊತ್ತಾಗಿದೆ.

ಮಧ್ಯಾಹ್ನ 1 ಗಂಟೆ ಸುಮಾರಿಗೆ ಮತಗಟ್ಟೆಯತ್ತ ಇಶಾ ಪಂತ್ ಅವರ ಕಾರು ಬರುತ್ತಿದ್ದಂತೆಯೇ, ಬಾಹರಪೇಠದ ಬಸವಣ್ಣ ಗುಡಿ ಬಳಿ ನಿಂತಿದ್ದ ಜನ ಚದುರಿದರು. ಓಡಿದ ಕೆಲವರನ್ನು ಪೊಲೀಸರು ಬೆನ್ನಟ್ಟಿದರು. ಅವರನ್ನು ವಶಕ್ಕೆ ಪಡೆದು ತಪಾಸಣೆ ನಡೆಸಿದಾಗ, ಹಣ ಮತ್ತು ಮತಚೀಟಿ ಸಿಕ್ಕವು. ಐವರು ಆರೋಪಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಇಶಾ ಪಂತ್ ತಿಳಿಸಿದರು.

ಹಣ ಪತ್ತೆ: ಕಲಬುರಗಿ ಗ್ರಾಮೀಣ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪರ ಹಣ ಹಂಚಿಕೆ ಮಾಡುತ್ತಿದ್ದಾರೆ' ಎನ್ನಲಾದ ವ್ಯಕ್ತಿಗಳನ್ನು ಹಣದ ಸಮೇತ ಕಾಂಗ್ರೆಸ್ ಕಾರ್ಯಕರ್ತರು ಪೊಲೀಸರಿಗೆ ಒಪ್ಪಿಸಿದ್ದಾರೆ.

'ಚಿಂಚನಸೂರ ಗ್ರಾಮದಲ್ಲಿ ರಾತ್ರಿ ವೇಳೆ ಲಕ್ಷಾಂತರ ರೂಪಾಯಿ ಹಣ ಕಾರಿನಲ್ಲಿ ಇಟ್ಟುಕೊಂಡು ಬಂದಿದ್ದರು. ಆಗ ತಡೆದು ತಪಾಸಣೆ ಮಾಡಿದಾಗ, ಹಣ ಇರುವುದು ಗೊತ್ತಾಗಿದೆ ಎಂದು ಮೂಲಗಳು ತಿಳಿಸಿವೆ.

ಜೆಡಿಎಸ್, ಬಿಜೆಪಿ ಕಾರ್ಯಕರ್ತರ ನಡುವೆ ಗಲಾಟೆ: (ಗುರುಮಠಕಲ್ ವರದಿ): ಯಾದಗಿರಿ ಜಿಲ್ಲೆಯ ಗುರುಮಠಕಲ್ ಮತಕ್ಷೇತ್ರದ ಕೇಶ್ವಾರ ಗ್ರಾಮದ ಮತಗಟ್ಟೆ ಬಳಿ ಬಿಜೆಪಿ ಮತ್ತು ಜೆಡಿಎಸ್ ಕಾರ್ಯಕರ್ತರ ನಡುವೆ ಸಂಜೆ ಕಲ್ಲು ತೂರಾಟ ನಡೆದು, ಕೆಲ ಹೊತ್ತು ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು.

'ಕೇಶ್ವಾರ ಗ್ರಾಮದಲ್ಲಿ ಬಿಜೆಪಿ ಅಭ್ಯರ್ಥಿ ಲಲಿತಾ ಅನಪುರ ಅವರ ಸಹೋದರಿ ಸವಿತಾ ಮತಗಟ್ಟೆ ವೀಕ್ಷಣೆಗೆ ತೆರಳಿದ್ದ ವೇಳೆ ಜೆಡಿಎಸ್ ಮತ್ತು ಬಿಜೆಪಿ ಕಾರ್ಯಕರ್ತರ ನಡುವೆ ಮಾತಿಗೆ ಮಾತು ಬೆಳೆದು ಕಲ್ಲು ತೂರಾಟ ನಡೆಯಿತು' ಎಂದು ಸ್ಥಳೀಯರು ತಿಳಿಸಿದರು.

ಪೊಲೀಸರು ಪರಿಸ್ಥಿತಿ ಮೇಲೆ ನಿಯಂತ್ರಣ ಕಾಯ್ದುಕೊಂಡ ಬಳಿಕ ಮತದಾನ ಮುಂದುವರೆಯಿತು.

ಪೊಲೀಸ್ ಜೊತೆ ಚಕಮಕಿ- ವ್ಯಕ್ತಿಗೆ ಗಾಯ (ಕೋಲಾರ ವರದಿ):

ತಾಲ್ಲೂಕಿನ ಕೂಟೇರಿ ಮತಗಟ್ಟೆ ಬಳಿ ಪೊಲೀಸ್ ಹಾಗೂ ಗ್ರಾಮಸ್ಥರ ನಡುವೆ ಬುಧವಾರ ನಡೆದ ಗಲಾಟೆ ವೇಳೆ ಶ್ರೀಕೃಷ್ಣಪ್ಪ ಎಂಬ ವ್ಯಕ್ತಿಯ ತಲೆಗೆ ಗಾಯವಾಗಿ ರಕ್ತ ಚಿಮ್ಮಿತು.

ಬಹಳ ಹೊತ್ತಿನಿಂದ ಮತಗಟ್ಟೆ ಬಳಿ ಕುಳಿತಿದ್ದ ಕೆಲವರನ್ನು ಅಲ್ಲಿಂದ ಹೋಗುವಂತೆ ಮಹಿಳಾ ಪಿಎಸ್‌ಐ ಹೇಳಿದರು. ಅವರ ಸೂಚನೆಯ ನಂತರವೂ ಸ್ಥಳದಿಂದ ತೆರಳದ ಕೆಲವರನ್ನು ವಶಕ್ಕೆ ಪಡೆದು ಜೀಪು ಹತ್ತಿಸಿಕೊಳ್ಳುವ ವೇಳೆ ಪೊಲೀಸರು ಮತ್ತು ಗ್ರಾಮಸ್ಥರ ಮಧ್ಯೆ ಗಲಾಟೆ ಶುರುವಾಯಿತು.

ಆಗ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಶ್ರೀಕೃಷ್ಣಪ್ಪ ತಲೆಗೆ ಏಟು ಬಿದ್ದಿದೆ. ಇದರಿಂದ ಪೊಲೀಸರ ವಿರುದ್ಧ ತಿರುಗಿ ಬಿದ್ದ ಗ್ರಾಮಸ್ಥರು ಪೊಲೀಸ್ ಜೀಪ್‌ಗೆ ಮುತ್ತಿಗೆ ಹಾಕಿ ಆಕ್ರೋಶ ವ್ಯಕ್ತಪಡಿಸಿದರು. ಗಾಯಾಳು ಕೋಲಾರದ ಜಿಲ್ಲಾಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಮತಗಟ್ಟೆ ಏಜೆಂಟ್ ವಿಚಾರದಲ್ಲಿ ಶ್ರೀನಿವಾಸಪುರ ತಾಲ್ಲೂಕಿನ ಆಲಂಗಿರಿ ಗ್ರಾಮದಲ್ಲಿ ಪಕ್ಷೇತರ ಅಭ್ಯರ್ಥಿ ರಮೇಶ್ ಕುಮಾರ್ ಹಾಗೂ ಕಾಂಗ್ರೆಸ್ ಅಭ್ಯರ್ಥಿ ಕೆ.ಆರ್.ರಮೇಶ್ ಕುಮಾರ್ ಬೆಂಬಲಿಗರ ನಡುವೆ ಮಾತಿನ ಚಕಮಕಿ ನಡೆದಿದೆ. ಶ್ರೀನಿವಾಸಪುರ ಪಟ್ಟಣದಲ್ಲಿ ಜೆಡಿಎಸ್ ಹಾಗೂ ಕಾಂಗ್ರೆಸ್ ಕಾರ್ಯಕರ್ತರ ನಡುವೆ ಗಲಾಟೆ ನಡೆಯಿತು. ಪೊಲೀಸರು ಮಧ್ಯ ಪ್ರವೇಶಿಸಿ ವಾತಾವರಣ ತಿಳಿಗೊಳಿಸಿದರು.

ಅಭ್ಯರ್ಥಿ ವಿರುದ್ಧ ಪ್ರಕರಣ (ಸಾಗರ ವರದಿ): ಇಲ್ಲಿನ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದ ಸೈಯದ್ ಜಾಕೀರ್ ಅವರು ಕಡೆ ಗಳಿಗೆಯಲ್ಲಿ ಕಾಂಗ್ರೆಸ್‌ಗೆ ಬೆಂಬಲ ಸೂಚಿಸಿ ಕಣದಿಂದ ಹಿಂದೆ ಸರಿದ ಕಾರಣ ಅವರ ವಿರುದ್ಧ ಚುನಾವಣಾ ನೀತಿಸಂಹಿತೆ ಉಲ್ಲಂಘನೆ ಪ್ರಕರಣ ದಾಖಲಾಗಿದೆ.

ಚುನಾವಣೆಗೆ 48 ಗಂಟೆ ಮುಂಚಿತವಾಗಿ ಈ ರೀತಿಯಾಗಿ ಕಣದಿಂದ ಹಿಂದೆ ಸರಿಯುವುದು ಮತದಾರರ ಮೇಲೆ ಅನುಚಿತ ಪ್ರಭಾವ ಬೀರಿದಂತಾಗುತ್ತದೆ ಹಾಗೂ ಯಾವುದೋ ಆಮಿಷಕ್ಕೆ ಒಳಗಾಗಿ ಉಮೇದುವಾರಿಕೆಗೆ ರಾಜೀನಾಮೆ ಸಲ್ಲಿಸಿದಂತಾಗುತ್ತದೆ ಎಂಬ ಹಿನ್ನೆಲೆಯಲ್ಲಿ ಅವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಮತಯಂತ್ರಗಳನ್ನು ಪುಡಿ ಮಾಡಿರುವ ಗ್ರಾಮಸ್ಥರು

ಕಾರನ್ನು ಜಖಂ ಮಾಡಿರುವ ಗ್ರಾಮಸ್ಥರು

ಇವಿಎಂ ಮಷಿನ್ ಪುಡಿ

ಹುಬ್ಬಳ್ಳಿ: ಬಸವನ ಬಾಗೇವಾಡಿ ತಾಲ್ಲೂಕಿನ ಮಸಬಿನಾಳ ಗ್ರಾಮದಲ್ಲಿ ಚುನಾವಣೆಗೆ ನಿಯೋಜಿಸಲಾಗಿದ್ದ ಸೆಕ್ಟರ್ ಅಧಿಕಾರಿ ಮಾಳಪ್ಪ ಯರಝರಿ ಕಾರಿನಲ್ಲಿ ಸಿಬ್ಬಂದಿಯೊಂದಿಗೆ ಹೆಚ್ಚುವರಿ ಮತಯಂತ್ರಗಳನ್ನು ಮತಗಟ್ಟೆಗೆ ತರುತ್ತಿದ್ದ ಸಂದರ್ಭದಲ್ಲಿ 150ಕ್ಕೂ ಹೆಚ್ಚು ಗ್ರಾಮಸ್ಥರು ಕಾರನ್ನು ತಡೆದು ನಿಲ್ಲಿಸಿ, ಅದರಲ್ಲಿದ್ದ ಹೆಚ್ಚುವರಿ ಇವಿಎಂ, ವಿವಿ ಪ್ಯಾಟ್ ಮಷಿನ್‌ಗಳನ್ನು ನೆಲಕ್ಕೆ ಎಸೆದು ಪುಡಿ ಮಾಡಿ, ಸಿಬ್ಬಂದಿ ಮೇಲೂ ಹಲ್ಲೆ ನಡೆಸಿದರು. 'ಈ ಸಂಬಂಧ 23 ಜನರನ್ನು ಬಂಧಿಸಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಚ್‌.ಡಿ.ಆನಂದಕುಮಾರ್ ತಿಳಿಸಿದ್ದಾರೆ.

ವಿಜಯಪುರ ನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬೂತನಾಳ ಮತಗಟ್ಟೆಯಲ್ಲಿ ಬಿಜೆಪಿ ಪರವಾಗಿ ನಕಲಿ ಮತದಾನ ಮಾಡಲು ಕಲಬುರ್ಗಿ ಜಿಲ್ಲೆಯ ಚಿಂಚೋಳಿಯಿಂದ ವಾಹನಗಳಲ್ಲಿ ಬಂದಿದ್ದವರನ್ನು ಕಾಂಗ್ರೆಸ್ ಅಭ್ಯರ್ಥಿ ಮತ್ತು ಕಾರ್ಯಕರ್ತರು ಹಿಡಿದು, ಪೊಲೀಸರಿಗೆ ಒಪ್ಪಿಸಿದರು.

ಇಬ್ಬರಿಗೆ ಗಾಯ

ಬಳ್ಳಾರಿ ವರದಿ: ಬಳ್ಳಾರಿ ಗ್ರಾಮೀಣ ವಿಧಾನಸಭಾ ಕ್ಷೇತ್ರದ ಮತಗಟ್ಟೆಯೊಂದರಲ್ಲಿ ಮತದಾನದ ವೇಳೆ ಕಾಂಗ್ರೆಸ್ ಮತ್ತು ಬಿಜೆಪಿ ಕಾರ್ಯಕರ್ತರ ನಡುವೆ ನಡೆದ ಸಂಘರ್ಷದಲ್ಲಿ ಇಬ್ಬರು ಗಾಯಗೊಂಡಿದ್ದಾರೆ. ಬಳ್ಳಾರಿ ತಾಲ್ಲೂಕಿನ ಸಂಜೀವರಾಯನಕೋಟೆಯಲ್ಲಿ ಈ ಘಟನೆ ನಡೆದಿದೆ.

ಲಘು ಲಾಠಿ ಪ್ರಹಾರ

ಗದಗ ವರದಿ: ವೋಟು ಹಾಕಿಸುವ ವಿಚಾರಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಮತ್ತು ಬಿಜೆಪಿ ಕಾರ್ಯಕರ್ತರ ನಡುವೆ ನಡೆಯುತ್ತಿದ್ದ ಮಾತಿನ ಚಕಮಕಿ ತಪ್ಪಿಸಲು ತಾಲ್ಲೂಕಿನ ಬಿಂಕದಕಟ್ಟಿಯಲ್ಲಿ ಮತಗಟ್ಟೆಯಲ್ಲಿ ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿದರು. ಬಿಂಕದಕಟ್ಟಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ 134ನೇ ಮತಗಟ್ಟೆಯಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ಕಾರ್ಯಕರ್ತರು ತಮ್ಮ ಪಕ್ಷಕ್ಕೆ ಮತ ಹಾಕುವಂತೆ ಮತದಾರರಿಗೆ ಹೇಳಿದಾಗ ಈ ಚಕಮಕಿ ನಡೆದಿದೆ.

ಮತದಾನ ಸ್ಥಗಿತ

ಮುಂಡರಗಿ(ಗದಗ ಜಿಲ್ಲೆ): ತಾಲ್ಲೂಕಿನ ಶೀರನಹಳ್ಳಿ ಗ್ರಾಮದ ಮತಗಟ್ಟೆ ಸಂಖ್ಯೆ 216ರಲ್ಲಿ ಪೊಲೀಸ್ ಕಾನ್‌ಸ್ಟೆಬಲ್ ಒಬ್ಬರು ಹುಲಿಗೆಮ್ಮ ಎಂಬ ಮಹಿಳೆಗೆ ಹೊಡೆದಿದ್ದಾರೆ ಎಂದು ಆರೋಪಿಸಿ ಗ್ರಾಮಸ್ಥರು ಅರ್ಧಗಂಟೆ ಕಾಲ ಮತದಾನ ಸ್ಥಗಿತಗೊಳಿಸಿದ್ದರು. ಮತದಾನಕ್ಕೆ ನೂಕು ನುಗ್ಗಲು ಉಂಟಾದ ಸಮಯದಲ್ಲಿ ಸ್ಥಳದಲ್ಲಿದ್ದ ಪೊಲೀಸ್ ಕಾನ್‌ಸ್ಟೆಬಲ್ ಒಬ್ಬರು ಜನರನ್ನು ಸಾಲಾಗಿ ನಿಲ್ಲಿಸುವ ಸಂದರ್ಭದಲ್ಲಿ ಮಹಿಳೆಗೆ ಏಟು ತಗುಲಿದೆ ಎನ್ನಲಾಗಿದೆ.

ಕೇಂದ್ರದಲ್ಲಿಯೇ ಹೆರಿಗೆ

ಕುರುಗೋಡು (ಬಳ್ಳಾರಿ ಜಿಲ್ಲೆ):ತಾಲ್ಲೂಕಿನ ಕೊರ್ಲಗುಂದಿ ಗ್ರಾಮದ ಮತಗಟ್ಟೆ ಸಂಖ್ಯೆ 228ರಲ್ಲಿ ಮತದಾನ ಮಾಡಲು ಬಂದಿದ್ದ ತುಂಬು ಗರ್ಭಿಣಿ ಗ್ರಾಮದ ಮಣಿಲಾ ಎಂಬುವವರಿಗೆ ಮತದಾನ ಕೇಂದ್ರದಲ್ಲಿಯೇ ಬುಧವಾರ ಸಹಜ ಹೆರಿಗೆಯಾಯಿತು. ಮತದಾನ ಕೇಂದ್ರದಲ್ಲಿಯೇ ಅವರು ಗಂಡು ಮಗುವಿಗೆ ಜನ್ಮ ನೀಡಿದ್ದಾರೆ. ತಾಯಿ ಮಗು ಆರೋಗ್ಯವಾಗಿದ್ದಾರೆ.

'ಚುನಾವಣಾ ಸಿಬ್ಬಂದಿ ಹಾಗೂ ಮತದಾನಕ್ಕೆ ಬಂದಿದ್ದ ಮಹಿಳೆಯರು ಹೆರಿಗೆ ಮಾಡಿಸಲು ಸಹಕರಿಸಿದರು. ತಾಯಿ–ಮಗು ಆರೋಗ್ಯ ಕೇಂದ್ರದಲ್ಲಿದ್ದಾರೆ' ಎಂದು ಸೆಕ್ಟರ್ ಅಧಿಕಾರಿ ವೆಂಕಟೇಶ್ ರಾಮಚಂದ್ರಪ್ಪ ಮಾಹಿತಿ ನೀಡಿದರು.

- ಶಿವಮೊಗ್ಗ ಗ್ರಾಮಾಂತರ ಕ್ಷೇತ್ರ ವ್ಯಾಪ್ತಿಯ ಕನಸಿನಕಟ್ಟೆಯ ಗ್ರಾಮಸ್ಥರು ಮೊಬೈಲ್ ನೆಟ್‌ವರ್ಕ್ ಸಮಸ್ಯೆಯಿಂದ ಬೇಸತ್ತು ಮತದಾನ ಬಹಿಷ್ಕಾರ ಮಾಡಿದರು.
- ಶ್ರೀರಂಗಪಟ್ಟಣ ತಾಲ್ಲೂಕು ಮಜ್ಜಿಗೆಪುರದ ಮತಗಟ್ಟೆಯ ವಿದ್ಯುನ್ಮಾನ ಮತಯಂತ್ರದಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡು 50 ನಿಮಿಷಗಳ ಕಾಲ ಮತದಾನ ಪ್ರಕ್ರಿಯೆ ಸ್ಥಗಿತಗೊಂಡಿತ್ತು.
- ಮತಗಟ್ಟೆಯ ಸುತ್ತಲಿನ 100 ಮೀಟರ್‌ನ ನಿಷೇಧಿತ ಪ್ರದೇಶದಲ್ಲಿ ಪ್ರಚಾರ ಮಾಡುತ್ತಿದ್ದ ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ (ಕೆಆರ್‌ಪಿಪಿ) ಸಂಸ್ಥಾಪಕ ಜನಾರ್ದನ ರೆಡ್ಡಿ ವಿರುದ್ಧ ಬುಧವಾರ ಗಂಗಾವತಿ ನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.
- ಮತದಾನದ ಮಾಹಿತಿ ಪಡೆಯಲು ವರುಣ ಹೋಬಳಿಯ 'ಕಾರ್ಯ' ಗ್ರಾಮಕ್ಕೆ ಬಂದ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಅವರನ್ನು ಕಾಂಗ್ರೆಸ್ ಕಾರ್ಯಕರ್ತರು ತಡೆದರು.
- ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ (ಕೆಆರ್‌ಪಿಪಿ) ಏಜೆಂಟ್ ಗಂಗಾವತಿಯ ವಿಧಾನಸಭಾ ಕ್ಷೇತ್ರದ ಮತಗಟ್ಟೆಯಲ್ಲಿ ಪಕ್ಷದ ಚಿಹ್ನೆಯಾದ ಫುಟ್‌ಬಾಲ್ ಚಿತ್ರದ ಬ್ಯಾಡ್ಜ್ ಹಾಕಿಕೊಂಡಿದ್ದರಿಂದ ಬಿಜೆಪಿ ಮತ್ತು ಕಾಂಗ್ರೆಸ್ ಕಾರ್ಯಕರ್ತರು ಕೆಆರ್‌ಪಿಪಿಯ ಕಾರ್ಯಕರ್ತರ ಜೊತೆ ಜಟಾಪಟಿ ನಡೆಸಿದರು
- ಮೂಡುಬಿದಿರೆ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಿಥುನ್ ರೈ ಅವರ ಕಾರಿನ ಮೇಲೆ ಮಂಗಳೂರಿನ ಹೊರವಲಯದ ಮೂಡುಶೆಡ್ಡೆಯಲ್ಲಿ ಗುರುವಾರ ರಾತ್ರಿ ಕಲ್ಲು ತೂರಾಟ ನಡೆದಿದ್ದು, ಇದರ ಬೆನ್ನಲ್ಲೇ ಬಿಜೆಪಿ ಮತ್ತು ಕಾಂಗ್ರೆಸ್ ಕಾರ್ಯಕರ್ತರ ನಡುವೆ ಘರ್ಷಣೆ ಭುಗಿಲೆದ್ದಿದೆ. ಎರಡು ಪಕ್ಷಗಳ ಕಾರ್ಯಕರ್ತರು ಹೊಡೆದಾಡಿಕೊಂಡಿದ್ದಾರೆ
- ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಮತದಾನಕ್ಕೂ ಮುನ್ನ ಎಡಗೈ ತೋರುಬೆರಳಿಗೆ ಶಾಯಿ ಹಾಕಲು ಮುಂದಾದ ಸಿಬ್ಬಂದಿಗೆ, ಕೈ ನೋವಾಗಿರುವುದನ್ನು ಗಮನಕ್ಕೆ ತಂದರು. ನಂತರ ಬಲಗೈ ತೋರುಬೆರಳಿಗೆ ಶಾಯಿ ಹಾಕಿಸಿಕೊಂಡರು
- ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ಮಲೆಮಹದೇಶ್ವರ ವನ್ಯಧಾಮದ ವ್ಯಾಪ್ತಿಯ ತೋಕೆರೆ ಗ್ರಾಮದಲ್ಲಿ ಬುಧವಾರ ಮಧ್ಯಾಹ್ನ ಮತದಾನ ಮಾಡಿ, ವಾಪಸ್ ಬರುತ್ತಿದ್ದಾಗ ಕಾಡಾನೆ ದಾಳಿಗೆ ತುತ್ತಾಗಿ ಗ್ರಾಮದ ಪುಟ್ಟಸ್ವಾಮಿ (50) ಎಂಬುವವರು ಮೃತಪಟ್ಟರು

ಪ್ರಣಾಳಿಕೆಯಲ್ಲಿ ಘೋಷಿಸಿದ ಭರವಸೆಗಳನ್ನು ಈಡೇರಿಸುವ ಯಾವುದೇ ಪಕ್ಷಕ್ಕಾದರೂ ಬೆಂಬಲ ನೀಡುವೆ. ಸಿದ್ದರಾಮಯ್ಯ ಮುಖ್ಯಮಂತ್ರಿಯಾಗುವ ಸಂದರ್ಭ ಬಂದರೂ ಬೆಂಬಲಿಸುವೆ

ಜನಾರ್ದನ ರೆಡ್ಡಿ, ಸಂಸ್ಥಾಪಕ, ಕೆಆರ್‌ಪಿಪಿ

ರಾತ್ರಿಯಾದರೂ ಮುಗಿಯದ ಮತದಾನ

ರಾಮನಗರ: ಜಿಲ್ಲೆಯ ಕೆಲವು ಮತಗಟ್ಟೆಗಳಲ್ಲಿ ರಾತ್ರಿ 8 ಗಂಟೆಯಾದರೂ ಮತದಾನವು ಮುಂದುವರಿದಿತ್ತು.

ಚನ್ನಪಟ್ಟಣ ನಗರದ ಅಪ್ಪಗೆರೆ ಮತಗಟ್ಟೆಯಲ್ಲಿ 8 ಗಂಟೆಯಾದರೂ ಜನರು ಸರದಿ ಸಾಲಿನಲ್ಲಿ ನಿಂತರು. ಇನ್ನೂ ಮತದಾನ ಮುಗಿಯದ ಕೇಂದ್ರಗಳಿಗೆ ಬಿಜೆಪಿ ಅಭ್ಯರ್ಥಿ ಸಿ.ಪಿ. ಯೋಗೇಶ್ವರ್ ಭೇಟಿ ನೀಡಿ ಪರಿಶೀಲಿಸಿದರು.

ಬೆಳಿಗ್ಗೆ 7ಕ್ಕೆ ಆರಂಭಗೊಂಡ ಮತದಾನವು ಸಂಜೆ 6ಕ್ಕೆ ಮುಗಿದಿದ್ದು, ಅಷ್ಟರ ಒಳಗೆ ಮತಗಟ್ಟೆಗೆ ಬಂದವರಿಗೆ ಅಧಿಕಾರಿಗಳು ಟೋಕನ್ ನೀಡಿ ಮತ ಚಲಾವಣೆಗೆ ಅವಕಾಶ ನೀಡಿದರು. ರಾಮನಗರ ತಾಲ್ಲೂಕಿನ ಮಾದಾಪುರ ಗ್ರಾಮದಲ್ಲಿ ಮತಯಂತ್ರ ನಿಧಾನವಾಗಿದ್ದು, ಈ ಕಾರಣಕ್ಕೆ ಸಂಜೆಯಾದರೂ ಜನರ ಸಾಲು ಕರಗಲಿಲ್ಲ. ಕಡೆಗೆ 75ಕ್ಕೂ ಹೆಚ್ಚು ಮತದಾರರಿಗೆ ಟೋಕನ್ ನೀಡಲಾಯಿತು.

ಸತತ 31ನೇ ಬಾರಿಗೆ ಮೊದಲು ಮತದಾನ ಮಾಡಿದ ಚೆಂಗಪ್ಪ


ಮಿಟ್ಟು ಚೆಂಗಪ್ಪ ಮತ್ತು ಅವರ ಪತ್ನಿ ಯಶಿ ಚೆಂಗಪ್ಪ

ಮಡಿಕೇರಿ: ಮಡಿಕೇರಿಯ ಸಂತಮೈಕಲರ ಶಾಲೆಯ ಮತಗಟ್ಟೆಯಲ್ಲಿ ಮಿಟ್ಟು ಚಂಗಪ್ಪ (81) ಅವರು ಸತತ 31 ನೇ ಬಾರಿಗೆ ಮೊದಲ ಮತದಾರರಾಗಿ ಮತದಾನ ಮಾಡಿದರು.

ಬುಧವಾರ ಬೆಳಿಗ್ಗೆ 6.30ಕ್ಕೆ ಅವರು ಪತ್ನಿ ಯಶಿ ಚೆಂಗಪ್ಪ ಅವರೊಂದಿಗೆ ಬಂದು, 7 ಗಂಟೆಯಾಗುತ್ತಿದ್ದಂತೆ ಮತದಾನ ಮಾಡಿ ಮನೆಗೆ ತೆರಳಿದರು.

'ಮೊದಲ ಮತ ಹಾಕಿದಾಗ ನನಗೆ 21 ವರ್ಷ. ಅಲ್ಲಿಂದ ಇಲ್ಲಿಯವರೆಗೆ ವಿಧಾನಸಭೆ, ಲೋಕಸಭೆ ಹಾಗೂ ವಿವಿಧ ಪಂಚಾಯಿತಿ ಚುನಾವಣೆಗಳಲ್ಲಿ 30 ಬಾರಿ ಸತತವಾಗಿ ಮೊದಲ ಮತದಾರನಾಗಿರುವೆ. ಮತದಾನದ ಕರ್ತವ್ಯವನ್ನು ನಾವು ಮೊದಲು ಮಾಡಬೇಕು' ಎಂದರು.

ಅವರು ಕಾಂಗ್ರೆಸ್ ಪಕ್ಷದಲ್ಲಿ ವಿವಿಧ ಸ್ಥಾನಗಳಲ್ಲಿದ್ದು, ಕೆಲವು ವರ್ಷಗಳಿಂದ ರಾಜಕೀಯದಿಂದ ದೂರವಿದ್ದಾರೆ.

ಟೆಕ್ಸಾಸ್‌ನಿಂದ ಬಂದರೂ ನಿರಾಶೆ

ಕಮಲಾಕರ ಶೆಟ್

ದಾವಣಗೆರೆ: ಮತದಾನದ ಸಲುವಾಗಿಯೇ ಅಮೆರಿಕದ ಟೆಕ್ಸಾಸ್‌ನಿಂದ ತಾಯ್ನಾಡಿಗೆ ಬಂದಿದ್ದ ಸಾಫ್ಟ್‌ವೇರ್ ಎಂಜಿನಿಯರ್ ಒಬ್ಬರು ಮತದಾರರ ಪಟ್ಟಿಯಲ್ಲಿ ಹೆಸರಿಲ್ಲದೇ ನಿರಾಶೆಗೆ ಒಳಗಾದರು.

ದಾವಣಗೆರೆಯ ಎಂಸಿಸಿ 'ಎ' ಬ್ಲಾಕ್‌ನ ನಿವಾಸಿ ರಾಘವೇಂದ್ರ ಕಮಲಾಕರ್ ಶೇಟ್ ಮೂರು ದಿನಗಳ ಹಿಂದೆ ಟೆಕ್ಸಾಸ್‌ನಿಂದ ದಾವಣಗೆರೆಗೆ ಬಂದಿದ್ದಾರೆ. ಮತದಾನಕ್ಕೆಂದೇ ಬುಧವಾರ ಬೆಳಿಗ್ಗೆ ದಾವಣಗೆರೆ ಉತ್ತರ ಕ್ಷೇತ್ರದ ಬಕ್ಕೇಶ್ವರ ಶಾಲೆಯ ಮತಗಟ್ಟೆ ಸಂಖ್ಯೆ- 78ಕ್ಕೆ ತೆರಳಿದಾಗ ಪಟ್ಟಿಯಲ್ಲಿ ಹೆಸರು ಇರಲಿಲ್ಲ. ಅಲ್ಲಿ ವಿಚಾರಿಸಿದಾಗ ವಿಶ್ವಭಾರತಿ ಶಾಲೆಗೆ ಹೋಗಲು ಸಲಹೆ ನೀಡಿದ್ದಾರೆ. ಅಲ್ಲಿಗೆ ಹೋಗಿ ಪರಿಶೀಲಿಸಿದಾಗ ಅಲ್ಲೂ ಹೆಸರು ಇರಲಿಲ್ಲ. ಇದರಿಂದ ನಿರಾಶೆಗೊಂಡು ಸುದ್ದಿಗಾರರೆದುರು ಅಳಲು ತೋಡಿಕೊಂಡರು.

'ಕಳೆದ ನವೆಂಬರ್‌ನಲ್ಲಿ ದಾವಣಗೆರೆಗೆ ಬಂದು ಪರಿಶೀಲಿಸಿದಾಗ ಮತದಾರರ ಪಟ್ಟಿಯಲ್ಲಿ ನನ್ನ ಹೆಸರಿತ್ತು. ಜನವರಿಯಲ್ಲಿ ಮತ್ತೊಮ್ಮೆ ಪರಿಶೀಲಿಸಿದಾಗಲೂ ಹೆಸರು ಇತ್ತು. ಆದರೆ, ವೋಟರ್ ಹೆಲ್ಪ್‌ಲೈನ್‌ನಲ್ಲಿ ಪರಿಶೀಲಿಸಿದಾಗ ಹೆಸರು ತೋರಿಸುತ್ತಿದ್ದು, ವಿವರಗಳು ಕಾಣಿಸಲಿಲ್ಲ' ಎಂದು ನಿರಾಶೆ ವ್ಯಕ್ತಪಡಿಸಿದರು.

ಕೋಳಿ, ಸೀರೆ ಎಸೆದ ಗಂಜಿಗೆರೆ ಜನ

ಕೆ.ಆರ್.ಪೇಟೆ (ಮಂಡ್ಯ ಜಿಲ್ಲೆ): ತಾಲ್ಲೂಕಿನ ಬೂಕನಕೆರೆ ಹೋಬಳಿಯ ಗಂಜಿಗೆರೆ ಗ್ರಾಮದಲ್ಲಿ ಮನೆ ಮುಂದೆ ಬಿಜೆಪಿ ಕಾರ್ಯಕರ್ತರು ಇಟ್ಟು ಹೋಗಿದ್ದ ಕೋಳಿ, ಸೀರೆಗಳನ್ನು ಅದೇ ಕಾರ್ಯಕರ್ತರ ಮನೆಯ ಮುಂದಕ್ಕೆ ಎಸೆದು ಗ್ರಾಮಸ್ಥರು ಬುಧವಾರ ಬೆಳಿಗ್ಗೆ ಪ್ರತಿಭಟಿಸಿದರು.

ಮಂಗಳವಾರ ರಾತ್ರಿ ಬಿಜೆಪಿ ಕಾರ್ಯಕರ್ತರು ಪ್ರತಿ ಮನೆಗೂ ಕೋಳಿ ಹಾಗೂ ಸೀರೆಯನ್ನು ವಿತರಿಸುತ್ತಿದ್ದಾಗ, ಕೆಲವರು ನಿರಾಕರಿಸಿದ್ದರು. ಆದರೂ ಕಾರ್ಯಕರ್ತರು ಮಧ್ಯರಾತ್ರಿ ಮನೆಯ ಮುಂದೆ ಇಟ್ಟು ಹೋಗಿದ್ದರು. ಬೆಳಿಗ್ಗೆ ಅದನ್ನು ಗಮನಿಸಿದ ನಿವಾಸಿಗಳು, ಅವುಗಳನ್ನು ವಿತರಿಸಿದ ಕಾರ್ಯಕರ್ತರ ಮನೆ ಮುಂದೆ ಎಸೆದು ಆಕ್ರೋಶ ವ್ಯಕ್ತಪಡಿಸಿದರು.

'ನಮಗೆ ಸೀರೆ, ಕೋಳಿ ಯಾವುದೂ ಬೇಡ, ಆಮಿಷ ಒಡ್ಡಲು ಬರಬೇಡಿ, ಇಷ್ಟ ಬಂದವರಿಗೆ ಮತ ಹಾಕುತ್ತೇವೆ ಎಂದು ರಾತ್ರಿಯೇ ತಿಳಿಸಿದ್ದೆವು. ಆದರೂ ಮಧ್ಯರಾತ್ರಿಯಲ್ಲಿ ಮನೆ ಮುಂದೆ ಇಟ್ಟು ಹೋಗಿದ್ದಾರೆ. ಹೀಗಾಗಿ ಕೋಳಿ, ಸೀರೆಗಳನ್ನು ಕಾರ್ಯಕರ್ತರ ಮನೆ ಮುಂದೆ ಎಸೆದಿದ್ದೇವೆ, ನಾವು ಮತಗಳನ್ನು ಆಮಿಷಕ್ಕೆ ಮಾರಿಕೊಳ್ಳುವುದಿಲ್ಲ' ಎಂದು ಗಂಜಿಗೆರೆ ಗ್ರಾಮಸ್ಥರು ತಿಳಿಸಿದರು.

ಬಿಜೆಪಿಗೆ ಮತ ಹಾಕಿಸಿದ ಅಧಿಕಾರಿ ವಶಕ್ಕೆ

ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಚಾಮನೂರು ಗ್ರಾಮದಲ್ಲಿ ಬಿಜೆಪಿ ಅಭ್ಯರ್ಥಿ ಪರ ಮಹಿಳೆಯೊಬ್ಬರ ಮತ ಹಾಕಿದ್ದಕ್ಕೆ ಚುನಾವಣಾಧಿಕಾರಿ ಬಿ.ಸಿ. ಚವ್ಹಾಣ ಎಂಬುವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಮಹಿಳೆಯೊಬ್ಬರು ತಮ್ಮ ಆಯ್ಕೆಯ ಅಭ್ಯರ್ಥಿಗೆ ಮತ ಹಾಕಲು ನೆರವು ಕೇಳಿದಾಗ, ಚವ್ಹಾಣ ಆ ಮಹಿಳೆಯ ಇಚ್ಛೆಗೆ ವಿರುದ್ಧವಾಗಿ ಬಿಜೆಪಿ ಬಟನ್ ಒತ್ತಿದರು. ಇದು ಗೊತ್ತಾದ ಕೂಡಲೇ ಮಹಿಳೆ ತಕರಾರು ಮಾಡಿದರು. ಸ್ಥಳಕ್ಕೆ ಭೇಟಿ ನೀಡಿದ ಕಾಂಗ್ರೆಸ್ ಅಭ್ಯರ್ಥಿ ಪ್ರಿಯಾಂಕ್ ಖರ್ಗೆ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ನಂತರ ಚಿತ್ತಾಪುರ ಚುನಾವಣಾಧಿಕಾರಿ ನವೀನ್ ಕುಮಾರ್ ಯು. ಅವರು ಅಧಿಕಾರಿಯನ್ನು ಬದಲಿಸಿದರು.

ಮತ ಹಾಕಿದ ವಿಡಿಯೊ ವೈರಲ್

ಉಡುಪಿ: ಕಾಪು ಹಾಗೂ ಉಡುಪಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮತಗಟ್ಟೆಗಳಲ್ಲಿ ಬಿಜೆಪಿ ಅಭ್ಯರ್ಥಿಗೆ ಮತಹಾಕುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಸುದ್ದಿಯಾಗಿದೆ.

ಕಾಪುವಿನಲ್ಲಿ ಗುರ್ಮೆ ಸುರೇಶ್ ಶೆಟ್ಟಿ ಅವರಿಗೆ ಹಾಗೂ ಉಡುಪಿಯಲ್ಲಿ ಯಶ್‌ಪಾಲ್ ಸುವರ್ಣಗೆ ಮತ ಹಾಕಿರುವ ವಿಡಿಯೊ ಹರಿದಾಡುತ್ತಿರುವುದು ಚರ್ಚೆಗೆ ಕಾರಣವಾಗಿದೆ. ವಿಡಿಯೊ ಬಗ್ಗೆ ಪ್ರತಿಕ್ರಿಯೆ ನೀಡಿರುವ ಜಿಲ್ಲಾಧಿಕಾರಿ ಎಂ.ಕೂರ್ಮಾರಾವ್, ವಿಡಿಯೊ ಅಸಲಿಯೊ ನಕಲಿಯೊ ಎಂಬ ಬಗ್ಗೆ ಪರಿಶೀಲಿಸಲಾಗುವುದು ಎಂದು ತಿಳಿಸಿದರು.

ಗುರುವಾರ, ಮೇ 11, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 130 | ಪುಟ 12

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಜಾವಾಣಿ ಕನ್ನಡ ಸಿರಿ ಸಮ್ಮಾನ

ನಿಮ್ಮ ಅಚ್ಚುಮೆಚ್ಚಿನ ಕಲಾವಿದರನ್ನು ಆಯ್ಕೆ ಮಾಡಿ

QR Code ಸ್ಕ್ಯಾನ್ ಮಾಡಿ

ಆಳ-ಅಗಲ
ಡಾಲರ್ ಪಾರಮ್ಯ ಕಡಿವಾಣಕ್ಕೆ ಯತ್ನ

ಎಡಿಸಿ ನೇಮಕಾತಿಗಳಲ್ಲಿ ಇನ್ನು ಲಿಂಗ ತಾರತಮ್ಯ ಇಲ್ಲ 8

ಬಾವಿಗೆ ಹಾರಿ ಮಗು ರಕ್ಷಿಸಿದ 13ರ ಬಾಲಕಿ! 4

ಸೆನ್ಸೆಕ್ಸ್	ನಿಫ್ಟಿ	₹/$
61,940	18,315	82

2023 ವಿಧಾನಸಭಾ ಚುನಾವಣೆ

ಸಣ್ಣಪುಟ್ಟ ಘರ್ಷಣೆ ಬಿಟ್ಟರೆ ಮತದಾನ ಶಾಂತಿಯುತ • ಬೆಂಗಳೂರಿನಲ್ಲಿ ಮತ್ತೆ ನಿರಾಸಕ್ತಿ • ಮತ ಚಲಾಯಿಸಿ ಹಸೆಮಣೆ ಏರಿದರು

ಸಮೀಕ್ಷೆ ಸಾರ: ಅಧಿಕಾರ 'ಕೈ'ಗೆ ಹತ್ತಿರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತಚಲಾವಣೆಯ ಅವಧಿ ಮುಗಿಯುತ್ತಿದ್ದಂತೆ ವಿವಿಧ ವಿದ್ಯುನ್ಮಾನ ಮಾಧ್ಯಮಗಳು ನಡೆಸಿದ ಮತಗಟ್ಟೆ ಸಮೀಕ್ಷೆ ಪ್ರಕಟವಾಗಿದ್ದು, ರಾಜ್ಯದ ಮತದಾರರು ಕಾಂಗ್ರೆಸ್ ಪಕ್ಷವನ್ನು ಗದ್ದುಗೆಯ ಸನಿಹಕ್ಕೆ ಕರೆದೊಯ್ಯುವ ಸಾಧ್ಯತೆ ಇದೆ ಎಂದು ಹೇಳಿವೆ.

ಲೋಕಸಭೆ ಚುನಾವಣೆಗೆ ಒಂದು ವರ್ಷ ಬಾಕಿ ಇರುವಾಗ ನಡೆದ ಕರ್ನಾಟಕದ ಚುನಾವಣೆಯನ್ನು ಎರಡು ರಾಷ್ಟ್ರೀಯ ಪಕ್ಷಗಳು ಹಾಗೂ ಜೆಡಿಎಸ್ ಪ್ರತಿಷ್ಠೆಯ ಕಣವಾಗಿ ತೆಗೆದುಕೊಂಡಿದ್ದವು. ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ, ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರೆಲ್ಲ ತಮ್ಮದೇ ಚುನಾವಣೆಯಂತೆ ಅದ್ದೂರಿ ಪ್ರಚಾರವನ್ನೂ ನಡೆಸಿದ್ದರು. ರಾಜ್ಯದ ಪ್ರಮುಖ ನಾಯಕರು ಅವರಿಗೆ ಜತೆಯಾಗಿದ್ದರು.

10ಕ್ಕೂ ಹೆಚ್ಚು ಸಂಸ್ಥೆಗಳು ಮತಗಟ್ಟೆ ಸಮೀಕ್ಷೆಯನ್ನು ಆಧರಿಸಿದ ಸಂಭಾವ್ಯ ಫಲಿತಾಂಶವನ್ನು ಪ್ರಕಟಿಸಿದವು. ಕಾಂಗ್ರೆಸ್ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಲಿದೆ ಎಂಬುದು ಬಹುತೇಕ ಸಮೀಕ್ಷೆಗಳು ಹೇಳಿವೆ. ಒಂದೆರಡು ಸಮೀಕ್ಷೆಗಳು ಬಿಜೆಪಿಯನ್ನು 117ರ ಗಡಿಗೆ ಮುಟ್ಟಿಸಿವೆ. ಈ ಸಮೀಕ್ಷೆಗಳು ಕೂಡ ಕಾಂಗ್ರೆಸ್‌ನ ಸಾಧನೆಯನ್ನು 100ರ ಅಂಚಿನಿಂದ ಕೆಳಗೆ ಇಳಿಸಿಲ್ಲ. ಎಲ್ಲ ಸಮೀಕ್ಷೆಗಳು ಜೆಡಿಎಸ್ ಸಾಧನೆ ಒಂದೇ ರೀತಿ ಇರುವುದಾಗಿ ಹೇಳಿವೆ. 20–32 ಸ್ಥಾನಗಳನ್ನು ಜೆಡಿಎಸ್ ಗೆಲ್ಲಬಹುದು ಎಂದು ಉಲ್ಲೇಖಿಸಿವೆ. ಹೀಗಾದಲ್ಲಿ ಸ್ವತಂತ್ರ ಸರ್ಕಾರ ಬರುವ ಸಾಧ್ಯತೆಯನ್ನು ಸಮೀಕ್ಷೆಗಳು ನಿಚ್ಚಳವಾಗಿ ಅಲ್ಲಗಳೆದಿವೆ.

ಮತದಾರರನ್ನು ಮತಗಟ್ಟೆಗೆ ಕರೆತರಲು ಚುನಾವಣಾ ಆಯೋಗ, ರಾಜಕೀಯ ಪಕ್ಷಗಳು ಶತಾಯಗತಾಯ ಪ್ರಯತ್ನ ಪಟ್ಟರೂ ಕರ್ನಾಟಕದ ಮತದಾರರು ಚುನಾವಣೆ ರಾಜಕೀಯದ ಬಗ್ಗೆ ಅಷ್ಟಾಗಿ ಒಲವು ತೋರಿಸಿಲ್ಲ. ಮತ ಚಲಾವಣೆಯ ಪ್ರಮಾಣ 2018ನೇ ಸಾಲಿಗಿಂತ ಸ್ವಲ್ಪ ಜಿಗಿದಿದೆ. ರಾಜ್ಯದಾದ್ಯಂತ ಶೇ 72.67ರಷ್ಟು ಮತದಾನವಾಗಿದೆ. ಬೆಂಗಳೂರಿನಲ್ಲಿ 2018ರಂತೆ ಈ ಬಾರಿಯೂ ಮತದಾನ ಪ್ರಮಾಣ ಇಳಿಕೆಯಾಗಿದ್ದು, ಶೇ 54.53 ರಷ್ಟು ಮತದಾನವಾಗಿದೆ.

ಕೆಲವು ಕಡೆಗಳಲ್ಲಿ ಸಣ್ಣಪುಟ್ಟ ಘರ್ಷಣೆ, ಹಲ್ಲೆ ನಡೆದ ಪ್ರಕರಣಗಳು, ಗುಂಪು ಘರ್ಷಣೆ ತಪ್ಪಿಸಲು ಲಾಠಿ ಚಾರ್ಜ್ ನಡೆದ ವರದಿಯಾಗಿದೆ. ವಿದ್ಯುನ್ಮಾನ ಮತಯಂತ್ರ ಕೈ ಕೊಟ್ಟಿರುವ ಕಾರಣಕ್ಕೆ ಮತ ಚಲಾವಣೆ ವಿಳಂಬ, ಮತಯಂತ್ರಗಳನ್ನು ಧ್ವಂಸ ಮಾಡಿದ ಪ್ರಕರಣಗಳನ್ನು ಬಿಟ್ಟರೆ ಬಹುತೇಕ ಕಡೆಗಳಲ್ಲಿ ಶಾಂತಿಯುತವಾಗಿ ಮತ ಚಲಾವಣೆಯಾಗಿದೆ.

ಬೆಂಗಳೂರಿನ ಕೆ.ಎಚ್‌.ಸಿ.ಎಸ್ ಬಡಾವಣೆಯ ಮತಗಟ್ಟೆಯೊಂದರಲ್ಲಿ ಬುಧವಾರ ಮೊದಲ ಬಾರಿಗೆ ಮತ ಚಲಾಯಿಸಿದ ಯುವತಿಯರು –ಪ್ರಜಾವಾಣಿ ಚಿತ್ರ/ರಂಜು ಪಿ

ಮತದಾನೋತ್ತರ ಸಮೀಕ್ಷೆ ಶೇ 100ರಷ್ಟು ಸರಿಯಾಗಿ ಆಗುವುದಿಲ್ಲ. ಮೇ 13ರವರೆಗೆ ಕಾಯೋಣ. ನಮಗೇ ಸಂಪೂರ್ಣ ಬಹುಮತ ಬರಲಿದೆ
ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಭ್ರಷ್ಟ ಬಿಜೆಪಿ ಸರ್ಕಾರದಿಂದ ಕಳಂಕ ಬಂದಿತ್ತು. ಅದು ತೊಲಗುವ ಸಮಯ ಬಂದಿದೆ. ನಮಗೆ ಬಹುಮತ ಸಿಗುವುದು ನಿಶ್ಚಿತವಾಗಿದೆ
ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ನಿರೀಕ್ಷಿತ ಮಟ್ಟದಲ್ಲಿ ಹಣ ಸಂಗ್ರಹವಾಗದೆ, ಕೊರತೆಯಾಗಿ 25 ಕ್ಷೇತ್ರಗಳಲ್ಲಿ ಹಿನ್ನಡೆಯಾಗಲಿದೆ. ಗೆಲ್ಲುವ ಕ್ಷೇತ್ರಗಳಲ್ಲಿ ಪೆಟ್ಟು ತಿಂದಿದ್ದೇವೆ
ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

224 ಒಟ್ಟು ಕ್ಷೇತ್ರಗಳು

113 ಸರ್ಕಾರ ರಚನೆಗೆ ಬೇಕಾದ ಸಂಖ್ಯೆ

ಮತದಾನದ ಪ್ರಮಾಣ (%)

2018	2023
72.36	72.67*

* ರಾತ್ರಿ 12:30ರ ಮಾಹಿತಿ

- ಬಸವನಬಾಗೇವಾಡಿ ತಾಲ್ಲೂಕಿನ ಮಸಬಿನಾಳ ಗ್ರಾಮದ ಮತಗಟ್ಟೆ ಬಳಿ ಅಧಿಕಾರಿಗಳ ಕಾರಿನಲ್ಲಿದ್ದ ಮತಯಂತ್ರಗಳನ್ನು ಒಡೆದು ಹಾಕಿ ಕಾರು ಉರುಳಿಸಿದ ಗ್ರಾಮಸ್ಥರು
- ವಾಡಿಯಲ್ಲಿ ಮತದಾನ ಪ್ರಕ್ರಿಯೆ ವೇಳೆ ಬುಧವಾರ ಚಿತ್ತಾಪುರ ತಾಲ್ಲೂಕಿನ ಚಾಮನೂರು ಗ್ರಾಮದಲ್ಲಿ ಚುನಾವಣಾ ಅಧಿಕಾರಿಯೊಬ್ಬರು ಮತದಾರರ ಪರವಾಗಿ ಬಿಜೆಪಿ ಪರ ಬಟನ್ ಒತ್ತಿದ್ದರಿಂದ ಕೆಲ ಹೊತ್ತು ಉದ್ವಿಗ್ನ ಪರಿಸ್ಥಿತಿ ನಿರ್ಮಾಣ

2023– ಯಾವ ಸಮೀಕ್ಷೆಯಲ್ಲಿ ಎಷ್ಟು ಸ್ಥಾನ?

ಸಮೀಕ್ಷೆ	ಬಿಜೆಪಿ	ಕಾಂಗ್ರೆಸ್	ಜೆಡಿಎಸ್	ಇತರರು
ಜೀ ನ್ಯೂಸ್ ಮ್ಯಾಟ್ರಿಜ್	79-94	103-118	25-33	02-05
ಇಂಡಿಯಾ ಟುಡೇ	62-80	122-140	20-25	0-03
ಝಿ ನ್ಯೂಸ್	79-94	103-118	25-33	02-05
ಟುಡೇಸ್ ಚಾಣಕ್ಯ	92	120	12	03
ಟೈಮ್ಸ್ ನೌ	85	113	23	03
ಟಿವಿ9 ಕನ್ನಡ ಸಿವೋಟರ್	83-95	100-112	21-29	02-06
ಸುವರ್ಣ ನ್ಯೂಸ್	94-117	91-106	14-24	00-02
ಪಿ–ಮಾರ್ಕ್ಯು ರಿಪಬ್ಲಿಕ್	85-100	94-108	24-32	02-06

2018ರ ಚುನಾವಣೆಯ ಮತಗಟ್ಟೆ ಸಮೀಕ್ಷೆ

ಸಮೀಕ್ಷೆ	ಬಿಜೆಪಿ	ಕಾಂಗ್ರೆಸ್	ಜೆಡಿಎಸ್
ಎಬಿಪಿ–ಸಿ ವೋಟರ್	97-109	87-99	21-30
ಟೈಮ್ಸ್ ನೌ–ವಿಎಂಆರ್	80-93	90-103	31-39
ಇಂಡಿಯಾಟುಡೇ–ಆ್ಯಕ್ಸಿಸ್ ಮೈ ಇಂಡಿಯಾ	79-82	106-118	22-30
ನ್ಯೂಸ್ ಎಕ್ಸ್	102-110	72-78	35-39
ರಿಪಬ್ಲಿಕ್–ಜನ್‌ಕಿ ಬಾತ್	95-114	73-82	32-43
ಫಲಿತಾಂಶ	104	78	37

2018ರ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ 224ರ ಪೈಕಿ 222 ಕ್ಷೇತ್ರಗಳಿಗೆ ಮೇ 12ರಂದು ಮತದಾನ ನಡೆದಿತ್ತು. ಮತದಾನ ಮುಗಿದ ಬಳಿಕ ವಿವಿಧ ಸಂಸ್ಥೆಗಳು ಮತಗಟ್ಟೆ ಸಮೀಕ್ಷೆ ಪ್ರಕಟಿಸಿದ್ದವು. ಈ ಪೈಕಿ ರಿಪಬ್ಲಿಕ್–ಜನ್‌ಕಿ ಬಾತ್, ಎಬಿಪಿ–ಸಿ ವೋಟರ್ ಹಾಗೂ ನ್ಯೂಸ್ ಎಕ್ಸ್ ಸಮೀಕ್ಷೆಗಳ ಭವಿಷ್ಯ ಬಹುತೇಕ ನಿಜವಾಗಿತ್ತು. ರಿಪಬ್ಲಿಕ್–ಜನ್‌ಕಿ ಬಾತ್ ಸಮೀಕ್ಷೆಯು ಬಿಜೆಪಿಗೆ ಬಹುಮತ ನೀಡಿತ್ತು. ಇಂಡಿಯಾಟುಡೇ–ಆ್ಯಕ್ಸಿಸ್ ಮೈ ಇಂಡಿಯಾ ಸಮೀಕ್ಷೆಯು ಕಾಂಗ್ರೆಸ್‌ಗೆ ಬಹುಮತ ನೀಡಿತ್ತು. ಆದರೆ ಯಾವ ಪಕ್ಷಕ್ಕೂ ಬಹುಮತ ಸಿಕ್ಕಿರಲಿಲ್ಲ.

ಮಾತೃತ್ವದ ಪರಿಕಲ್ಪನೆ ದಾಟಿದ ದೇಶ: 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ನವದೆಹಲಿ : 'ವೈವಾಹಿಕ ಸ್ಥಾನ ಮಾನ ಏನೇ ಇದ್ದರೂ, ವ್ಯಕ್ತಿಯೊಬ್ಬ ಮಗು ದತ್ತು ತೆಗೆದುಕೊಳ್ಳಲು ಭಾರತೀಯ ಕಾನೂನು ಅವಕಾಶ ನೀಡುತ್ತದೆ. ದೇಶ ಈಗ ಮಾತೃತ್ವದ ಪರಿಕಲ್ಪನೆಯನ್ನು ದಾಟಿ ಮುಂದಕ್ಕೆ ಸಾಗಿದೆ' ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ. 8

ಇಮ್ರಾನ್ ಖಾನ್ ಎನ್‌ಎಬಿ ವಶಕ್ಕೆ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರನ್ನು ಪಾಕಿಸ್ತಾನದ ಕೋರ್ಟ್ ಎಂಟು ದಿನಗಳ ಕಾಲ ರಾಷ್ಟ್ರೀಯ ಭ್ರಷ್ಟಾಚಾರ ನಿಗ್ರಹ ದಳದ (ಎನ್‌ಎಬಿ) ವಶಕ್ಕೆ ಒಪ್ಪಿಸಿದೆ. ದುಬಾರಿ ಉಡುಗೊರೆಗಳನ್ನು ಲಾಭಕ್ಕಾಗಿ ಮಾರಾಟ ಮಾಡಿದ 'ತೋಶಾಖಾನಾ' ಭ್ರಷ್ಟಾಚಾರ ಪ್ರಕರಣದಲ್ಲಿ ಖಾನ್ ವಿರುದ್ಧ ಇಲ್ಲಿನ ಜಿಲ್ಲಾ ಮತ್ತು ಸೆಷನ್ಸ್ ಕೋರ್ಟ್‌ಗೆ ಪ್ರತ್ಯೇಕ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. 9

ಒಳ ಪುಟಗಳು

ಪ್ರಮುಖ ಬೀದಿ: ಎಂ.ಜಿ. ರಸ್ತೆಗೆ ಮೊದಲ ಸ್ಥಾನ 4
ವಾಟ್ಸ್‌ಆ್ಯಪ್‌ನಿಂದ ಖಾಸಗಿತನ ಉಲ್ಲಂಘನೆ: ಕೇಂದ್ರ ಪರಿಶೀಲನೆ 8

ಚಿನಕುರಳಿ

ಪ್ರಕಾಶ್ ಶೆಟ್ಟಿ

ಸಿಡೇದಹಳ್ಳಿ ಭಟ್ರು ಹೋಟೆಲ್ ವತಿಯಿಂದ ಉಚಿತವಾಗಿ ಕೇಸರಿಬಾತ್ ವಿತರಿಸಲಾಯಿತು

ತಿಂಡಿ ವಿತರಿಸಿ ಮತದಾನ ಜಾಗೃತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತ ಚಲಾಯಿಸಿ, ಶಾಹಿ ಗುರುತು ತೋರಿಸಿದವರಿಗೆ ನಗರದ ಕೆಲ ಹೋಟೆಲ್‌ಗಳಲ್ಲಿ ತಿಂಡಿ ವಿತರಣೆ ಮಾಡಲಾಯಿತು.

ನೃಪತುಂಗ ರಸ್ತೆಯಲ್ಲಿರುವ ನಿಸರ್ಗ ಗ್ರ್ಯಾಂಡ್, ಕೇಕ್ ವಾಲಾ, ಚಾಲುಕ್ಯ ಸಾಮ್ರಾಟ್, ಐಸಿರಿ, ಭಟ್ರು ಹೋಟೆಲ್, ಇಡ್ಲಿ ಗುರು ಸೇರಿ ಕೆಲ ಹೋಟೆಲ್‌ಗಳಲ್ಲಿ ತಿಂಡಿಗಳನ್ನು ಉಚಿತ ಹಾಗೂ ರಿಯಾಯಿತಿ ದರದಲ್ಲಿ ವಿತರಣೆ ಮಾಡಲಾಯಿತು. ಮತ ಚಲಾಯಿಸಿದವರು ಸರದಿಯಲ್ಲಿ ನಿಂತು ತಿನಿಸುಗಳನ್ನು ಸವಿದರು.

ನಿಸರ್ಗ ಗ್ರ್ಯಾಂಡ್ ಹೋಟೆಲ್‌ನಲ್ಲಿ ಸಾವಿರಾರು ಸಂಖ್ಯೆಯಲ್ಲಿ ಜನ ಸೇರಿದ್ದರು. ಅಲ್ಲಿ ಬೆಣ್ಣೆ ಖಾಲಿ ದೋಸೆ, ಮೈಸೂರು ಪಾಕ್ ಹಾಗೂ ತಂಪು ಪಾನಿಯವನ್ನು ವಿತರಣೆ ಮಾಡಲಾಯಿತು. ಸಾಹಿತಿ ದೊಡ್ಡರಂಗೇಗೌಡ, ನಟ ರಮೇಶ್ ಭಟ್, ಬೃಹತ್ ಬೆಂಗಳೂರು ಹೋಟೆಲುಗಳ ಸಂಘದ ಅಧ್ಯಕ್ಷ ಪಿ.ಸಿ.ರಾವ್ ಸೇರಿ ವಿವಿಧ ಕ್ಷೇತ್ರಗಳ ಪ್ರಮುಖರು ಭಾಗವಹಿಸಿ, ಹೋಟೆಲ್ ಮಾಲೀಕ ಕೃಷ್ಣರಾಜ ಎಸ್.ಪಿ. ಅವರ ಕಾರ್ಯವನ್ನು ಶ್ಲಾಘಿಸಿದರು. ಎಚ್‌ಎಸ್‌ಆರ್ ಲೇಔಟ್‌ನಲ್ಲಿರುವ ಇಡ್ಲಿ ಗುರು ಹೋಟೆಲ್‌ನಲ್ಲಿ ₹ 100ರ ಮಸಾಲೆ ದೋಸೆಯನ್ನು ಕೇವಲ ₹ 10ಕ್ಕೆ ವಿತರಿಸಲಾಯಿತು.

ನಗರದಲ್ಲಿ ಮತದಾನದ ಬಗ್ಗೆ ಜಾಗೃತಿ ಮೂಡಿಸಲು ವಿವಿಧ ಹೋಟೆಲ್‌ಗಳು ಉಚಿತವಾಗಿ ತಿಂಡಿ ವಿತರಿಸುವುದಾಗಿ ಘೋಷಿಸಿದ್ದವು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದ ಬಿಬಿಎಂಪಿ, ಚುನಾವಣೆ ನೀತಿ ಸಂಹಿತೆ ಉಲ್ಲಂಘನೆಯಾಗಲಿದೆ ಎಂದು ಮಂಗಳವಾರ ಎಚ್ಚರಿಕೆ ನೀಡಿತ್ತು. ಉಚಿತವಾಗಿ ತಿಂಡಿ ವಿತರಿಸಿದಲ್ಲಿ ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಹೇಳಿತ್ತು. ಇದನ್ನು ಪ್ರಶ್ನಿಸಿ ಹೋಟೆಲ್ ಮಾಲೀಕರ ಸಂಘಟನೆ ಹೈಕೋರ್ಟ್ ಮೆಟ್ಟಿಲೇರಿತ್ತು. ಉಚಿತ ಹಾಗೂ ರಿಯಾಯಿತಿ ದರದಲ್ಲಿ ತಿಂಡಿ ನೀಡಲು ಹೈಕೋರ್ಟ್ ಸಮ್ಮತಿ ನೀಡಿತ್ತು. ಇದರಿಂದಾಗಿ ಕೆಲವೆಡೆ ವಿವಿಧ ತಿನಿಸುಗಳನ್ನು ವಿತರಿಸಿ, ಮತದಾನದ ಬಗ್ಗೆ ಜಾಗೃತಿ ಮೂಡಿಸಲಾಯಿತು.

'ನಾವು ರಾಜಕೀಯ ದೃಷ್ಟಿಯಿಂದ ತಿಂಡಿ ತಿನಿಸುಗಳನ್ನು ವಿತರಿಸಿಲ್ಲ. ಮತದಾನದ ಬಗ್ಗೆ ಜಾಗೃತಿ ಮೂಡಿಸುವುದು ನಮ್ಮ ಉದ್ದೇಶ. ಉದ್ಯಮಿಗಳಾದ ನಾವು ಯಾವುದೇ ಪಕ್ಷಕ್ಕೆ ಸೀಮಿತವಾಗಿಲ್ಲ. ತಮ್ಮ ಕಾರ್ಯವನ್ನು ತಪ್ಪಾಗಿ ತಿಳಿದು, ಬಿಬಿಎಂಪಿ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿತ್ತು. ಕೋರ್ಟ್‌ನಲ್ಲಿ ನಮಗೆ ಅವಕಾಶ ನೀಡಿದ್ದರಿಂದ ವಿವಿಧ ಹೋಟೆಲ್ ಮಾಲೀಕರು ತಿನಿಸುಗಳನ್ನು ಉಚಿತ ಹಾಗೂ ರಿಯಾಯಿತಿ ದರದಲ್ಲಿ ವಿತರಿಸಿ, ಮತದಾನದ ಬಗ್ಗೆ ಜಾಗೃತಿ ಮೂಡಿಸಿದರು' ಎಂದು ಬೃಹತ್ ಬೆಂಗಳೂರು ಹೋಟೆಲುಗಳ ಸಂಘದ ಅಧ್ಯಕ್ಷ ಪಿ.ಸಿ.ರಾವ್ ತಿಳಿಸಿದರು.

1.ಕೆನರಾ ಬ್ಯಾಂಕ್ ನಿವೃತ್ತ ವ್ಯವಸ್ಥಾಪಕ ಎಚ್‌.ಡಿ. ಪ್ರಸನ್ನಕುಮಾರ್ ಅವರು ವ್ಹೀಲ್‌ಚೇರ್‌ನಲ್ಲಿ ಮತಗಟ್ಟೆಗೆ ಬಂದು ಮತ ಚಲಾಯಿಸಿದರು 2. ಪಾದರಾಯನಪುರ ಮತಗಟ್ಟೆಯಲ್ಲಿ ಮಗುವಿನ ಸಮೇತ ಬಂದು ಬಾಣಂತಿಯೊಬ್ಬರು ಹಕ್ಕು ಚಲಾಯಿಸಿದರು 3. ಚಾಮರಾಜಪೇಟೆಯ ಹೊಯ್ಸಳ ಕಲ್ಯಾಣ ಮಂಟಪ ಮತಗಟ್ಟೆ ಎದುರು ಇರಿಸಿದ್ದ ಕಥಕ್ಕಳಿ ಗೊಂಬೆಯನ್ನು ಮತದಾರರು ಕುತೂಹಲದಿಂದ ವೀಕ್ಷಿಸಿದರು – ಪ್ರಜಾವಾಣಿ ಚಿತ್ರ

ಹಲವು ಮತಗಟ್ಟೆಗಳಲ್ಲಿ ಜನರ ಸರದಿ: ಕೆಲವೆಡೆ ನೀರಸ • ಮತದಾರರಿಗಾಗಿ ಕಾದು ಕುಳಿತಿದ್ದ ಸಿಬ್ಬಂದಿ

ದಕ್ಷಿಣ – ಕೇಂದ್ರದಲ್ಲಿ ಮತದಾನ ನಿರುತ್ಸಾಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ದಕ್ಷಿಣ ಹಾಗೂ ಕೇಂದ್ರ ವ್ಯಾಪ್ತಿಯ ವಿಧಾನಸಭಾ ಕ್ಷೇತ್ರಗಳಲ್ಲಿ ಮತದಾನ ಪ್ರಮಾಣ ಕಡಿಮೆಯಾಗಿದ್ದು, ಬುಧವಾರ ಬೆಳಿಗ್ಗೆಯಿಂದ ಸಂಜೆಯವರೆಗೂ ಮತದಾರರಿಂದ ನಿರುತ್ಸಾಹ ವ್ಯಕ್ತವಾಯಿತು.

ಜಯನಗರ, ಬಿಟಿಎಂ ಬಡಾವಣೆ, ಬಸವನಗುಡಿ, ಗೋವಿಂದರಾಜನಗರ, ಪದ್ಮನಾಭನಗರ, ವಿಜಯನಗರ ಹಾಗೂ ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರಗಳ ಬಹುತೇಕ ಮತಗಟ್ಟೆಗಳಲ್ಲಿ ಜನರು ಸರದಿಯಲ್ಲಿ ನಿಂತು ಮತ ಚಲಾಯಿಸಿದರು.

ಚಿಕ್ಕಪೇಟೆ, ಚಾಮರಾಜಪೇಟೆ, ಗಾಂಧಿನಗರ, ರಾಜಾಜಿನಗರ, ರಾಜರಾಜೇಶ್ವರಿನಗರ, ಶಾಂತಿನಗರ ಹಾಗೂ ಶಿವಾಜಿನಗರ ಕ್ಷೇತ್ರದ ಮತಗಟ್ಟೆಗಳಲ್ಲೂ ಮತದಾರರ ಸರದಿ ಕಂಡುಬಂತು.

ಆರ್ಥಿಕವಾಗಿ ಹಿಂದುಳಿದವರು ಹಾಗೂ ಮಧ್ಯಮ ವರ್ಗದ ಜನರು ವಾಸವಿರುವ ಪ್ರದೇಶಗಳ ಮತಗಟ್ಟೆಗಳಲ್ಲಿ ಜನರು ಕಿಕ್ಕಿರಿದು ಸೇರಿದ್ದರು. ಇಂಥ ಮತಗಟ್ಟೆಗಳ 200 ಮೀಟರ್ ಹೊರಗೆ ಹಾಗೂ ಒಳಗೆ ಹೆಚ್ಚಿನ ಸಂಖ್ಯೆಯಲ್ಲಿ ಜನರಿದ್ದರು. ಗುಂಪು ಗುಂಪಾಗಿ ಬಂದ ಜನ, ತಮ್ಮ ಹಕ್ಕು ಚಲಾಯಿಸಿ ಖುಷಿಯಿಂದ ಸೆಲ್ಫಿ ಕ್ಲಿಕ್ಕಿಸಿಕೊಂಡರು.

ಸುಸಜ್ಜಿತ ಬಡಾವಣೆ, ಕೆಲ ಅಪಾರ್ಟ್‌ಮೆಂಟ್ ಸಮುಚ್ಚಯ ಹಾಗೂ ಇತರೆ ಪ್ರದೇಶಗಳಲ್ಲಿರುವ ಮತಗಟ್ಟೆಗಳಲ್ಲಿ ಜನರ ಸಂಖ್ಯೆ ಕಡಿಮೆ ಇದ್ದ ದೃಶ್ಯಗಳು ಕಂಡುಬಂದವು. 'ಸರದಿಯಲ್ಲಿ ಯಾರು ನಿಲ್ಲುತ್ತಾರೆ ಎಂದು ಪ್ರಶ್ನಿಸಿ, ಪಕ್ಕದ ಮನೆಯವರು ಮತದಾನಕ್ಕೆ ಬರಲಿಲ್ಲ' ಎಂದು ಪದ್ಮನಾಭನಗರ ಕ್ಷೇತ್ರದ ನಿವಾಸಿ ರುಕ್ಮಿಣಿ ಹೇಳಿದರು.

ಪ್ರಜಾ ಮತ – ಜನತಂತ್ರದ ಹಬ್ಬ – ಕರ್ನಾಟಕ ವಿಧಾನಸಭಾ ಚುನಾವಣೆ - 2023

ಜನ್ಮದಿನದಂದು ವ್ಹೀಲ್‌ಚೇರ್‌ನಲ್ಲಿ ಬಂದು ಮತದಾನ

ಕೆನರಾ ಬ್ಯಾಂಕ್‌ನ ನಿವೃತ್ತ ವ್ಯವಸ್ಥಾಪಕ ಎಚ್‌.ಡಿ. ಪ್ರಸನ್ನಕುಮಾರ್ (64) ಅವರು ತಮ್ಮ ಜನ್ಮದಿನದ ಸಂಭ್ರಮದಲ್ಲಿಯೇ ಮತಗಟ್ಟೆಗೆ ವ್ಹೀಲ್‌ಚೇರ್‌ನಲ್ಲಿ ಬಂದು ಮತ ಚಲಾಯಿಸಿದರು.

ಬನಶಂಕರಿ 2ನೇ ಹಂತದ ನಿವಾಸಿ ಪ್ರಸನ್ನಕುಮಾರ್, ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಪತ್ನಿ ಎಂ.ಸಿ. ರಜನಿ ಹಾಗೂ ಮಾವ ಎಂ.ಬಿ. ಚನ್ನಕೇಶವ್ ಜೊತೆ ಪದ್ಮನಾಭನಗರ ಕ್ಷೇತ್ರದ ಅರಬಿಂದೊ ಮೆಮೊರಿಯಲ್ ಶಾಲೆಯ ಮತಗಟ್ಟೆಯಲ್ಲಿ ಮತ ಹಾಕಿದರು. ಎಂ.ಬಿ. ಚನ್ನಕೇಶ್ ಅವರಿಗೂ 85 ವರ್ಷ ವಯಸ್ಸು. ಅಳಿಯ ಹಾಗೂ ಮಗಳನ್ನು ಕಾರಿನಲ್ಲಿ ಕೂರಿಸಿಕೊಂಡು ತಾವೇ ಚಲಾಯಿಸಿಕೊಂಡು ಮತಗಟ್ಟೆ ಬಂದಿದ್ದರು.

ಅಮೆರಿಕದಿಂದ ಬಂದು ಮತದಾನ

ಅಮೆರಿಕದ ಕಂಪನಿಯೊಂದರಲ್ಲಿ ಉದ್ಯೋಗದಲ್ಲಿರುವ ಮೇಘನಾ, ಮತದಾನಕ್ಕೆಂದು ಇತ್ತೀಚೆಗೆ ನಗರಕ್ಕೆ ಬಂದಿದ್ದಾರೆ. ಬಸವನಗುಡಿ ವಿಧಾನಸಭಾ ಕ್ಷೇತ್ರದ ಮತಗಟ್ಟೆಯಲ್ಲಿ ಸರದಿಯಲ್ಲಿ ನಿಂತು ಮೇಘನಾ ತಮ್ಮ ಮತ ಚಲಾಯಿಸಿದರು.

'ಮತದಾನ ನಮ್ಮ ಹಕ್ಕು. ಅದನ್ನು ತಪ್ಪಿಸಿಕೊಳ್ಳಬಾರದು. ಈ ಹಿಂದೆಯೂ ಮತದಾನಕ್ಕೆಂದು ಅಮೆರಿಕದಿಂದ ಬಂದಿದ್ದೆ. ಈ ಬಾರಿಯೂ ಬಂದು ಮತದಾನ ಮಾಡಿದೆ' ಎಂದು ಮೇಘನಾ ಹೇಳಿದರು.

ಮತಗಟ್ಟೆಗಳಲ್ಲಿ ಬೆಳಿಗ್ಗೆ ಮತದಾರರ ಸಂಖ್ಯೆ ತೀರಾ ಕಡಿಮೆ ಇತ್ತು. ಮಧ್ಯಾಹ್ನ 12ರ ನಂತರವೇ ಹೆಚ್ಚು ಜನ ಮತಗಟ್ಟೆಯತ್ತ ಬಂದರು. ಸಂಜೆ ಹೆಚ್ಚು ಮತದಾನವಾಯಿತು.

ಸುದ್ದಗುಂಟೆಪಾಳ್ಯದ ಮತಗಟ್ಟೆಗಳಲ್ಲಿ ಗರ್ಭಿಣಿಯರು ಹಾಗೂ ಮಗುವಿನ ಜೊತೆ ಬಾಣಂತಿಯರು ಮತಗಟ್ಟೆಗಳಿಗೆ ಬಂದು ಮತ ಚಲಾಯಿಸಿದರು. ಅವರಿಗೆ ಹಾಗೂ ಹಿರಿಯ ನಾಗರಿಕರು, ಅಂಗವಿಕಲರಿಗೆ ಮತಗಟ್ಟೆ ಕೊಠಡಿಗಳಿಗೆ ನೇರ ಪ್ರವೇಶ ಕಲ್ಪಿಸಲಾಗಿತ್ತು.

ಕೈಕೊಟ್ಟ ವಿದ್ಯುತ್: ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದ ರಾಜರಾಜೇಶ್ವರಿ ವಿದ್ಯಾಲಯದ ಮತಗಟ್ಟೆಗಳಲ್ಲಿ ವಿದ್ಯುತ್ ಕೈ ಕೊಟ್ಟಿತ್ತು. ಮತದಾನದ ಗೌಪ್ಯತೆ ಕಾಪಾಡುವುದಕ್ಕಾಗಿ ಕೊಠಡಿ ಬಾಗಿಲುಗಳನ್ನು ಬಂದ್ ಮಾಡಿದ್ದರಿಂದ, ಮತದಾರರು ಕತ್ತಲಿನಲ್ಲಿ ಮತದಾನ ಮಾಡಿದರು. 40 ನಿಮಿಷಗಳ ನಂತರ, ವಿದ್ಯುತ್ ಪೂರೈಕೆಯಾಯಿತು.

ಕಳೆ ಇಲ್ಲದ 'ಸಖಿ' ಮತಗಟ್ಟೆ: ಮಹಿಳಾ ಸಿಬ್ಬಂದಿ ಒಳಗೊಂಡು ಸಖಿ ಪಿಂಕ್ ಮತಗಟ್ಟೆಗಳನ್ನು ತೆರೆಯಲಾಗಿತ್ತು. ಬಹುತೇಕ ಸಖಿ ಮತಗಟ್ಟೆಗಳನ್ನು ಗಮನಸೆಳೆಯದ ರೀತಿಯಲ್ಲಿ ನಿರ್ಮಿಸಲಾಗಿತ್ತು. ಹೊರಭಾಗದಲ್ಲಿ ಪಿಂಕ್ ಸೀರೆ ಹಾಗೂ ಬಲೂನ್ ಮಾತ್ರ ನೇತು ಹಾಕಲಾಗಿತ್ತು. ಜೊತೆಗೆ, ಮಹಿಳಾ ಸಿಬ್ಬಂದಿ ಒಂದೇ ತೆರನಾದ ಸೀರೆ ಬದಲು ತರಹೇವಾರಿ ಉಡುಪು ಧರಿಸಿದ್ದರು.

'ಸಖಿ' ಮತಗಟ್ಟೆ ಸಮೀಪದ 100 ಮೀಟರ್ ಅಂತರದಲ್ಲಿ ತಮ್ಮ ಪಕ್ಷದ ಅಭ್ಯರ್ಥಿ ಪರ ಮತಯಾಚಿಸಲು ನಿಂತಿದ್ದ ಮಹಿಳಾ ಕಾರ್ಯಕರ್ತೆಯರು, ಒಂದೇ ತೆರನಾದ ಸೀರೆಯುಟ್ಟು ಗಮನ ಸೆಳೆದರು.

ಹೆಸರು ನಾಪತ್ತೆ: ಮತದಾರರ ಆಕ್ರೋಶ

ಜಯನಗರ ವಿಧಾನಸಭಾ ಕ್ಷೇತ್ರದ ಜೆ.ಪಿ. ನಗರ 5ನೇ ಹಂತದಲ್ಲಿರುವ ಸಂವೇದ್ ಶಾಲೆ ಮತಗಟ್ಟೆಯ ಮತದಾರರ ಪಟ್ಟಿಯಲ್ಲಿ ಹಲವು ಮತದಾರರ ಹೆಸರುಗಳನ್ನು ಅಳಿಸಿಹಾಕಲಾಗಿದೆ. ಮತ ಚಲಾಯಿಸಲು ಮತಗಟ್ಟೆಗೆ ಬಂದಿದ್ದ ಮತದಾರರು, ಹೆಸರು ನಾಪತ್ತೆಯಾಗಿರುವುದಕ್ಕೆ ಆಕ್ರೋಶ ವ್ಯಕ್ತಪಡಿಸಿದರು.

'ಮನೆ ಮಂದಿಯೆಲ್ಲ ಮತ ಚಲಾಯಿಸಲು ಬಂದಿದ್ದೇವೆ. ಪತ್ನಿ, ಅತ್ತೆ ಹಾಗೂ ಮಾವ ಅವರ ಹೆಸರನ್ನು ಪಟ್ಟಿಯಿಂದ ಅಳಿಸಿ ಹಾಕಲಾಗಿದೆ. ಈ ಬಗ್ಗೆ ಸಿಬ್ಬಂದಿಯನ್ನು ಪ್ರಶ್ನಿಸಿದರೆ, ಸೂಕ್ತ ಉತ್ತರ ನೀಡುತ್ತಿಲ್ಲ' ಎಂದು ಮತದಾರರೊಬ್ಬರು ದೂರಿದರು.

'ಮತ ಚಲಾಯಿಸದಿದ್ದರೆ, ನಿಂದಿಸುವ ಹಕ್ಕಿಲ್ಲ'

ಇನ್ಫೋಸಿಸ್ ಸಂಸ್ಥಾಪಕ ಎನ್.ಆರ್. ನಾರಾಯಣಮೂರ್ತಿ ಹಾಗೂ ಅವರ ಪತ್ನಿ ಸುಧಾಮೂರ್ತಿ ಜಯನಗರ ಬಿ.ಇ.ಎಸ್ ಮತಗಟ್ಟೆಯಲ್ಲಿ ಮತ ಚಲಾಯಿಸಿದರು.

ನಾರಾಯಣಮೂರ್ತಿ, 'ಮೊದಲು ನಾವು ಮತದಾನ ಮಾಡಬೇಕು. ಆ ಮೇಲೆ ಇದು ಸರಿ, ಅದು ಸರಿ ಎಂದು ಮಾತನಾಡಬೇಕು. ಮತದಾನ ಮಾಡದಿದ್ದರೆ, ನಿಂದಿಸುವ ಹಕ್ಕು ನಮಗಿಲ್ಲ' ಎಂದರು.

ಸುಧಾಮೂರ್ತಿ, 'ವಯಸ್ಸಾದವರು ನಾವು ಬೆಳಿಗ್ಗೆ ಬೇಗ ಎದ್ದು ಬಂದು, ಸರದಿಯಲ್ಲಿ ನಿಂತು ಮತ ಹಾಕಿದ್ದೇವೆ. ಮತದಾನ ಪ್ರಜಾಪ್ರಭುತ್ವದ ಪವಿತ್ರ ಭಾಗ. ಎಲ್ಲರೂ ಮತದಾನ ಮಾಡಿ' ಎಂದರು.

ಹೆಸರಿಗಷ್ಟೇ ವಿಷಯವಾರು ಮತಗಟ್ಟೆ

ಚುನಾವಣೆ ಜಾಗೃತಿ, ಯಕ್ಷಗಾನ, ತಂತ್ರಜ್ಞಾನ ಮಾಹಿತಿ, ಕನ್ನಡ ಸಾಹಿತ್ಯ, ಅರಣ್ಯ, ಬೆಂಗಳೂರು ಇತಿಹಾಸ ಸೇರಿದಂತೆ ಹಲವು ವಿಷಯಗಳಡಿ ಮತಗಟ್ಟೆ ನಿರ್ಮಿಸಿರುವುದಾಗಿ ಚುನಾವಣಾ ಅಧಿಕಾರಿಗಳು ಹೇಳಿದ್ದರು. ಆದರೆ, ಮತಗಟ್ಟೆಗಳಿಗೆ ಭೇಟಿ ನೀಡಿದಾಗ ವಾಸ್ತವ ಬೇರೆ ಇತ್ತು.

ಚಾಮರಾಜಪೇಟೆ ಕ್ಷೇತ್ರದ ಹೊಯ್ಸಳ ಕಲ್ಯಾಣ ಮಂಟಪದಲ್ಲಿ ಯಕ್ಷಗಾನ ವಿಷಯದಡಿ ನಿರ್ಮಿಸಿದ್ದ ಮತಗಟ್ಟೆ ನೀರಸವಾಗಿತ್ತು. ಕೇರಳದ ಕಥಕ್ಕಳಿ ಗೊಂಬೆಯನ್ನು ಮಾತ್ರ ಮತಗಟ್ಟೆ ಮುಂಭಾಗದಲ್ಲಿ ಇರಿಸಲಾಗಿತ್ತು. ಈ ಮತಗಟ್ಟೆಯಲ್ಲಿ ಮತದಾರರ ಸಂಖ್ಯೆ ತೀರಾ ಕಡಿಮೆ ಇತ್ತು. ಮತದಾರರಿಗಾಗಿ ಸಿಬ್ಬಂದಿ ಕಾದು ಕುಳಿತಿದ್ದರು.

ಹನುಮಂತನಗರದ ಬಿಬಿಎಂಪಿ ವಾರ್ಡ್ ಕಚೇರಿ ಕಟ್ಟಡದಲ್ಲಿ ಬೆಂಗಳೂರು ಇತಿಹಾಸ ವಿಷಯದಡಿ ಮತಗಟ್ಟೆ ನಿರ್ಮಿಸಲಾಗಿತ್ತು. ಚಿಕ್ಕಪೇಟೆಯ ಸರಸ್ವತಿ ವಿದ್ಯಾಮಂದಿರ ಮತಗಟ್ಟೆಯಲ್ಲಿ ಚುನಾವಣಾ ಜಾಗೃತಿ ಹಾಗೂ ಮತಯಂತ್ರ ಬಳಕೆ ಪೋಸ್ಟರ್‌ಗಳನ್ನು ಪ್ರದರ್ಶಿಸಲಾಗಿತ್ತು.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164 9845114560 / 9731810277/ 9886213331

JOB OPPORTUNITIES

Teachers/ Professors

WANTED TEACHERS: H.M.'s for R.K. English Nursery, Primary High School, OFFICE ASSISIANT, AYAHS ATTENDERS, COOK, EVEN UNEDUCATED, WIDOWS, WIDOWER, POOR, ORPHANS DESTITUTES also can apply. Salary Food accommodation ESI & PF are provided. DrSTS: 9449819999/ 7090398888.

WANTED TEACHERS all subjects. Contact CARMEL HIGH SCHOOL, Garvebhavi Palya, Hosur Road, Bangalore-68. Call 9900872744

WANTED P.E Teachers & Kannada, Hindi teacher (Primary Section), Yeshwanthpur, Bangalore. Contact No. 9379191544

REAL ESTATE SELLING

Farm House/ Land/ Resorts

Multiple Locations

NANDI HILLS rd ready2occupy 1/2 acre 20k builtup furnished 15 AC rooms resto cafe 9Cr Ph 7019346409

PERSONAL

Change of Name

JAY PRAKASH KUMAR YADAV, 6495531Y, HAV, Vill- Godwa Tola, Barwat Bazar, Bettiah, West Champaran, Bihar changed Son's name DHUSHYANT KUMAR to DUSYANT KUMAR, 08/05/2023, Notary K.V. Mani Bangalore

SURESH CHETTRI, 6493459P, HAV/ASH, Vill- Teesta Deogram, Tista Bridge, Kalimpong, Darjeeling, West Bengal changed name SURESH CHETTRI to SURESH CHHETRI, 10/05/2023, Notary K.V. Mani, Bangalore

WE, JAYASIMHA ANANTHASWAMY MELKOTE and BHAVANA NAGARAJU, Residing at Bengaluru-92 have changed our daughter name from CHINMAYI JAYASIMHA MELKOTE to CHINMAYEE JAYASIMHA MELKOTE, vide affidavit dated 9/5/2023 before Notary P.C.Ramaiah, Bengaluru

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager The Printers (Mysore) Pvt. Ltd. Bengaluru

₹500 ಪಡೆಯಲು ನೂಕುನುಗ್ಗಲು

ಬೆಂಗಳೂರು: ಗಾಂಧಿನಗರ ಕ್ಷೇತ್ರದ ಶ್ರೀರಾಮಪುರದಲ್ಲಿ ₹500 ಪಡೆಯಲು ಮತದಾರರ ನೂಕುನುಗ್ಗಲು ಏರ್ಪಟ್ಟಿತ್ತು.

ಶ್ರೀರಾಮಪುರದ ವೇಣುಗೋಪಾಲ ಭಜನಾ ಮಂದಿರದ ಬಳಿ ಸಂಜೆ 4 ಗಂಟೆ ಸುಮಾರಿಗೆ ಜನ ಜಮಾಯಿಸಿದ್ದರು. ಮತದಾನ ಮಾಡಿ ಗುರುತಿನ ಚೀಟಿಯೊಂದಿಗೆ ಬಂದಿದ್ದರು.

ಸ್ಥಳೀಯ ರಾಜಕೀಯ ಮುಖಂಡರು ನೀಡಿದ್ದ ಭರವಸೆ ಮೇರೆಗೆ ಸೇರಿದ್ದ ಜನ, ಹಣಕ್ಕಾಗಿ ಕಾದಿದ್ದರು. ಗಂಟೆಗಟ್ಟಲೆ ಕಾದಿದ್ದ ಜನ ಸ್ಥಳೀಯ ಮುಖಂಡರ ಹಿಂದೆಯೇ ಸುತ್ತಾಡಿದರು. ಪಕ್ಕದಲ್ಲೇ ಇದ್ದ ಕಾಂಪೌಂಡ್ ಒಳಕ್ಕೆ ಮತದಾರರನ್ನು ಕರೆಯಲಾಯಿತು. ನಾಮುಂದು ತಾಮುಂದು ಎಂದು ಜನ ನುಗ್ಗಿದರು. ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಇದ್ದರು. ಬಳಿಕ ಗೇಟ್‌ನಲ್ಲಿ ಕುಳಿತ ವ್ಯಕ್ತಿಯೊಬ್ಬರು ಮತ ಹಾಕಿರುವ ಬೆರಳಿನ ಗುರುತು ನೋಡಿ ₹500 ವಿತರಿಸಿದರು.

ಪೊಲೀಸರು ಈ ರಸ್ತೆ ಪ್ರವೇಶಿಸಿದರೆ ಮಾಹಿತಿ ನೀಡಲು ರಸ್ತೆಯ ಎರಡೂ ಬದಿಯಲ್ಲಿ ಕಾರ್ಯಕರ್ತರು ಕಾವಲಿದ್ದರು. ಗಂಟೆಗಟ್ಟಲೆ ಕಾದಿದ್ದ ಮತದಾರರು ₹500 ಪಡೆದು ತೆರಳಿದರು.

ಕಾಂಗ್ರೆಸ್, ಬಿಜೆಪಿ ಕಾರ್ಯಕರ್ತರ ಗಲಾಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಟಿಎಂ ಲೇಔಟ್‌ನ ಲಕ್ಕಸಂದ್ರ ವಾರ್ಡ್‌ನ ಮತಗಟ್ಟೆಯಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ಕಾರ್ಯಕರ್ತರ ನಡುವೆ ಮಾತಿನ ಚಕಮಕಿ ನಡೆದಿದೆ.

ಮತದಾರರಿಗೆ ಚೀಟಿ ಬರೆದುಕೊಡುವ ವಿಚಾರದಲ್ಲಿ ಎರಡೂ ಪಕ್ಷಗಳ ಕಾರ್ಯಕರ್ತರ ನಡುವೆ ವಾಗ್ವಾದವಾಗಿ ಹಲ್ಲೆ ನಡೆಸಲಾಗಿದೆ. ಮಂಜು ಹಾಗೂ ಆತನ ಸ್ನೇಹಿತರು ರಾಜಾ ಎಂಬುವರ ಮೇಲೆ ಹಲ್ಲೆ ನಡೆಸಿದ್ದಾರೆ. ಆಡುಗೋಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪುನರುಜ್ಜೀವನ ಕಾಮಗಾರಿ ಆರಂಭಿಸದ ಪಾಲಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನ ಕೆ.ಆರ್.ಪುರದ ವೆಂಗಯ್ಯನ ಕೆರೆಗೆ ಪುನರುಜ್ಜೀವನ ಕಾಮಗಾರಿಗೆ 2022ರ ಡಿಸೆಂಬರ್‌ನಲ್ಲಿ ಕಾರ್ಯಾದೇಶ ನೀಡಲಾಗಿದೆ. ಆದರೆ, ಇಲ್ಲಿಯವರೆಗೆ ಬಿಬಿಎಂಪಿ (ಕೆರೆ ವಿಭಾಗ) ಕಾಮಗಾರಿ ಆರಂಭಿಸಿಲ್ಲ ಎಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ತಿಳಿಸಿದೆ.

ಈ ಜಲಕಾಯಕ್ಕೆ ಕೊಳಚೆ ನೀರು ಸೇರುತ್ತಿದೆ ಹಾಗೂ ಒತ್ತುವರಿಯಾಗಿದೆ ಎಂದು ಆರೋಪಿಸಿ ಸ್ಥಳೀಯ ನಿವಾಸಿ ಜೆ.ಜಗನ್ ಕುಮಾರ್ ಎಂಬುವರು ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿ (ಎನ್‌ಜಿಟಿ) ಚೆನ್ನೈ ಪೀಠದ ಮೆಟ್ಟಿಲೇರಿದ್ದರು. ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸುವಂತೆ ಮಂಡಳಿಗೆ ಎನ್‌ಜಿಟಿ ನಿರ್ದೇಶನ ನೀಡಿತ್ತು. ಎನ್‌ಜಿಟಿಗೆ ಮಂಡಳಿ ವರದಿ ಸಲ್ಲಿಸಿದ್ದು, 'ಪಾಲಿಕೆಯವರು ಕೆರೆಗೆ ಬೇಲಿಯನ್ನೂ ಹಾಕಿಲ್ಲ' ಎಂದು ತಿಳಿಸಿದೆ.

ಹೆಬ್ಬಾಳ ಕಣಿವೆಯಿಂದ ವರ್ತೂರು ಕೆರೆಯ ವರೆಗಿನ ಸುತ್ತಮುತ್ತಲ ಪ್ರದೇಶದಲ್ಲಿ ಎಷ್ಟು ತ್ಯಾಜ್ಯ ನೀರು ಉತ್ಪಾದನೆಯಾಗುತ್ತದೆ ಎಂಬುದನ್ನು ಜಲಮಂಡಳಿ ಅಧಿಕಾರಿಗಳು ಪ್ರಮಾಣೀಕರಿಸಬೇಕು. ಬಿಬಿಎಂಪಿಗೆ ಸೇರ್ಪಡೆಯಾದ 110 ಹಳ್ಳಿಗಳಲ್ಲೂ ಈ ಸಂಬಂಧ ಪರಿಶೀಲನೆ ನಡೆಸಬೇಕು. ಇಲ್ಲದಿದ್ದರೆ ಕ್ರಿಯಾಯೋಜನೆ ತಯಾರಿಸಿದರೂ ಉದ್ದೇಶ ಈಡೇರುವುದಿಲ್ಲ ಎಂದು ಮಂಡಳಿ ತಿಳಿಸಿದೆ.

ತಾರತಮ್ಯ: ಪೊಲೀಸ್–ಕಾಂಗ್ರೆಸ್ ವಾಗ್ವಾದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಆರ್.ಪುರ ಕ್ಷೇತ್ರ ವ್ಯಾಪ್ತಿಯ ಮಹದೇವಪುರ ಮತಗಟ್ಟೆ ಮುಂದೆ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಪೊಲೀಸರ ನಡುವೆ ಬುಧವಾರ ಕೆಲ ಸಮಯ ವಾಗ್ವಾದ ನಡೆಯಿತು.

ಮತಗಟ್ಟೆಯ ಮುಂದೆ ಪಕ್ಷದ ಅಭ್ಯರ್ಥಿ ಪರ ಪ್ರಚಾರ ಮಾಡುತ್ತಿದ್ದ ಬಿಜೆಪಿ ಕಾರ್ಯಕರ್ತರನ್ನು ಪ್ರಶ್ನಿಸದ ಪೊಲೀಸರು, ಅಲ್ಲೇ ಇನ್ನೊಂದು ಬದಿಯಲ್ಲಿ ಕೊರಳಿಗೆ ಪಕ್ಷದ ಶಾಲು ಹಾಕಿಕೊಂಡು ಕುಳಿತಿದ್ದ ಕಾಂಗ್ರೆಸ್‌ನ ಕೆಲ ಯುವಕರನ್ನು ಜೀಪಿಗೆ ಹತ್ತಿಸಿಕೊಂಡದ್ದು ಮಾತಿನ ಚಕಮಕಿಗೆ ನಾಂದಿಯಾಡಿತು.

ತಾರತಮ್ಯವನ್ನು ಖಂಡಿಸಿ ಕಾಂಗ್ರೆಸ್ ಕಾರ್ಯಕರ್ತರು ಪೊಲೀಸರ ಜೀಪಿಗೆ ಮುತ್ತಿಗೆ ಹಾಕಿ ಆಕ್ರೋಶ ವ್ಯಕ್ತಪಡಿಸಿದರು. ಯುವಕರನ್ನು ಜೀಪಿನಿಂದ ಕೆಳಗೆ ಇಳಿಸಿದರು. ನಂತರ ಪೊಲೀಸರು ಬಿಜೆಪಿ ಕಾರ್ಯಕರ್ತರನ್ನೂ ಅಲ್ಲಿಂದ ಚದುರಿಸಿದರು.

'ಮತ' ಮೋಸ: ಕೆ.ಆರ್.ಪುರ ಕ್ಷೇತ್ರ ವ್ಯಾಪ್ತಿಯ ಡಿಆರ್‌ಡಿಒ ಮತಗಟ್ಟೆ ಕ್ಷೇತ್ರದಲ್ಲಿ ಮಹಿಳೆಯೊಬ್ಬರು ಮತಚಲಾಯಿಸಲು ಬಂದಾಗ 'ಅದಾಗಲೇ ನಿಮ್ಮ ಮತ ಚಲಾಯಿಸಿ ಆಗಿದೆ' ಎನ್ನುವ ಮತಗಟ್ಟೆ ಅಧಿಕಾರಿಗಳ ಮಾತಿಗೆ ಹೌಹಾರಿದರು.

ಮಧ್ಯಾಹ್ನ 11.30ರ ಸುಮಾರಿಗೆ ಮತಗಟ್ಟೆಗೆ ಬಂದ ಪುಷ್ಪಾ ರಂಗದೊರೈ ಅವರು ತಮ್ಮ ಹೆಸರಿನಲ್ಲಿ ಬೇರೊಬ್ಬರು ಮತದಾನ ಮಾಡಿದ ವಿಷಯ ತಿಳಿದು ಬೇಸರಗೊಂಡರು. 'ಅವರ ಹೆಸರಿನ ಮುಂದೆ ಬೇರೆ ಮಹಿಳೆಯ ಭಾವಚಿತ್ರವಿದ್ದು, ಅವರೇ ಬಂದು ಮತಚಲಾಯಿಸಿದ್ದಾರೆ' ಎಂದು ಮತಗಟ್ಟೆ ಅಧಿಕಾರಿಗಳು ಸಮಜಾಯಿಷಿ ನೀಡಿದರು. ನಂತರ ಪುಷ್ಪಾ ಅವರು ಮೇಲಧಿಕಾರಿಗಳಿಗೆ ದೂರು ಸಲ್ಲಿಸಲು ತೆರಳಿದರು.

ಮತಗಟ್ಟೆ ಸನಿಹ ಉಪಚಾರ: ನಗರದ ಕೆಲ ಮತಗಟ್ಟೆಗಳ ಬಳಿ ಮತಚಲಾಯಿಸಿ ಬಂದವರಿಗೆ ತಿಂಡಿ, ಊಟದ ಕೂಪನ್ ನೀಡಲಾಗುತ್ತಿತ್ತು. ಕೂಪನ್ ಪಡೆದವರು ಅದರಲ್ಲಿ ನಮೂದಿಸಿದ್ದ ಹೋಟೆಲ್‌ಗೆ ಹೋಗಿ ಉಪಹಾರ, ಊಟ ಮಾಡುತ್ತಿದ್ದರು. ಪುಲಕೇಶಿ ನಗರದ ಹೋಟೆಲ್‌ವೊಂದರ ಬಳಿ ಉಪಹಾರ ಸೇವಿಸಲು ಉದ್ದದ ಸರದಿ ಕಂಡುಬಂತು.

ಮತ ಚಲಾಯಿಸಲು ಶಿವಾಜಿನಗರ ಹಫೀಜಿಯಾ ಪ್ರಾಥಮಿಕ ಶಾಲೆಯ ಮತಗಟ್ಟೆಯಲ್ಲಿ ಮತದಾರರ ನೂಕುನುಗ್ಗಲು

–ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌ಜಿ.

ಮನವಿ ಮಾಡಿದ ಮುಖಂಡರಿಗೆ ತರಾಟೆ

ಪುಲಕೇಶಿ ನಗರ ಕ್ಷೇತ್ರದ ನೇತಾಜಿ ರಸ್ತೆಯ ಸರ್ಕಾರಿ ಶಾಲೆಯ ಮತಗಟ್ಟೆಯ ಮುಂದೆ ತಮ್ಮ ಅಭ್ಯರ್ಥಿಗಳ ಪರ ಮತಚಲಾಯಿಸಲು ವಿನಂತಿ ಮಾಡುತ್ತಿದ್ದ ಮುಖಂಡರನ್ನು ವಸಂತಮ್ಮ, ಸೀತಮ್ಮ, ತ್ರಿಶಾವೇರಿ ಮತ್ತಿತರ ಮಹಿಳೆಯರು ತರಾಟೆಗೆ ತೆಗೆದುಕೊಂಡರು.

'ಪುಲಕೇಶಿ ನಗರದ ನೇತಾಜಿ ರಸ್ತೆಯಲ್ಲಿ 50 ವರ್ಷಗಳಿಂದ ವಾಸಿಸುತ್ತಿದ್ದೇವೆ. ಸ್ವಂತ ಮನೆ ಇಲ್ಲ. ಕುಡಿಯುವ ನೀರು ಸೇರಿದಂತೆ ಅಗತ್ಯ ಮೂಲಸೌಕರ್ಯಗಳಿಲ್ಲ. ಕಳೆದ ಚುನಾವಣೆಯಲ್ಲೂ ಭರವಸೆ ನೀಡಿದ್ದರು. ಈ ಬಾರಿಯೂ ಅದೇ ಭರವಸೆ ನೀಡುತ್ತಿದ್ದೀರಿ. ಬಡವರ ಕಷ್ಟ ನಿಮಗೆ ಅರ್ಥವಾಗುವುದಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಎರಡು ಗಂಟೆ ನಂತರ ಬೆಳಕಿನ ವ್ಯವಸ್ಥೆ

ಶಿವಾಜಿನಗರ ಕ್ಷೇತ್ರದ ಹಫೀಜಿಯಾ ಬಿಬಿಎಂಪಿ ಹಿರಿಯ ಪ್ರಾಥಮಿಕ ಶಾಲೆಯ ಮತಗಟ್ಟೆಯಲ್ಲಿ ತಾಂತ್ರಿಕ ತೊಂದರೆಯಿಂದ ಒಂದು ಗಂಟೆ ತಡವಾಗಿ ಮತದಾನ ಆರಂಭವಾಯಿತು. ಬೆಳಕಿನ ವ್ಯವಸ್ಥೆ ಇಲ್ಲದೆ ಮತದಾರರು, ಚುನಾವಣಾ ಸಿಬ್ಬಂದಿ ಪರದಾಡಿದರು. ಮತದಾನ ಆರಂಭವಾದ ಎರಡು ಗಂಟೆಯ ನಂತರ ಬೆಸ್ಕಾಂ ಸಿಬ್ಬಂದಿ ಮತಗಟ್ಟೆಗೆ ಬಂದು ವಿದ್ಯುತ್ ಸಂಪರ್ಕ ಕಲ್ಪಿಸಿದರು.

ವಿಧಾನಸಭಾ ಚುನಾವಣೆಯಲ್ಲಿ ಐದನೇ ಬಾರಿ ಮತ ಚಲಾಯಿಸುತ್ತಿದ್ದೇನೆ. ಅಭಿವೃದ್ಧಿ ಕಾರ್ಯಗಳಿಗೆ, ಜನಪರ ನಾಯಕರಿಗೆ ಸದಾ ನನ್ನ ಮತ ಮೀಸಲು

ಅಂಬಿಕಾ, ಕೆ.ಆರ್.ಪುರ ವಿಧಾನಸಭಾ ಕ್ಷೇತ್ರ

ಮೊದಲು ಬ್ಯಾಲೆಟ್ ಪೇಪರ್ ಇತ್ತು. ಈಗ ಇವಿಎಂ ಬಂದಿದೆ. ಮತದಾರರಲ್ಲಿ ಮೊದಲಿನ ಉತ್ಸಾಹ ಕಾಣುತ್ತಿಲ್ಲ. ಅಕ್ಷರ ತಿಳಿಯದ ಮತದಾರರಿಗೆ ಇವಿಎಂ ಕುರಿತು ಇನ್ನಷ್ಟು ಜಾಗೃತಿ ಮೂಡಿಸಬೇಕಿದೆ

ವಿ.ಎ.ಥಾಮಸ್, ನಿವೃತ್ತ ಉದ್ಯೋಗಿ

ಊರುಗೋಲಿನ ಸಹಾಯದಿಂದ ಶಿವಾಜಿನಗರ ಕ್ಷೇತ್ರದ ಮತಗಟ್ಟೆಗೆ ಬಂದು ಮತಚಲಾಯಿಸಿದ ಮಹಮ್ಮದ್ ಅಲಿ

ನಗರದಲ್ಲಿ ಇಂದು

ಪದವಿ ದಿನಾಚರಣೆ: ಅತಿಥಿಗಳು: ಟಿ.ಜಿ. ಸೀತಾರಾಮ್, ಕೆ.ಸಿ. ರಾಮಮೂರ್ತಿ, ಸಬಿತಾ ರಾಮಮೂರ್ತಿ, ಆಯೋಜನೆ: ಸಿ.ಎಂ.ಆರ್., ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಐಇಸಿಎಸ್ ಲೇಔಟ್, ಐಟಿ ಪಾರ್ಕ್ ರಸ್ತೆ, ಬೆಳಿಗ್ಗೆ 10

'ಸಂಭವಾಮಿ ಯುಗೇ ಯುಗೇ' ನಾಟಕ ಪ್ರದರ್ಶನ: ಉದ್ಘಾಟನೆ: ಜಿ. ಗೋವಿಂದರಾಜು, ಅಧ್ಯಕ್ಷತೆ: ಎಂ. ಜಗದೀಶ್‌ಗೌಡ, ಆಯೋಜನೆ: ರಾಜರಾಜೇಶ್ವರಿ ಕಲಾನಿಕೇತನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4

'ಕರ್ನಾಟಕ ಶಾಸ್ತ್ರೀಯ ಸಂಗೀತ': ಗಾಯನ: ದೀಪ್ತಿ ಮೋಹನ್, ಪಿಟೀಲು: ಮೈಸೂರು ಸಂಜೀವ್ ಕುಮಾರ್, ಮೃದಂಗ: ಮುರಳಿ ನಾರಾಯಣರಾವ್, ಆಯೋಜನೆ: ಮತ್ತು ಸ್ಥಳ: ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನ ಮಲ್ಲೇಶ್ವರ, ಸಂಜೆ 6.30

ದೀಪ್ತಿ ಮೋಹನ್

ಪ್ರವಚನ ವಾಹಿನಿ: 'ಭಗವದ್ಗೀತೆಯಲ್ಲಿ ಮನೋವಿಜ್ಞಾನ' ಕುರಿತು ಉಪನ್ಯಾಸ: ಗ.ನ. ಭಟ್ಟ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

'ಹರಿದಾಸ ಝೇಂಕಾರ': ಗಾಯನ: ರಮ್ಯಾ ಸುಧೀರ್, ಕೀ–ಬೋರ್ಡ್: ಬಿ.ಆರ್. ಪ್ರಕಾಶ್, ತಬಲಾ: ಶ್ರೀನಿವಾಸ ಕಾಖಂಡಕಿ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಪವಮಾನಪುರ, ಸಂಜೆ 7

ಭರತನಾಟ್ಯ ಪ್ರದರ್ಶನ: ಪ್ರಸ್ತುತಿ: ರಕ್ಷಾ ಕಾರ್ತಿಕ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಜಯನಗರ 5ನೇ ಬಡಾವಣೆ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ ಕಳುಹಿಸಿ

nagaradalli_indu@prajavani.co.in

ಮೊದಲ ಬಾರಿ ಮತದಾನ ಮಾಡಿದವರು

‘ಭವಿಷ್ಯಕ್ಕಾಗಿ ಮತ ಚಲಾಯಿಸಿರುವೆ’

‘ನನಗೆ 18 ವರ್ಷ ಆದಾಗಲೇ ವಿಧಾನಸಭೆ ಚುನಾವಣೆ ಬಂದಿರುವುದು ವಿಶೇಷ. ಇದೇ ಮೊದಲ ಬಾರಿ ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸಿ ನನ್ನ ಹಕ್ಕನ್ನು ಚಲಾಯಿಸಿದೆ. ಪ್ರಜಾಪ್ರಭುತ್ವದಲ್ಲಿ ಮತದಾನ ಮಹತ್ವದ ಪಾತ್ರ ವಹಿಸುತ್ತದೆ. ಯಾವುದೇ ಪ್ರಚೋದನೆಗೆ ಒಳಗಾಗದೆ ಜವಾಬ್ದಾರಿಯುತ ಸರ್ಕಾರ ಸ್ಥಾಪನೆಯಲ್ಲಿ ಯುವ ಜನತೆಯ ಪಾತ್ರ ಬಹು ಮಹತ್ವದ್ದಾಗಿದೆ. ನಾಗರಿಕ ಸೌಲಭ್ಯವನ್ನು ಇನ್ನಷ್ಟು ಉತ್ತಮಗೊಳಿಸಲು ಜನಪ್ರತಿನಿಧಿಗಳ ಮೇಲೆ ಒತ್ತಡ ಹೇರಲು ನನಗೀಗ ಹಕ್ಕಿದೆ. ಯುವ ಜನತೆಯೇ ಮುಂದಿನ ಭವಿಷ್ಯವಲ್ಲವೇ?’

ಪ್ರತೀಕ್ಷಾ ಮರಕಿಣಿ, ಉತ್ತರಹಳ್ಳಿ

‘ಮತ ಚಲಾಯಿಸಿದ್ದಕ್ಕೆ ಹೆಮ್ಮೆಯಾಗುತ್ತಿದೆ’

ಪ್ರಜಾಪ್ರಭುತ್ವದ ಈ ಹಬ್ಬದಲ್ಲಿ ಭಾಗವಹಿಸಿ ಮೊದಲ ಬಾರಿಗೆ ಮತದಾನ ಮಾಡಿದ್ದು, ಬಹಳ ಸಂತೋಷವಾಗಿದೆ. ಜೊತೆಗೆ ಹೆಮ್ಮೆ ಎನಿಸುತ್ತಿದೆ. ಅಲ್ಲದೇ ಮತದಾನ ನನ್ನ ಸಾಮಾಜಿಕ ಜವಾಬ್ದಾರಿಯನ್ನು ಹೆಚ್ಚಿಸಿದೆ.

ಕುಮಾರಿ ಪ್ರೀತಿ ಪಾಟೀಲ್, ನಾಗರಬಾವಿ

‘ಕುತೂಹಲ ಈಡೇರಿದೆ’

ಮತ ಚಲಾಯಿಸುವುದು ಹೇಗೆ ಎಂಬ ಕುತೂಹಲವಿತ್ತು. ಈ ಹಿಂದೆ ಪೋಷಕರ ಜತೆ ಮತಗಟ್ಟೆಗೆ ಬಂದಿದ್ದೆ. ಈ ಬಾರಿ ಮತಗಟ್ಟೆಯೊಳಗೆ ಹೋಗಿ ಮೊದಲ ಬಾರಿ ಮತ ಚಲಾಯಿಸಿದ್ದಕ್ಕೆ ಖುಷಿಯಾಯಿತು.

ಕಾವ್ಯಾ ಎಸ್., ಹನುಮಂತನಗರ

‘ದೆಹಲಿಯಿಂದ ಬಂದು ಮತ ಚಲಾಯಿಸಿದೆ’

ಬೆಂಗಳೂರಿನ ಅಮೃತನಗರದಲ್ಲಿ ಕುಟುಂಬ ನೆಲೆಸಿದ್ದು, ನಾನು ನವದೆಹಲಿಯಲ್ಲಿ ಐಐಟಿಯಲ್ಲಿ ಬಿ.ಟೆಕ್ ಓದುತ್ತಿದ್ದೇನೆ. ಮತದಾನಕ್ಕೆ ಇದ್ದ ಮೊದಲ ಅವಕಾಶವನ್ನು ತಪ್ಪಿಸಿಕೊಳ್ಳಬಾರದು ಎಂಬ ಕಾರಣಕ್ಕೆ ಬೆಂಗಳೂರಿಗೆ ಬಂದು ಮತದಾನ ಮಾಡಿದ್ದೇನೆ. ಮೊದಲ ಬಾರಿ ಹಕ್ಕು ಚಲಾಯಿಸಿದ್ದು ಸಂತಸ ತಂದಿತು.

ಸಿದ್ಧಾರ್ಥ
ಅಮೃತನಗರ

‘ಪ್ರಜಾಪ್ರಭುತ್ವ ಗಟ್ಟಿಗೊಳಿಸಬೇಕು’

ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಸಲು ಸಾಕಷ್ಟು ಕಷ್ಟಪಟ್ಟಿದ್ದೆ. ಮೊದಲ ಬಾರಿ ಮತ ಚಲಾಯಿಸಿದ ನಂತರ ಖುಷಿ ಇಮ್ಮಡಿಯಾಗಿದೆ. ಯುವಜನರು ಮತದಾನದ ಹಕ್ಕು ಸದುಪಯೋಗಪಡಿಸಿಕೊಂಡು ಪ್ರಜಾಪ್ರಭುತ್ವ ಗಟ್ಟಿಗೊಳಿಸಬೇಕು.

ಶುಚಿತಾ, ಬಿಕಾಂ ವಿದ್ಯಾರ್ಥಿನಿ. ಕೆ.ಆರ್.ಪುರ

‘ಸಮಸ್ಯೆಗಳಿಗೆ ಸ್ಪಂದಿಸುವವರಿಗೆ ಬೆಂಬಲ’

ಮೊದಲ ಮತ ಚಲಾಯಿಸಿದ ತೃಪ್ತಿ ಸಿಕ್ಕಿದೆ. ಪಕ್ಷಕ್ಕಿಂತ ವ್ಯಕ್ತಿ ಮುಖ್ಯ. ಜನರ ಸಮಸ್ಯೆಗಳಿಗೆ ಸ್ಪಂದಿಸುವವರೇ ನಮ್ಮ ನಾಯಕರು ಎಂಬ ನಂಬಿಕೆ ಆಧಾರದಲ್ಲಿ ಮತ ಹಾಕಿರುವೆ.

ಅಶ್ವಿನಿ, ಮಹದೇವಪುರ

ಮತದಾನ ಮಾಡಿದ ರೋಗಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ಯಾನ್ಸರ್ ಸೇರಿ ವಿವಿಧ ಅನಾರೋಗ್ಯ ಸಮಸ್ಯೆಗಳಿಂದಾಗಿ ಆಸ್ಪತ್ರೆಗೆ ದಾಖಲಾದ ರೋಗಿಗಳು ಸಹ ನಗರದಲ್ಲಿ ಮತದಾನ ಮಾಡಿ, ಸಂತಸ ವ್ಯಕ್ತಪಡಿಸಿದರು.

ಇಲ್ಲಿನ ಮಣಿಪಾಲ್ ಆಸ್ಪತ್ರೆಯಲ್ಲಿ ದಾಖಲಾಗಿದ್ದ ರೋಗಿಗಳಲ್ಲಿ 16 ಮಂದಿ ಮತ ಚಲಾಯಿಸಿದರು. ಅವರಿಗೆ ಆಸ್ಪತ್ರೆಯೇ ಮತಗಟ್ಟೆಗೆ ತೆರಳಲು ವಾಹನ ವ್ಯವಸ್ಥೆ ಮಾಡಿತ್ತು. ಅವರೊಂದಿಗೆ ವೈದ್ಯರು ಹಾಗೂ ವೈದ್ಯಕೀಯ ಸಿಬ್ಬಂದಿಯನ್ನೂ ಕಳುಹಿಸಲಾಗಿತ್ತು. ಇದರಿಂದಾಗಿ ಅಂಗಾಂಗ ಕಸಿಗೆ ಒಳಗಾದವರು, ಡಯಾಲಿಸಿಸ್ ಪಡೆಯುತ್ತಿರುವವರು, ಕಿಮೋಥೆರಪಿ ಪಡೆಯುತ್ತಿರುವ ರೋಗಿಗಳು ಸಹ ತಮ್ಮ ಹಕ್ಕನ್ನು ಚಲಾಯಿಸಿದರು.

ರೋಗಿಗಳಿಗೆ ಮತದಾನಕ್ಕೆ ವ್ಯವಸ್ಥೆ ಕಲ್ಪಿಸುವಂತೆ ಆಸ್ಪತ್ರೆಯು ಬಿಬಿಎಂಪಿ ಹಾಗೂ ಚುನಾವಣೆ ಆಯೋಗಕ್ಕೆ ಮನವಿ ಮಾಡಿಕೊಂಡಿತ್ತು. ಆಸ್ಪತ್ರೆಯಲ್ಲಿನ ಎಲ್ಲ ರೋಗಿಗಳ ವೈದ್ಯಕೀಯ ತಪಾಸಣೆ ಬಳಿಕ, ಆರೋಗ್ಯ ಸ್ಥಿತಿಯ ಆಧಾರದ ಮೇಲೆ ಕೆಲವರಿಗೆ ಮಾತ್ರ ಅವಕಾಶ ನೀಡಲಾಯಿತು. ಅವರಿಗೆ ಸರದಿಯಲ್ಲಿ ಕಾಯದೆ ನೇರವಾಗಿ ಮತ ಚಲಾಯಿಸಲು ಆಯೋಗದ ಒಪ್ಪಿಗೆ ಪತ್ರವನ್ನೂ ನೀಡಲಾಗಿತ್ತು. ರೋಗಿಗಳು ಆನೇಕಲ್, ರಾಜಾಜಿನಗರ, ಶಿವಾಜಿನಗರ, ಸನ್ ಸಿಟಿ, ಹರಳೂರು, ಮಲ್ಲೇಶ್‌ಪಾಳ್ಯ, ಮಲ್ಲೇಶ್ವರ, ದಾಸರಹಳ್ಳಿ, ಮಹಾಲಕ್ಷ್ಮಿ ಬಡಾವಣೆ ಮತ್ತು ಸಿ.ವಿ. ರಾಮನ್ ನಗರದಲ್ಲಿ ಮತ ಚಲಾಯಿಸಿದರು.

‘ಅನೇಕ ರೋಗಿಗಳು ಮತ ಚಲಾಯಿಸಲು ಆಸಕ್ತಿ ಹೊಂದಿದ್ದರು’ ಎಂದು ಆಸ್ಪತ್ರೆಯ ಮುಖ್ಯ ಕಾರ್ಯಾಚರಣೆ ಅಧಿಕಾರಿ ಕಾರ್ತಿಕ್ ರಾಜಗೋಪಾಲ್ ತಿಳಿಸಿದರು.

ನಗರದಲ್ಲಿ ನಿರೀಕ್ಷಿತ ಮಟ್ಟ ತಲುಪದ ಮತದಾನ ಪ್ರಮಾಣ • ಶೇ 54.53ರಷ್ಟು ಮತದಾನ

ಮತ್ತೆ ಸೋತ ನಗರ ಮತದಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಧಾನಿಯ 28 ವಿಧಾನಸಭೆ ಕ್ಷೇತ್ರಗಳ ಮತದಾರರನ್ನು ಮತಗಟ್ಟೆಗೆ ಕರೆತರುವ ಪ್ರಯತ್ನ ಮತ್ತೆ ವಿಫಲವಾಗಿದೆ. ಒಂದು ತಿಂಗಳಿಂದ ಸತತವಾಗಿ ಮತದಾನದ ಜಾಗೃತಿ ಮೂಡಿಸಿದರೂ ನಿರೀಕ್ಷಿತ ಪ್ರಮಾಣದಲ್ಲಿ ಮತದಾನ ಮಾಡದೆ ನಗರದ ಮತದಾರರು ವಿಫಲರಾಗಿದ್ದಾರೆ. ಕಳೆದ ಬಾರಿಗಿಂತ ಕಡಿಮೆ ಮತದಾನವಾಗಿದ್ದು ಭಾರಿ ನಿರಾಸೆ ಉಂಟುಮಾಡಿದ್ದಾರೆ.

ನಗರದಲ್ಲಿ ಕಳೆದ ಬಾರಿಗಿಂತ ಕಡಿಮೆ ಪ್ರಮಾಣದಲ್ಲಿ ಮತದಾನವಾಗಿದೆ. ಚುನಾವಣಾ ಆಯೋಗ ಬಿಡುಗಡೆ ಮಾಡಿರುವ ಪ್ರಕಟಣೆಯಂತೆ ಶೇ 54.53ರಷ್ಟು ಮತದಾನವಾಗಿದ್ದು, ಕಳೆದ ಬಾರಿಗಿಂತ ಶೇ 0.59ರಷ್ಟು ಕಡಿಮೆಯಾಗಿದೆ. ಅಂತಿಮವಾಗಿ ಎಲ್ಲ ಲೆಕ್ಕಾಚಾರ ಮುಗಿದರೂ, ಶೇಕಡ ಒಂದೆರಡು ಪ್ರಮಾಣ ಹೆಚ್ಚಾಗಬಹುದಾಗಿದೆ. ಹೀಗಾಗಿ, ಮತದಾರರನ್ನು ಓಲೈಸಿ ಹೆಚ್ಚಿನ ಪ್ರಮಾಣಲ್ಲಿ ಮತಗಟ್ಟೆಗೆ ಕರೆತರುವ ಕಸರತ್ತು ವಿಫಲವಾಗಿದೆ.

2018ರಲ್ಲಿ ಶೇ 55.12ರಷ್ಟು ಮತದಾನವಾಗಿತ್ತು. 90.36 ಲಕ್ಷ ಮತದಾರರಲ್ಲಿ 49.80 ಲಕ್ಷ ಮಂದಿ ಮತ ಚಲಾಯಿಸಿದ್ದರು. 2019ರ ಲೋಕಸಭೆ ಚುನಾವಣೆಯಲ್ಲೂ ಪರಿಸ್ಥಿತಿ ಭಿನ್ನವಾಗಿರಲಿಲ್ಲ. ಹೀಗಾಗಿ, ಮತದಾನ ಪ್ರಮಾಣವನ್ನು ಕನಿಷ್ಠ ಶೇ 75ಕ್ಕೆ ಹೆಚ್ಚಿಸಬೇಕೆಂದು ಚುನಾವಣೆ ಆಯೋಗ ಹಾಗೂ ಬಿಬಿಎಂಪಿ ಸಾಕಷ್ಟು ಪ್ರಯತ್ನ ಪಟ್ಟಿತ್ತು. ಹಿಂದೆಂದಿಗಿಂತಲೂ ಹೆಚ್ಚಿನ ‘ಸ್ವೀಪ್’ ಕಾರ್ಯಕ್ರಮಗಳನ್ನು ಆಯೋಜಿಸಿ ಮತದಾನದ ಅರಿವು ಮೂಡಿಸಲು ಕಸರತ್ತು ನಡೆಸಿತ್ತು. ಆದರೆ, ಇದಕ್ಕೆಲ್ಲ ಮತದಾರ ಮಣೆ ಹಾಕಿಲ್ಲ.

ಐಟಿ– ಬಿಟಿ ವಲಯದಲ್ಲಿ ಜಾಗೃತಿ: ನಗರಕ್ಕೆ ಉದ್ಯೋಗ ಅರಸಿ ಬಂದಿರುವವರಲ್ಲಿ ಐಟಿ–ಬಿಟಿ ಉದ್ಯೋಗಿಗಳು ಹೆಚ್ಚು. ಅವರ ಜನಸಂಖ್ಯೆಯೂ ಇಲ್ಲಿ ಹೆಚ್ಚು. ಹೀಗಾಗಿ ಅವರಿರುವ ಭಾಗಗಳಲ್ಲಿ, ಕಂಪನಿಗಳಲ್ಲಿ ಹೆಚ್ಚಿನ ಅರಿವು ಮೂಡಿಸಿ ಮತದಾನ ಮಾಡಬೇಕೆಂದು ಕೋರಲಾಗಿತ್ತು. ಮತದಾನದ ದಿನ ರಜೆಯನ್ನೂ ಘೋಷಿಸಲಾಗಿತ್ತು. ಪ್ರವಾಸ, ಪಿಕ್‌ನಿಕ್ ಎಲ್ಲವನ್ನೂ ಕೈಬಿಟ್ಟು ಮತದಾನ ಮಾಡಿ ಎಂದು ಮನವಿ ಮಾಡಿಕೊಂಡಿದ್ದರೂ ಪ್ರಯೋಜನವಾಗಿಲ್ಲ.

ಕಾರ್ಖಾನೆ– ಗಾರ್ಮೆಂಟ್ಸ್‌ಗಳಲ್ಲಿ [illegible]: ಕಾಸಿಯಾ, ಎಫ್‌ಕೆಸಿಸಿಐ, ಕೈಗಾರಿಕೆ ಪ್ರದೇಶಗಳ ಸಂಘಗಳು, ಮಾಲೀಕರೊಂದಿಗೆ ಕಾರ್ಯಕ್ರಮ ನಡೆಸಿ, ಮತದಾನದ ಬಗ್ಗೆ ಬಿಬಿಎಂಪಿ ಅಧಿಕಾರಿಗಳು ಅರಿವು ಮೂಡಿಸಿದ್ದರು. ಎಲ್ಲ ಕಾರ್ಮಿಕರಿಗೂ ಮತದಾನ ಮಾಡಲು ಅನುಕೂಲ ಕಲ್ಪಿಸಬೇಕೆಂದು ಮನವಿ ಮಾಡಿದ್ದರು. ಅದರಂತೆ, ಮತದಾನದ ದಿನ ಮಾಲೀಕರು ರಜೆಯನ್ನೂ ನೀಡಿದ್ದರು. ಇಷ್ಟಾದರೂ ಮತದಾನದ ಪ್ರಮಾಣವನ್ನು ಹೆಚ್ಚಿಸುವ ಗುರಿ ತಲುಪಲು ಸಾಧ್ಯವಾಗಲಿಲ್ಲ.

ಥೀಮ್ ಮತಗಟ್ಟೆಗಳ ಆಕರ್ಷಣೆ: ಮತಗಟ್ಟೆಗೆ ಮತದಾರರನ್ನು ಆಕರ್ಷಿಸಲು ಪಿಂಕ್, ಹಸಿರು, ಅಂಗವಿಕಲರ ಸ್ನೇಹಿ ಸೇರಿದಂತೆ ಹಲವು ಥೀಮ್ ಆಧರಿತ ಮತಗಟ್ಟೆಗಳನ್ನು ಸ್ಥಾಪಿಸಲಾಗಿತ್ತು. ಈ ಎಲ್ಲ ಸೌಲಭ್ಯಗಳೂ ಮತದಾರರನ್ನು ಸೆಳೆಯುವಲ್ಲಿ ನಿರೀಕ್ಷಿತ ಮಟ್ಟದಲ್ಲಿ ವಿಫಲವಾದವು. ಇದಲ್ಲದೆ, ಹಲವು ಸಂಘ–ಸಂಸ್ಥೆಗಳು ಮತದಾನ ಮಾಡಿ ಎಂದು ಸಾಕಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು. ಮತದಾರರಿಗೆ ಮತಗಟ್ಟೆಗೆ ತೆರಳಲು ಕರೆ ನೀಡಿದ್ದವು. ಆದರೂ ಮತದಾರರು ಮತದಾನದ ದಿನ ಮತಗಟ್ಟೆಗಳತ್ತ ಸಂಪೂರ್ಣವಾಗಿ ತೆರಳಲಿಲ್ಲ.

2 ಕಡೆ ಮತಪಟ್ಟಿಯಲ್ಲಿ ಹೆಸರು!

‘ನಗರದಲ್ಲಿ ಮತದಾನ ಕಡಿಮೆಯಾಗಲು ಸ್ವಂತ ಊರು ಹಾಗೂ ಉದ್ಯೋಗ ಮಾಡುವ ಸ್ಥಳ ಬೆಂಗಳೂರಿನಲ್ಲೂ ಮತದಾರರ ಗುರುತಿನ ಚೀಟಿ ಹೊಂದಿರುವುದು ಪ್ರಮುಖ ಕಾರಣ. ಉದ್ಯೋಗ ಹಾಗೂ ವಾಸ ಸ್ಥಳದ ದಾಖಲೆಗಾಗಿ ಎಪಿಕ್ ಮಾಡಿಸಿಕೊಳ್ಳುತ್ತಾರೆ. ಆದರೆ ಇವರಲ್ಲಿ ಬಹುತೇಕರು ಸ್ವಂತ ಊರಿಗೆ ಹೋಗಿ ಮತ ಚಲಾಯಿಸುತ್ತಾರೆ ಅಥವಾ ಮತದಾನವನ್ನೇ ಮಾಡುವುದಿಲ್ಲ. ಸುಮಾರು ಶೇ 20ರಷ್ಟು ಮಂದಿ ಇಂತಹವರಿದ್ದಾರೆ. ಹೀಗಾಗಿಯೇ ನಗರದಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಮತದಾನವಾಗುವುದಿಲ್ಲ’ ಎಂದು ಹಲವು ಅಭ್ಯರ್ಥಿಗಳೇ ಅಭಿಪ್ರಾಯಪಟ್ಟರು.

ಇನ್ನು, ಮತದಾನದ ಬಗ್ಗೆ ಸಾಕಷ್ಟು ಮಂದಿಗೆ ಆಸಕ್ತಿಯೇ ಇಲ್ಲ. ‘ಯಾರು ಬಂದರೆ ನಮಗೇನು? ಮತ ಹಾಕಿದರೆಷ್ಟು ಬಿಟ್ಟರೆಷ್ಟು?’ ಎಂಬ ಉದಾಸೀನ ಮನೋಭಾವದಿಂದಾಗಿ ಮತದಾನದ ಪ್ರಮಾಣ ಕಡಿಮೆಯಾಗುತ್ತಿದೆ ಎಂದು ಸಂಘ–ಸಂಸ್ಥೆಗಳು ಹೇಳುತ್ತವೆ.

‘ಕುಸಿಯದಿರುವುದು ಸಮಾಧಾನಕರ’

ಮತದಾನದ ಪ್ರಮಾಣದಲ್ಲಿ ಯಾವುದೇ ರೀತಿಯ ವೃದ್ಧಿ ಸ್ವಾಗತಾರ್ಹ. ಕಳೆದ ಮೂರು ಚುನಾವಣೆಗಳಲ್ಲಿ ಮತದಾನದ ಪ್ರಮಾಣದಲ್ಲಿ ಕುಸಿತ ಕಂಡುಬಂದಿತ್ತು. ಈ ಬಾರಿ ಕಳೆದ ಬಾರಿಯಷ್ಟು ಅಥವಾ ಮತದಾರರ ಸಂಖ್ಯೆಯಲ್ಲಿ ವೃದ್ಧಿಯಾಗಿರುವುದು ಒಳ್ಳೆಯ ಬೆಳವಣಿಗೆ ಎಂದು ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ಹೇಳಿದರು.

ಅತಿಹೆಚ್ಚು ಮತದಾನ (ಕ್ಷೇತ್ರ): ಯಶವಂತಪುರ, ಆನೇಕಲ್, ಯಲಹಂಕ, ಚಿಕ್ಕಪೇಟೆ, ಜಯನಗರ.
ಅತಿ ಕಡಿಮೆ ಮತದಾನ (ಕ್ಷೇತ್ರ): ಸಿ.ವಿ. ರಾಮನ್‌ನಗರ, ಬೊಮ್ಮನಹಳ್ಳಿ, ವಿಜಯನಗರ, ಬಿಟಿಎಂ ಲೇಔಟ್, ದಾಸರಹಳ್ಳಿ.

97,13,349 ಒಟ್ಟು ಮತದಾರರು	**52,96,902** ಮತದಾನ ಮಾಡಿದವರು
50,24,775 ಪುರುಷರು	**26,98,273** ಪುರುಷರು
46,86,813 ಮಹಿಳೆಯರು	**25,98,266** ಮಹಿಳೆಯರು
1,761 ಲೈಂಗಿಕ ಅಲ್ಪಸಂಖ್ಯಾತರು	**363** ಲೈಂಗಿಕ ಅಲ್ಪಸಂಖ್ಯಾತರು

ಮತದಾನದ ಸರಾಸರಿ

ಕ್ಷೇತ್ರ	2018	2023
150–ಯಲಹಂಕ	63.01	62.68
151–ಕೆ.ಆರ್.ಪುರ	58.60	52.68
152–ಬ್ಯಾಟರಾಯನಪುರ	57.44	56.6
153–ಯಶವಂತಪುರ	58.43	63.69
154–ರಾಜರಾಜೇಶ್ವರಿನಗರ	54.22	53.81
155–ದಾಸರಹಳ್ಳಿ	52.67	50.16
156–ಮಹಾಲಕ್ಷ್ಮಿ ಲೇಔಟ್	54.72	54.25
157–ಮಲ್ಲೇಶ್ವರ	56.29	55.11
158–ಹೆಬ್ಬಾಳ	55.32	54.73
159–ಪುಲಕೇಶಿನಗರ	53.24	54.79
160–ಸರ್ವಜ್ಞನಗರ	52.69	52
161–ಸಿ.ವಿ. ರಾಮನ್‌ನಗರ	48.98	47.43
162–ಶಿವಾಜಿನಗರ	55.09	56.59
163–ಶಾಂತಿನಗರ	53.58	54.33
164–ಗಾಂಧಿನಗರ	55.13	57.28
165–ರಾಜಾಜಿನಗರ	56.74	56.65
166–ಗೋವಿಂದರಾಜನಗರ	53.54	53.5
167–ವಿಜಯನಗರ	49.95	51.96
168–ಚಾಮರಾಜಪೇಟೆ	56.16	53.59
169–ಚಿಕ್ಕಪೇಟೆ	57.57	57.6
170–ಬಸವನಗುಡಿ	52.94	54.61
171–ಪದ್ಮನಾಭನಗರ	60.23	56.48
172–ಬಿಟಿಎಂ ಲೇಔಟ್	50.09	49.15
173–ಜಯನಗರ	54.92	58
174–ಮಹದೇವಪುರ	56.34	55.04
175–ಬೊಮ್ಮನಹಳ್ಳಿ	47.03	49.5
176–ಬೆಂಗಳೂರು ದಕ್ಷಿಣ	53.17	51.6
177–ಆನೇಕಲ್	63.15	61.85

* ರಾತ್ರಿ 10:56ರವರೆಗಿನ ಮಾಹಿತಿ

ಮತಗಟ್ಟೆಯ ಬಳಿ ದೊಣ್ಣೆ ಹಿಡಿದು ಓಡಾಟ

ಟಿ.ದಾಸರಹಳ್ಳಿ: ಜೆಡಿಎಸ್, ಬಿಜೆಪಿ ಕಾರ್ಯಕರ್ತರ ವಾಗ್ವಾದ

ಪ್ರಜಾವಾಣಿ ವಾರ್ತೆ

ಪದ್ಮನಾಭನಗರದ ಪಾಪಯ್ಯ ಗಾರ್ಡನ್ ಮತಗಟ್ಟೆ ಸಂಖ್ಯೆ 28, 29ರ ಬಳಿ ದೊಣ್ಣೆ ಹಿಡಿದು ಬಂದ ಯುವಕರ ಗುಂಪು

ಬೆಂಗಳೂರು: ನಗರದ ಅಲ್ಲಲ್ಲಿ ಸಣ್ಣಪುಟ್ಟ ಗಲಾಟೆ ಹೊರತು ಪಡಿಸಿ ಬಹುತೇಕ ಮತಗಟ್ಟೆಗಳಲ್ಲಿ ಬುಧವಾರ ಶಾಂತಿಯುತ ಮತದಾನ ನಡೆಯಿತು. ನಗರದಲ್ಲಿ 2,006 ಸೂಕ್ಷ್ಮ ಮತಗಟ್ಟೆಗಳೆಂದು ಗುರುತಿಸಲಾಗಿತ್ತು. ಕೆಲವು ಭಾಗದಲ್ಲಿ ಮತಗಟ್ಟೆಗಳಲ್ಲಿ ಕಾರ್ಯಕರ್ತರ ನಡುವೆ ಪರಸ್ಪರ ವಾಗ್ವಾದ ಹಾಗೂ ಗಲಾಟೆಗಳು ನಡೆದಿವೆ.

ಪದ್ಮನಾಭನಗರದ ಪಾಪಯ್ಯ ಗಾರ್ಡನ್ ಮತಗಟ್ಟೆ ಸಂಖ್ಯೆ 28, 29ರ ಬಳಿ ಪುಂಡರ ಗುಂಪು ದೊಣ್ಣೆ ಹಿಡಿದು ಅಡ್ಡಾಡಿ ಆತಂಕ ಸೃಷ್ಟಿಸಿತ್ತು.

ಬಿಬಿಎಂಪಿ ಮಾಜಿ ಸದಸ್ಯರೊಬ್ಬರ ಪತಿ ಕಡೆಯ 25 ಮಂದಿ ಯುವಕರ ಗುಂಪು ಮತಗಟ್ಟೆಯ ಬಳಿಗೆ ಬಂದು ಮತ್ತೊಂದು ಗುಂಪಿನ ಮೇಲೆ ದೊಣ್ಣೆಯಿಂದ ಹಲ್ಲೆ ನಡೆಸಿದೆ. ಮತದಾನ ನಡೆಯುತ್ತಿದ್ದ ವೇಳೆಯೇ ದೊಣ್ಣೆ ಹಿಡಿದು ರಾಜಾರೋಷವಾಗಿ ಯುವಕರು ಓಡಾಟ ನಡೆಸಿದ್ದರು. ಸ್ಥಳದಲ್ಲಿದ್ದ ಪೊಲೀಸರನ್ನು ಲೆಕ್ಕಿಸದೇ ಗಲಾಟೆ ನಡೆಸಿದರು.

ದೊಣ್ಣೆ ಹಿಡಿದು ಬಂದ ಯುವಕರು ಗಾಂಜಾ ಹಾಗೂ ಮದ್ಯದ ಅಮಲಿನಲ್ಲಿದ್ದರು. ಮಹಿಳೆಯರ ಮೇಲೂ ಹಲ್ಲೆ ನಡೆಸಿದರು ಎಂದು ಚನ್ನಪ್ಪ ಹಾಗೂ ಮೀನಮ್ಮ ದೂರಿದರು. ಚನ್ನಪ್ಪ ನೀಡಿರುವ ದೂರಿನ ಮೇರೆಗೆ ಚನ್ನಮ್ಮನ ಅಚ್ಚುಕಟ್ಟು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಘಟನೆಯಿಂದ ಕೆಲ ಸಮಯ ಸ್ಥಳದಲ್ಲಿ ಉದ್ವಿಗ್ನ ವಾತಾವರಣ ಸೃಷ್ಟಿಯಾಗಿತ್ತು. ಘಟನೆಯಿಂದ ಹೆದರಿದ ಮತದಾರರು ಅರ್ಧ ಗಂಟೆಕಾಲ ಮತಗಟ್ಟೆ ಬಳಿಗೆ ಬಂದಿರಲಿಲ್ಲ.

‘ಎರಡು ಗುಂಪಿನ ಯೂವಕರು ಒಂದೇ ರಾಷ್ಟ್ರೀಯ ಪಕ್ಷಕ್ಕೆ ಸೇರಿದವರು ಎಂದು ಗೊತ್ತಾಗಿದೆ. ಚುನಾವಣೆ ಕಾರಣಕ್ಕೆ ಗಲಾಟೆ ಮಾಡಿಕೊಂಡಿಲ್ಲ. ವೈಯಕ್ತಿಕ ಕಾರಣಕ್ಕೆ ರಸ್ತೆಯಲ್ಲಿ ಗಲಾಟೆ ಮಾಡಿಕೊಂಡಿದ್ದಾರೆ. 20 ಮಂದಿ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ವಿಡಿಯೊ ಸಾಕ್ಷ್ಯ ಆಧರಿಸಿ ಆರೋಪಿಗಳನ್ನು ಬಂಧಿಸಲಾಗುವುದು’ ಎಂದು ದಕ್ಷಿಣ ವಿಭಾಗದ ಡಿಸಿಪಿ ಪಿ.ಕೃಷ್ಣಕಾಂತ್ ತಿಳಿಸಿದ್ದಾರೆ.

ಟಿ.ದಾಸರಹಳ್ಳಿ ಕ್ಷೇತ್ರದ ಮತಗಟ್ಟೆಯಲ್ಲಿ ಜೆಡಿಎಸ್ ಹಾಗೂ ಬಿಜೆಪಿ ಕಾರ್ಯಕರ್ತರ ನಡುವೆ ಮಾತಿನ ಚಕಮಕಿ ನಡೆದು ಅಲ್ಲಿಯೂ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಸ್ಥಳಕ್ಕೆ ಬಂದ ಪೊಲೀಸರು ಎರಡೂ ಕಡೆಯ ಕಾರ್ಯಕರ್ತರನ್ನು ಸಮಾಧಾನ ಪಡಿಸಿ ಕಳುಹಿಸಿದರು.

ಮತಗಟ್ಟೆ ಬಳಿ 100 ಮೀಟರ್ ಅನ್ನು ‘ನಿಷೇಧಿತ ಪ್ರದೇಶ’ವೆಂದು ಘೋಷಿಸಲಾಗಿತ್ತು. ಆ ವ್ಯಾಪ್ತಿಯ ಒಳಗೇ ಬಂದು ಬಿಜೆಪಿ ಹಾಗೂ ಜೆಡಿಎಸ್ ಕಾರ್ಯಕರ್ತರು ಮತದಾರರನ್ನು ಸೆಳೆಯುವ ಪ್ರಯತ್ನ ಮಾಡುತ್ತಿದ್ದರು. ಆಗ ಎರಡೂ ಕಡೆಯ ಕಾರ್ಯಕರ್ತರ ನಡುವೆ ವಾಗ್ವಾದ ನಡೆಯಿತು. ಬಳಿಕ ದೂರಕ್ಕೆ ಕಾರ್ಯಕರ್ತರನ್ನು ಕಳುಹಿಸಲಾಯಿತು.

ಮತದಾನಕ್ಕಾಗಿ ಅಲೆದಾಡಿದ ಮಹಿಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಾಸರಹಳ್ಳಿ ಕ್ಷೇತ್ರದಲ್ಲಿ ಮತದಾನಕ್ಕಾಗಿ ಮಹಿಳೆಯೊಬ್ಬರು ಮತಗಟ್ಟೆಯಿಂದ ಮತಗಟ್ಟೆಗೆ ಅಲೆದಾಡಿದರು.

ಲಕ್ಷ್ಮಮ್ಮ ಎಂಬುವರು ರಾಜಾಜಿನಗರ ಕ್ಷೇತ್ರದ ಬಸವೇಶ್ವರನಗರದ ಮತದಾರರ ಗುರುತಿನ ಚೀಟಿಯನ್ನು ಕೈಯಲ್ಲಿ ಹಿಡಿದು ದಾಸರಹಳ್ಳಿ ಕ್ಷೇತ್ರದಲ್ಲಿ ಅಲೆದಾಡಿದರು.

ಬಸವೇಶ್ವರನಗರದಲ್ಲಿ ವಾಸವಿದ್ದ ಇವರು, ಈಗ ದಾಸರಹಳ್ಳಿಯಲ್ಲಿ ನೆಲೆಸಿದ್ದಾರೆ. ಈ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಣಿ ಮಾಡಲೆತ್ನಿಸಿ ಸ್ವೀಕೃತಿ ಚೀಟಿ ಪಡೆದಿದ್ದರು. ಚಿಕ್ಕಬಾಣಾವರ, ಬಾಗಲಗುಂಟೆ ಮತಗಟ್ಟೆಗಳಲ್ಲಿ ಸುತ್ತಾಡಿ ನಂತರ ಇಲ್ಲಿಗೆ ಬಂದಿದ್ದರು.

ಮಹೇಶ್ವರಮ್ಮ ದೇವಸ್ಥಾನ ರಸ್ತೆಯ ಮತಗಟ್ಟೆಗೆ ಹೋಗಲು ಸ್ಥಳೀಯರು ಸಲಹೆ ನೀಡಿದರು.

ದುಬೈನಿಂದ ಬಂದು ಮತ ಚಲಾಯಿಸಿದ ಉದ್ಯಮಿ ರೊನಾಲ್ಡ್

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಉದ್ಯಮಿ ರೊನಾಲ್ಡ್ ಕೊಲಾಸೊ ಅವರು ಮತ ಚಲಾಯಿಸುವ ಉದ್ದೇಶದಿಂದಲೇ ದುಬೈನಿಂದ ನಗರಕ್ಕೆ ಬಂದಿದ್ದಾರೆ.

ಮಂಗಳವಾರವೇ ನಗರಕ್ಕೆ ಬಂದಿದ್ದ ಅವರು, ದೇವನಹಳ್ಳಿ ತಾಲ್ಲೂಕಿನ ಸಾದಹಳ್ಳಿಯ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಬುಧವಾರ ಮತ ಚಲಾವಣೆ ಮಾಡಿದರು.

‘ಮತ ಚಲಾಯಿಸುವ ಉದ್ದೇಶದಿಂದಲೇ ಎಲ್ಲ ಕಾರ್ಯಗಳನ್ನು ಬದಿಗೊತ್ತಿ ಬೆಂಗಳೂರಿಗೆ ಬಂದಿದ್ದೇನೆ. ದೇಶದ ಭವಿಷ್ಯ ನಿರ್ಧರಿಸುವ ಶಕ್ತಿ ಮತಕ್ಕಿದೆ. ಅದನ್ನು ಯಾವುದೇ ಕಾರಣಕ್ಕೂ ವ್ಯರ್ಥ ಮಾಡಿಕೊಳ್ಳಬಾರದು. ಅದಕ್ಕಾಗಿ ನಾನು ದುಬೈನಿಂದ ಬೆಂಗಳೂರಿಗೆ ಬಂದಿದ್ದೇನೆ’ ಎಂದು ರೊನಾಲ್ಡ್ ಕೊಲಾಸೊ ತಿಳಿಸಿದರು.

‘ನಾವು ಎಲ್ಲಿಯೇ ಇದ್ದರೂ ನಮ್ಮ ಹೃದಯ ನಾಡಿಗಾಗಿ ಮಿಡಿಯುತ್ತದೆ. ಇಲ್ಲಿ ನಡೆಯುವ ಪ್ರತಿಯೊಂದು ಮಹತ್ವದ ಕಾರ್ಯಗಳಲ್ಲಿ ಭಾಗಿಯಾಗಬೇಕು. ಮತ ಚಲಾಯಿಸುವುದು ಸಹ ಮೂಲಭೂತ ಹಕ್ಕು ಅಷ್ಟೇ ಅಲ್ಲದೆ, ನಮ್ಮೆಲ್ಲರ ಕರ್ತವ್ಯವೂ ಹೌದು. ಸರ್ಕಾರದ ರಚನೆಯಲ್ಲಿ ನಮ್ಮ ಪಾಲು ಇರಬೇಕು. ಆಗ ಮಾತ್ರ ಪ್ರಜೆಗಳ ಒಳಿತು ಕೈಗೊಳ್ಳದ ಮತ್ತು ಸಾಮರಸ್ಯ, ಸಹಬಾಳ್ವೆ ವಾತಾವರಣ ಸೃಷ್ಟಿಸದ ಸರ್ಕಾರವನ್ನು ಟೀಕಿಸುವ ಹಕ್ಕು ಪ್ರಜೆಗಳಿಗೆ ಇರುತ್ತದೆ’ ಎಂದು ಹೇಳಿದರು.

ಜನ ಮತ

ಸ್ವಾತಂತ್ರ್ಯ ಹೋರಾಟಗಾರರೂ ಆಗಿರುವ 95 ವರ್ಷ ವಯಸ್ಸಿನ ಎಲ್ ಅನಂತರಾಮನ್ ಮತ್ತು ಅವರ ಪತ್ನಿ ನಾಗರತ್ನ ಅವರು ಗಾರ್ವೆಬಾವಿ ಪಾಳ್ಯದಲ್ಲಿ ಮತದಾನ ಮಾಡಿದರು

ಮಹದೇವಪುರ ಕ್ಷೇತ್ರದ ಮಂಡೂರಿನ ಮತಗಟ್ಟೆಯಲ್ಲಿ ಶತಾಯುಷಿ (101 ವರ್ಷ) ಕಮಲಮ್ಮ ನಾರಾಯಣಸ್ವಾಮಿ ಅವರು ತಮ್ಮ ಮೊಮ್ಮಗ ತೇಜಸ್‌ಗೌಡ ಸಹಾಯದಿಂದ ಮತ ಚಲಾಯಿಸಿ ಹೊರಬಂದರು.

ಶಾಂತಿಯ ತೋಟದ ಹೂವುಗಳು... ನಗರದ ಸೇಂಟ್ ರಾಕ್ಸ್ ಬಾಲಕಿಯರ ಪ್ರೌಢಶಾಲೆಯ ಮತಗಟ್ಟೆಯಲ್ಲಿ ಮಹಿಳೆಯರು ಬುಧವಾರ ಮತ ಚಲಾಯಿಸಿ ಶಾಹಿ ಗುರುತನ್ನು ತೋರಿಸಿ ಗಮನ ಸೆಳೆದರು – ಪ್ರಜಾವಾಣಿ ಚಿತ್ರ: ಎಂ.ಎಸ್. ಮಂಜುನಾಥ್

ಪೀಣ್ಯ ದಾಸರಹಳ್ಳಿ ಸಮೀಪದ ನೆಲಗದರನಹಳ್ಳಿಯ 85 ವರ್ಷದ ವೃದ್ಧೆ, ತಮ್ಮ ಪುತ್ರ ನಿಸರ್ಗ ಕೆಂಪರಾಜು ಅವರ ನೆರವಿನಲ್ಲಿ ಮತಗಟ್ಟೆಗೆ ಬಂದು ಹಕ್ಕು ಚಲಾಯಿಸಿದರು

‘ಸೋನಿಯಾ ‘ಸಾರ್ವಭೌಮತ್ವ’ ಪದ ಬಳಸಿಲ್ಲ’

ನವದೆಹಲಿ (ಪಿಟಿಐ): ‘ಕರ್ನಾಟಕ ವಿಧಾನಸಭಾ ಚುನಾವಣೆಯ ಪ್ರಚಾರದ ವೇಳೆ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು ಭಾರತದ ಸಾರ್ವಭೌಮತ್ವದ ವಿರುದ್ಧ ಮಾತನಾಡಿಲ್ಲ’ ಎಂದು ಕಾಂಗ್ರೆಸ್ ಬುಧವಾರ ಸ್ಪಷ್ಟಪಡಿಸಿದೆ.

‘ಸೋನಿಯಾ ಅವರು ‘ಸಾರ್ವಭೌಮತ್ವ’ ಎಂಬ ಪದವನ್ನೇ ಪ್ರಯೋಗಿಸಿಲ್ಲ. ಪಕ್ಷವು ಈ ಹಿಂದೆ ಮಾಡಿದ್ದ ಟ್ವೀಟ್ ಅನ್ನು ತಪ್ಪಾಗಿ ಅರ್ಥೈಸಲಾಗಿದೆ. ಹೀಗಾಗಿ ಅದನ್ನು ಅಳಿಸಿಹಾಕಿದ್ದೇವೆ’ ಎಂದು ಕಾಂಗ್ರೆಸ್ ಟ್ವೀಟ್ ಮಾಡಿದೆ.

ಕರ್ನಾಟಕದ ಅಸ್ಮಿತೆಯ ವಿರುದ್ಧ ಮಾತನಾಡಿರುವ ಸೋನಿಯಾ ವಿರುದ್ಧ ಕ್ರಮ ಕೈಗೊಳ್ಳುವಂತೆ ಬಿಜೆಪಿ ನಿಯೋಗವು ಆಯೋಗಕ್ಕೆ ದೂರು ನೀಡಿತ್ತು. ಈ ಕುರಿತು ಆಯೋಗವು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಂದ ಸ್ಪಷ್ಟನೆ ಕೇಳಿತ್ತು.

ಭಾರತದ ಪ್ರಸ್ತಾವಕ್ಕೆ ಚೀನಾ ಆಕ್ಷೇಪ

ವಿಶ್ವಸಂಸ್ಥೆ (ಪಿಟಿಐ): ಜೈಷ್–ಎ–ಮೊಹಮ್ಮದ್ ಉಗ್ರ ಸಂಘಟನೆಯ ನಾಯಕ ಅಬ್ದುಲ್ ರೌಫ್ ಅಜರ್‌ನನ್ನು ಕಪ್ಪುಪಟ್ಟಿಗೆ ಸೇರಿಸುವಂತೆ ಕೋರಿ ಭಾರತವು ವಿಶ್ವಸಂಸ್ಥೆಗೆ ಸಲ್ಲಿಸಿರುವ ಪ್ರಸ್ತಾವಕ್ಕೆ ಚೀನಾ ಬುಧವಾರ ಆಕ್ಷೇಪ ವ್ಯಕ್ತಪಡಿಸಿದೆ.

ಪ್ರಯಾಣಕ್ಕೆ ನಿರ್ಬಂಧ, ಆಸ್ತಿ ಜಪ್ತಿ ಸೇರಿದಂತೆ ಅಜರ್ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳುವಂತೆ ಆಗ್ರಹಿಸಿ ಭಾರತ ಮತ್ತು ಅಮೆರಿಕ ಕಳೆದ ವರ್ಷದ ಆಗಸ್ಟ್‌ನಲ್ಲಿ ವಿಶ್ವಸಂಸ್ಥೆಗೆ ಪ್ರಸ್ತಾವ ಸಲ್ಲಿಸಿದ್ದವು. ಪಾಕಿಸ್ತಾನದ ಸಹವರ್ತಿಯಾಗಿರುವ ಚೀನಾ ಆಗಿನಿಂದಲೂ ಇದಕ್ಕೆ ತಡೆಯೊಡ್ಡುತ್ತಿದೆ.

ಮತದಾರರು ಸರತಿಯಲ್ಲಿ ಕುಳಿತು ಮತದಾನಕ್ಕೆ ಕಾದರು

ದೊಡ್ಡನಾಗಮಂಗಲ: ಕಾದು ಕುಳಿತಿದ್ದ ಮತದಾರರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೊಡ್ಡ ನಾಗಮಂಗಲದ ಮತ ಕೇಂದ್ರದಲ್ಲಿ ಆರು ಸಾವಿರಕ್ಕೂ ಹೆಚ್ಚು ಜನರಿಗೆ ಮತದಾನಕ್ಕೆ ಅವಕಾಶ ಕಲ್ಪಿಸಿದ್ದರಿಂದ ಗಂಟೆಗಟ್ಟಲೆ ಕಾಯಬೇಕಾದ ಸ್ಥಿತಿ ಇತ್ತು.

ಎಲ್ಲರೂ ಮತದಾನ ಮಾಡಬೇಕು ಎಂದು ಜಾಗೃತಿ ಮೂಡಿಸುವ ಅಧಿಕಾರಿಗಳು, ಮತದಾನಕ್ಕೆ ಸೂಕ್ತ ವ್ಯವಸ್ಥೆ ಮಾಡಿಲ್ಲ. ಕಾಯಬೇಕಾದ ಅನಿವಾರ್ಯತೆ ಸೃಷ್ಟಿಸಿದ್ದಾರೆ ಎಂದು ಮತದಾರರು ಆಕ್ರೋಶ ವ್ಯಕ್ತಪಡಿಸಿದರು.

ಇದಕ್ಕೆ ಸ್ಪಷ್ಟನೆ ನೀಡಿರುವ ಚುನಾವಣಾ ಆಯೋಗ, ‘ದೊಡ್ಡ ನಾಗಮಂಗಲದಲ್ಲಿ 6,160 ಮತದಾರರಿದ್ದು, ಅವರಿಗಾಗಿ ಒಂದು ಸಹಾಯಕ ಮತಗಟ್ಟೆ ಸೇರಿ ನಾಲ್ಕು ಮತಗಟ್ಟೆಗಳನ್ನು ರಚಿಸಲಾಗಿತ್ತು. ಒಂದು ಮತಗಟ್ಟೆಯಲ್ಲಿ ಮಾತ್ರ ಮತದಾರರ ಸಂಖ್ಯೆ 2,121 ಇತ್ತು. ಒಂದೇ ಪ್ರವೇಶದ್ವಾರ ಇದ್ದುದರಿಂದ ಸ್ವಲ್ಪ ಗೊಂದಲ ಉಂಟಾಗಿದೆ’ ಎಂದು ತಿಳಿಸಿದೆ.

‘ಮತದಾರರಿಗೆ ಕುರ್ಚಿ, ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿತ್ತು. ಸಮಯ ಮುಗಿದ ನಂತರವೂ ಸರದಿಯಲ್ಲಿದ್ದ 44 ಜನರಿಗೆ ಟೋಕನ್ ನೀಡಿ ಮತದಾನ ಮಾಡಿಸಲಾಗಿದೆ’ ಎಂದು ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಚುನಾವಣಾಧಿಕಾರಿ ವಿವರಿಸಿದ್ದಾರೆ.

NAVODAYA VIDYALAYA SAMITI [HYDERABAD REGION]
Online applications are invited for Engagement of Counselors on contract basis, against purely temporary & tentative vacancies, at the Jawahar Navodaya Vidyalaya of the States of Andhra Pradesh, Telangana, Karnataka, Union of Puducherry, Lakshadweep and Andaman & Nicobar Islands. The last date for submission of application through online is 26-05-2023.
For further details visit Navodaya Vidyalaya Samiti, Regional Office, Hyderabad Website :
https://navodaya.gov.in/nvs/ro/Hyderabad/en/home/
DEPUTY COMMISSIONER

ಸಂಕ್ಷಿಪ್ತ ಸುದ್ದಿ

ಜಮಾಅತೆ ಇಸ್ಲಾಮೀ ಹಿಂದ್‌ಗೆ ನೇಮಕ

ಡಾ. ಮುಹಮ್ಮದ್ ಸಾದ್ ಬೆಳಗಾಮಿ

ಬೆಂಗಳೂರು: ಜಮಾಅತೆ ಇಸ್ಲಾಮೀ ಹಿಂದ್ ಕರ್ನಾಟಕದ ರಾಜ್ಯ ಘಟಕದ ಅಧ್ಯಕ್ಷರಾಗಿ ಡಾ. ಮುಹಮ್ಮದ್ ಸಾದ್ ಬೆಳಗಾಮಿ ಮರು ನೇಮಕಗೊಂಡಿದ್ದಾರೆ.

2019-2023ರವರೆಗೆ ರಾಜ್ಯ ಘಟಕದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರು. ಜಮಾಅತ್ ರಾಷ್ಟ್ರಾಧ್ಯಕ್ಷ ಸಯ್ಯದ್ ಸಾದಾತುಲ್ಲಾ ಹುಸೈನಿ ಅವರು ಸಾದ್ ಬೆಳಗಾಮಿ ಅವರನ್ನು ಮತ್ತೊಂದು ಅವಧಿಗೆ ನೇಮಿಸಿದ್ದಾರೆ.

ವೃತ್ತಿಯಲ್ಲಿ ವೈದ್ಯರಾಗಿರುವ ಬೆಳಗಾಮಿ, ಬೆಂಗಳೂರಿನ ಖಾಸಗಿ ಆಸ್ಪತ್ರೆಗಳಲ್ಲಿ ಮೂತ್ರಶಾಸ್ತ್ರ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ರಾಜ್ಯ ಘಟಕದ ಅಧ್ಯಕ್ಷರ ಅವಧಿ 4 ವರ್ಷಗಳಾಗಿದ್ದು, 2027ರವರೆಗೆ ಈ ಸ್ಥಾನದಲ್ಲಿ ಮುಂದುವರಿಯಲಿದ್ದಾರೆ.

ಬೆಂಗಳೂರಿನ ಮಹಿಳೆಗೆ ದೆಹಲಿಯಲ್ಲಿ ವಂಚನೆ

ನವದೆಹಲಿ (ಪಿಟಿಐ): ಬೆಂಗಳೂರು ಮೂಲದ ಮಹಿಳೆ ಮ್ಯಾಟ್ರಿಮೋನಿ ವೆಬ್‌ಸೈಟ್‌ವೊಂದರ ಮೂಲಕ ದೆಹಲಿಯ ವ್ಯಕ್ತಿಯೊಂದಿಗೆ ಸಂಪರ್ಕಕ್ಕೆ ಬಂದು ವಂಚನೆಗೊಳಗಾದ ಪ್ರಸಂಗ ನಡೆದಿದೆ ಎಂದು ಪೊಲೀಸರು ಬುಧವಾರ ತಿಳಿಸಿದ್ದಾರೆ.

39 ವರ್ಷದ ಮಹಿಳೆ ಏರ್‌ಲೈನ್ಸ್ ಉದ್ಯೋಗಿಯಾಗಿದ್ದು, 15 ದಿನಗಳ ಹಿಂದೆ ವಧು-ವರ ಅನ್ವೇಷಣೆಗೆ ಸಂಬಂಧಿತ ಮದುವೆ ವೆಬ್‌ಸೈಟ್‌ವೊಂದರ ಮೂಲಕ ಅನ್ಮೋಲ್ ಜೈನ್ ಎಂಬುವವರ ಸಂಪರ್ಕಕ್ಕೆ ಬಂದಿದ್ದರು.

'ಅನ್ಮೋಲ್ ತಾನೊಬ್ಬ ಉದ್ಯಮಿ ಎಂದು ಹೇಳಿಕೊಂಡಿದ್ದ. ಆತನ ಕುಟುಂಬಕ್ಕೆ ನನ್ನನ್ನು ಪರಿಚಯಿಸಿಕೊಳ್ಳುವ ನೆಪದಿಂದ ದೆಹಲಿಗೆ ಕರೆಸಿಕೊಂಡಿದ್ದ. ಈ ಸಂದರ್ಭ ಮನಮೆಚ್ಚುವ ಉಡುಪು ಹಾಗೂ ಚಿನ್ನಾಭರಣ ತರುವಂತೆ ಆರೋಪಿ ನನ್ನಲ್ಲಿ ಕೇಳಿಕೊಂಡಿದ್ದ' ಎಂದು ಮಹಿಳೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಅದಾನಿ: ನಾಳೆ 'ಸುಪ್ರೀಂ'ನಲ್ಲಿ ಅರ್ಜಿಗಳ ವಿಚಾರಣೆ

ನವದೆಹಲಿ (ಪಿಟಿಐ): ಅದಾನಿ ಸಮೂಹ ಕುರಿತು ಅಮೆರಿಕದ ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆ ಬಿಡುಗಡೆ ಮಾಡಿದ್ದ ವರದಿ ಹಿನ್ನೆಲೆಯಲ್ಲಿ ಎದ್ದಿರುವ ವಿವಾದಕ್ಕೆ ಸಂಬಂಧಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂಕೋರ್ಟ್ ಇದೇ 12ರಂದು ನಡೆಸಲಿದೆ.

ಮೊದಲ 10 ಬೀದಿಗಳಲ್ಲಿ ಬೆಂಗಳೂರಿನ 4ಕ್ಕೆ ಸ್ಥಾನ • ನೈಟ್ ಫ್ರ್ಯಾಂಕ್ ಇಂಡಿಯಾ ವರದಿ

ಪ್ರಮುಖ ಬೀದಿ: ಎಂ.ಜಿ. ರಸ್ತೆ ಪ್ರಥಮ

ನವದೆಹಲಿ (ಪಿಟಿಐ): ಉತ್ತಮ ಶಾಪಿಂಗ್ ಅನುಭವ, ಊಟ ಮತ್ತು ಮನರಂಜನೆ ಲಭ್ಯವಿರುವ ದೇಶದ ಪ್ರಮುಖ 10 ಬೀದಿಗಳ ಪೈಕಿ ನಾಲ್ಕು ಬೀದಿಗಳು ಬೆಂಗಳೂರಿನಲ್ಲೇ ಇವೆ ಎಂದು ರಿಯಲ್ ಎಸ್ಟೇಟ್ ಸಲಹಾ ಸಂಸ್ಥೆ ನೈಟ್ ಫ್ರ್ಯಾಂಕ್ ಇಂಡಿಯಾ ವರದಿ ಹೇಳಿದೆ.

ಬೆಂಗಳೂರಿನ ಎಂ.ಜಿ. ರಸ್ತೆ, ಕಮರ್ಷಿಯಲ್ ಸ್ಟ್ರೀಟ್, ಬ್ರಿಗೇಡ್ ರಸ್ತೆ ಮತ್ತು ಚರ್ಚ್ ಸ್ಟ್ರೀಟ್ ಗ್ರಾಹಕರನ್ನು ಆಕರ್ಷಿಸುವ ಪ್ರಮುಖ 10 ಬೀದಿಗಳಲ್ಲಿ ಸ್ಥಾನ ಪಡೆದಿವೆ ಎಂದು ವರದಿಯಲ್ಲಿ ತಿಳಿಸಿದೆ. ಬೆಂಗಳೂರು, ಹೈದರಾಬಾದ್, ಕೋಲ್ಕತ್ತ, ಮುಂಬೈ ಸೇರಿದಂತೆ ದೇಶದ 8 ನಗರಗಳಲ್ಲಿನ ಪ್ರಮುಖವಾದ 30 ಬೀದಿಗಳಿಗೆ ಸಂಬಂಧಿಸಿದ ವರದಿಯನ್ನು ಸಂಸ್ಥೆಯು ಬುಧವಾರ ಬಿಡುಗಡೆ ಮಾಡಿದೆ.

ಆಧುನಿಕ ರಿಟೇಲ್ ಮಳಿಗೆಗಳು, ಉತ್ತಮ ಖರೀದಿ ಅನುಭವ, ಊಟ ಹಾಗೂ ಮನರಂಜನೆಯಂತಹ ಸೌಕರ್ಯಗಳು ಇರುವ ಕಾರಣಗಳಿಂದಾಗಿ ಪ್ರಮುಖ 30 ಬೀದಿಗಳಲ್ಲಿ 7 ಬೀದಿಗಳು ಬೆಂಗಳೂರಿನಲ್ಲಿಯೇ ಇವೆ.

ಪಾರ್ಕಿಂಗ್, ಸಾರ್ವಜನಿಕ ಸಾರಿಗೆ, ಮಳಿಗೆಗಳಲ್ಲಿ ಉತ್ಪನ್ನಗಳ ಪ್ರದರ್ಶನ (ಸ್ಟೋರ್ ವಿಸಿಬಿಲಿಟಿ), ಗ್ರಾಹಕರು ವೆಚ್ಚ ಮಾಡುವ ಮೊತ್ತ ಹಾಗೂ ಸರಾಸರಿ ವಹಿವಾಟಿನ ಆಧಾರದ ಮೇಲೆ ಪ್ರಮುಖ ಬೀದಿಗಳಿಗೆ ಸ್ಥಾನ ನೀಡಲಾಗಿದೆ ಎಂದು ಸಂಸ್ಥೆಯು ಹೇಳಿದೆ.

ಬೆಂಗಳೂರಿನ ಎಂ.ಜಿ ರಸ್ತೆ

ದೇಶದ ಪ್ರಮುಖ 10 ಬೀದಿಗಳು

ನಗರ	ಬೀದಿ
ಬೆಂಗಳೂರು	ಎಂ.ಜಿ. ರಸ್ತೆ
ಹೈದರಾಬಾದ್	ಸೋಮಾಜಿಗುಡ
ಮುಂಬೈ	ಲಿಂಕಿಂಗ್ ರಸ್ತೆ
ದೆಹಲಿ	ಸೌತ್ ಎಕ್ಸ್‌ಟೆನ್ಷನ್
ಕೋಲ್ಕತ್ತ	ಪಾರ್ಕ್ ಸ್ಟ್ರೀಟ್, ಕಾಮಾಕ್ ಸ್ಟ್ರೀಟ್
ಚೆನ್ನೈ	ಅಣ್ಣಾ ನಗರ್
ಬೆಂಗಳೂರು	ಕಮರ್ಷಿಯಲ್ ಸ್ಟ್ರೀಟ್
ನೊಯಿಡಾ	ಸೆಕ್ಟರ್ 18 ಮಾರ್ಕೆಟ್
ಬೆಂಗಳೂರು	ಬ್ರಿಗೇಡ್ ರಸ್ತೆ
ಬೆಂಗಳೂರು	ಚರ್ಚ್ ಸ್ಟ್ರೀಟ್

ಮೊದಲ ಸ್ಥಾನದಲ್ಲಿ ಎಂಜಿ ರಸ್ತೆ: ಪ್ರಮುಖ 30 ಬೀದಿಗಳ ಪಟ್ಟಿಯಲ್ಲಿ ಬೆಂಗಳೂರಿನ ಎಂ.ಜಿ. ರಸ್ತೆಯು ಮೊದಲ ಸ್ಥಾನ ಪಡೆದಿದೆ. ಹೈದರಾಬಾದ್‌ನ ಸೋಮಾಜಿಗುಡ ಮತ್ತು ಮುಂಬೈನ ಲಿಂಕಿಂಗ್ ರಸ್ತೆ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದುಕೊಂಡಿವೆ ಎಂದು ನೈಟ್ ಫ್ರ್ಯಾಂಕ್ ಹೇಳಿದೆ.

ರಿಟೇಲ್ ವಹಿವಾಟು ಹೆಚ್ಚು ಪೈಪೋಟಿಯಿಂದ ಕೂಡಿದೆ. ಭಾರತದ ನಗರಗಳು ಹೆಚ್ಚು ಆಧುನೀಕರಣಕ್ಕೆ ತೆರೆದುಕೊಳ್ಳುತ್ತಿವೆ. ದೇಶದಲ್ಲಿ ಹಲವು ಪ್ರಮುಖ ಬೀದಿಗಳಲ್ಲಿ ಪಾರ್ಕಿಂಗ್, ಉತ್ಪನ್ನಗಳ ಪ್ರದರ್ಶನ ಸೇರಿದಂತೆ ಗ್ರಾಹಕರಿಗೆ ಅನುಕೂಲ ಆಗುವ ಸೌಲಭ್ಯಗಳನ್ನು ಕಲ್ಪಿಸುವುದರಲ್ಲಿ ಸುಧಾರಣೆ ಕಂಡುಬರುತ್ತಿದೆ ಎಂದು ನೈಟ್ ಫ್ರ್ಯಾಂಕ್ ಇಂಡಿಯಾದ ಅಧ್ಯಕ್ಷ ಶಿಶಿರ್ ಬೈಜಲ್ ಹೇಳಿದ್ದಾರೆ.

ತೀರ್ಥಹಳ್ಳಿ ತಾಲ್ಲೂಕು: 23 ಗ್ರಾಮಗಳಿಗೆ ಟ್ಯಾಂಕರ್ ಮೂಲಕ ನೀರು ಪೂರೈಕೆ

ಬತ್ತಿದ ತುಂಗೆ, ಕುಡಿಯುವ ನೀರಿಗೆ ಹಾಹಾಕಾರ

• ವೆಂಕಟೇಶ ಜಿ.ಎಚ್

ತೀರ್ಥಹಳ್ಳಿ ತಾಲ್ಲೂಕಿನ ಹೆದ್ದೂರು ಸಮೀಪ ತುಂಗೆಯ ಒಡಲು ಬರಿದಾಗಿರುವ ನೋಟ –ಪ್ರಜಾವಾಣಿ ಚಿತ್ರ: ವಿ.ನಿರಂಜನ

ತೀರ್ಥಹಳ್ಳಿ ತಾಲ್ಲೂಕಿನ ಕುಡುಮಲ್ಲಿಗೆ ಗ್ರಾಮಕ್ಕೆ ಟ್ಯಾಂಕರ್ ಮೂಲಕ ಕುಡಿಯುವ ನೀರು ಪೂರೈಸಲಾಗುತ್ತಿದೆ

ಶಿವಮೊಗ್ಗ: ಮಲೆನಾಡಿನ ಹೃದಯಭಾಗ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ತುಂಗಾ ನದಿಯ ಒಡಲು ಸಂಪೂರ್ಣ ಬರಿದಾಗಿದೆ. ನದಿಯ ತಟದ ಗ್ರಾಮಗಳಲ್ಲಿ ಕುಡಿಯುವ ನೀರಿಗೆ ತೀವ್ರ ಹಾಹಾಕಾರ ತಲೆದೋರಿದೆ.

ತೀರ್ಥಹಳ್ಳಿ ತಾಲ್ಲೂಕಿನ 95 ಗ್ರಾಮಗಳಲ್ಲಿ ಕುಡಿಯುವ ನೀರಿನ ತೀವ್ರ ಸಮಸ್ಯೆ ಕಂಡುಬಂದಿದೆ. ಆರು ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ 23 ಗ್ರಾಮಗಳಿಗೆ ಇದೇ ಮೊದಲ ಬಾರಿಗೆ ಟ್ಯಾಂಕರ್ ಮೂಲಕ ಕುಡಿಯುವ ನೀರು ಪೂರೈಸಲಾಗುತ್ತಿದೆ.

'ಪ್ರತೀ ಬಾರಿ ಮಲೆನಾಡಿನಲ್ಲಿ ಬೇಸಿಗೆಯಲ್ಲೂ ಒಂದೆರಡು ಬಾರಿ ದೊಡ್ಡ ಮಳೆ ಆಗಿ ನದಿಯಲ್ಲಿ ಒಂದಷ್ಟು ನೀರು ಇರುತ್ತಿತ್ತು. ಈ ಬಾರಿ ಮಳೆ ಸುರಿದಿಲ್ಲ. ಬಿಸಿಲ ಝಳ ಹೆಚ್ಚಿದೆ. ಹೀಗಾಗಿ ನದಿ ಪೂರ್ಣ ಬತ್ತಿ ಹೋಗಿದೆ. ಜನ-ಜಾನುವಾರು ಮಾತ್ರವಲ್ಲ ಸುತ್ತಲಿನ ಅರಣ್ಯ ಪ್ರದೇಶದಲ್ಲಿನ ಕಾಡು ಪ್ರಾಣಿಗಳಿಗೂ ಕುಡಿಯುವ ನೀರಿಗೆ ತೀವ್ರ ತೊಂದರೆ ಉಂಟಾಗಿದೆ' ಎಂದು ಚಕ್ಕೋಡುಬೈಲು ಗ್ರಾಮದ ಸಿ.ಎಸ್.ರಾಜೇಶ್ ಶೆಟ್ಟಿ ಹೇಳುತ್ತಾರೆ.

ಬಯಲು ಸೀಮೆಯಲ್ಲಿ ಕುಡಿಯುವ ನೀರಿಗೆ ತೊಂದರೆ ಸಾಮಾನ್ಯ. ಆದರೆ, ಮಲೆನಾಡಿನಲ್ಲಿ ಅದರಲ್ಲೂ ತೀರ್ಥಹಳ್ಳಿಯ ಭೌಗೋಳಿಕ ಪರಿಸರದಲ್ಲಿ ಈ ರೀತಿ ಹಾಹಾಕಾರ ಆಗಿರುವುದು ವಿಶೇಷ ಎಂದು ಅವರು ತಿಳಿಸುತ್ತಾರೆ.

ವಿದ್ಯುತ್ ಕಡಿತಕ್ಕೆ ಸೂಚನೆ: ತುಂಗಾ ನದಿ ಪಾತ್ರದಲ್ಲಿನ ತೋಟಗಳಿಗೆ ರೈತರು ಪಂಪ್‌ಸೆಟ್ ಮೂಲಕ ನದಿ ನೀರು ಹಾಯಿಸಿಕೊಳ್ಳುತ್ತಿದ್ದಾರೆ. ಇದು ನದಿಯ ಒಡಲು ಬರಿದಾಗಲು ಕಾರಣವಾಗಿದೆ. ಕುಡಿಯುವ ನೀರಿಗೆ ಆದ್ಯತೆ ನೀಡಬೇಕಿದೆ. ಹೀಗಾಗಿ ತೋಟಗಳಿಗೆ ನಿತ್ಯ ನೀರು ಹಾಯಿಸುವುದು ತಪ್ಪಿಸಲು ವಾರಕ್ಕೆ ಎರಡು ಬಾರಿ ಮಾತ್ರ ವಿದ್ಯುತ್ ಪೂರೈಸುವಂತೆ ಮೆಸ್ಕಾಂಗೆ ಜಿಲ್ಲಾಡಳಿತ ಸೂಚಿಸಿದೆ.

ಪ್ರಜಾವಾಣಿ ವಿಶೇಷ

ಮೀನುಗಳ ರಕ್ಷಣೆಯೇ ಸವಾಲು..

ತೀರ್ಥಹಳ್ಳಿ ತಾಲ್ಲೂಕಿನ ಚಿಬ್ಬಲಗುಡ್ಡೆ ಸಮೀಪ ತುಂಗಾ ನದಿಯ 500 ಮೀಟರ್ ಪ್ರದೇಶವನ್ನು ಸರ್ಕಾರ ಮತ್ಸ್ಯಧಾಮ ಎಂದು ಗುರುತಿಸಿದೆ. ಸ್ಥಳೀಯರು 'ದೇವರ ಮೀನು' ಎಂದು ಕರೆಯುವ ಮಹಶೀರ್ ಪ್ರಭೇದದ ಮೀನುಗಳು ಅಲ್ಲಿ ಕಾಣಸಿಗುತ್ತವೆ. ಅಲ್ಲಿ ನೀರು ಕಡಿಮೆ ಆಗಿರುವ ಕಾರಣ ಮೀನುಗಳಿಗೆ ಅಪಾಯ ಎದುರಾಗಿದೆ.

ಇದೇ ಮೊದಲ ಬಾರಿಗೆ ನದಿಯಲ್ಲಿ ನೀರಿನ ಪ್ರಮಾಣ ಕಡಿಮೆ ಆಗಿದೆ. ಹೀಗಾಗಿ ಸ್ಥಳೀಯ ಗ್ರಾಮ ಪಂಚಾಯಿತಿಗೆ ಸೂಚಿಸಿ ನದಿಯಲ್ಲಿನ ಮೋಟಾರ್ ಪಂಪ್ ಸೆಟ್ ತೆರವುಗೊಳಿಸಲಾಗಿದೆ. ಇನ್ನು ಮಳೆಯೇ ಬರಬೇಕು. ಅದೊಂದೇ ನಮಗೆ ಇರುವ ಪರಿಹಾರ ಎಂದು ಮೀನುಗಾರಿಕೆ ಇಲಾಖೆ ಸಹಾಯಕ ನಿರ್ದೇಶಕಿ ಸಹನಾ 'ಪ್ರಜಾವಾಣಿ'ಗೆ ತಿಳಿಸಿದರು.

'ತಾಲ್ಲೂಕಿನಲ್ಲಿ ಫೆಬ್ರುವರಿಯಿಂದ ಕುಡಿಯುವ ನೀರಿಗೆ ಸಮಸ್ಯೆ ಕಾಣಿಸಿಕೊಂಡಿದೆ. 10 ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಇಂತಹ ಪರಿಸ್ಥಿತಿ ಎದುರಾಗಿದೆ. ಶಿವಮೊಗ್ಗ, ಹೊಸನಗರದಲ್ಲಿ ಮಳೆ ಸುರಿಯುತ್ತಿದೆ. ಆದರೆ, ನಮ್ಮಲ್ಲಿ ಮಳೆಯ ಸುಳಿವಿಲ್ಲ. ಇದರಿಂದಾಗಿ ಪರಿಸ್ಥಿತಿ ಬಿಗಡಾಯಿಸಿದೆ' ಎಂದು ತೀರ್ಥಹಳ್ಳಿ ತಾಲ್ಲೂಕು ಪಂಚಾಯಿತಿ ಮುಖ್ಯಾಧಿಕಾರಿ ಎನ್.ಶೈಲಾ ಹೇಳುತ್ತಾರೆ.

'ಅಂತರ್ಜಲ ಕುಸಿತ ಕೂಡ ಆಗಿದೆ. ಗುಡ್ಡೆಕೊಪ್ಪ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 500ರಿಂದ 600 ಅಡಿ ಕೊರೆದರೂ ನೀರು ಸಿಕ್ಕಿಲ್ಲ. ಮೂರು ಕಡೆ ಕೊಳವೆ ಬಾವಿ ಕೊರೆಯಿಸಿದರೆ ಎರಡು ಕಡೆ ವಿಫಲವಾಗುತ್ತಿವೆ. ಇರುವ ಕೊಳವೆ ಬಾವಿಗಳನ್ನು ಆಳಕ್ಕೆ ಕೊರೆಯಿಸಿ, ಬಾವಿಗಳಿಗೆ ರಿಂಗ್ ಅಳವಡಿಸಿ ನೀರು ಸಂಗ್ರಹಿಸುತ್ತಿದ್ದೇವೆ. ಬೇರೆ ಮೂಲಗಳಿಂದ ನೀರು ಕೊಡಲು ಸಾಧ್ಯವಾಗದ ಕಡೆ ಅನಿವಾರ್ಯವಾಗಿ ಟ್ಯಾಂಕರ್ ಮೂಲಕ ನೀರು ಕೊಡುತ್ತಿದ್ದೇವೆ' ಎಂದು ಹೇಳಿದರು.

ನೀರಿಗಾಗಿ ಚುನಾವಣೆ ಬಹಿಷ್ಕಾರ!

ಕುಡಿಯುವ ನೀರು ಪೂರೈಕೆಗೆ ಆಗ್ರಹಿಸಿ ಮೇಲಿನ ಕುರುವಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹುಣಸವಳ್ಳಿ, ಹೊನ್ನೆತಾಳು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಶಿರೂರು ಗ್ರಾಮಸ್ಥರು ಚುನಾವಣೆ ಬಹಿಷ್ಕಾರಿಸಲು ನಿರ್ಧರಿಸಿದ್ದರು. ಮಲೆನಾಡಿನಲ್ಲಿ ರಸ್ತೆ, ಕಾಲುಸಂಕಕ್ಕೆ ಬೇಡಿಕೆ ಇರಿಸಿ ಮತದಾನ ಬಹಿಷ್ಕಾರಕ್ಕೆ ಮುಂದಾಗುವುದು ಸಾಮಾನ್ಯ. ಆದರೆ, ಇದೇ ಮೊದಲ ಬಾರಿಗೆ ಕುಡಿಯುವ ನೀರಿಗಾಗಿ ಚುನಾವಣೆಯ ಬಹಿಷ್ಕಾರದ ಬೆದರಿಕೆ ಒಡ್ಡಲಾಗಿದೆ. ಗ್ರಾಮಸ್ಥರ ಅಳಲಿಗೆ ಸ್ಪಂದಿಸಿದ ತಾಲ್ಲೂಕು ಪಂಚಾಯಿತಿ ಟ್ಯಾಂಕರ್‌ನಲ್ಲಿ ನೀರು ಪೂರೈಕೆಗೆ ವ್ಯವಸ್ಥೆ ಮಾಡಿದೆ.

ಸುದ್ದಿ 2 ನಿಮಿಷ

ಬಯಲು ಬಹಿರ್ದೆಸೆ ಮುಕ್ತ: ಕರ್ನಾಟಕ ಶೇ 99.5 ಸಾಧನೆ

ನವದೆಹಲಿ: 'ಸ್ವಚ್ಛ ಭಾರತ ಮಿಷನ್ ಗ್ರಾಮೀಣ್ ಅಡಿಯಲ್ಲಿ ದೇಶವು ಮತ್ತೊಂದು ಮೈಲುಗಲ್ಲು ಸಾಧಿಸಿದೆ. ಮಿಷನ್‌ನ ಎರಡನೇ ಹಂತದ ಯೋಜನೆಯಲ್ಲಿ ದೇಶದ ಶೇ 50ರಷ್ಟು ಹಳ್ಳಿಗಳು ಬಯಲು ಬಹಿರ್ದೆಸೆ ಮುಕ್ತ (ಒಡಿಎಫ್) ಸ್ಥಾನಮಾನ ಪಡೆದಿವೆ' ಎಂದು ಕೇಂದ್ರ ಜಲಶಕ್ತಿ ಸಚಿವಾಲಯ ಪ್ರಕಟಿಸಿದೆ.

ಈ ಗ್ರಾಮಗಳು ಘನ ಅಥವಾ ದ್ರವ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಗಳನ್ನು ಅಳವಡಿಸಿಕೊಂಡಿವೆ. ಇಲ್ಲಿಯವರೆಗೆ 2.96 ಲಕ್ಷ ಹಳ್ಳಿಗಳು ಬಯಲು ಬಹಿರ್ದಸೆ ಮುಕ್ತ ಪ್ಲಸ್ ಎಂದು ಘೋಷಿಸಿಕೊಂಡಿವೆ. ಇದು 2024-25ರ ವೇಳೆಗೆ ಸ್ವಚ್ಛ ಭಾರತ ಮಿಷನ್ ಗ್ರಾಮೀಣ್ ಎರಡನೇ ಹಂತದ ಗುರಿಗಳನ್ನು ಸಾಧಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆ ಎಂದು ಸಚಿವಾಲಯ ಹೇಳಿಕೊಂಡಿದೆ.

ಒಡಿಎಫ್ ಪ್ಲಸ್ ಗ್ರಾಮಗಳ ಶೇಕಡಾವಾರು ಪ್ರಮಾಣದಲ್ಲಿ ತೆಲಂಗಾಣ (ಶೇ 100), ಕರ್ನಾಟಕ (ಶೇ 99.5), ತಮಿಳುನಾಡು (ಶೇ 97.8) ಮತ್ತು ಉತ್ತರ ಪ್ರದೇಶ (ಶೇ 95.2) ಉನ್ನತ ಸಾಧನೆ ಮಾಡಿವೆ ಎಂದು ಸಚಿವಾಲಯ ತಿಳಿಸಿದೆ.

ಸ್ವಚ್ಛ ಭಾರತ ಮಿಷನ್ ಗ್ರಾಮೀಣ್ ಯೋಜನೆಗೆ ಕೇಂದ್ರ ಸರ್ಕಾರವು 2014-15 ಹಾಗೂ 2021-22 ರ ಅವಧಿಯಲ್ಲಿ ₹83,938 ಕೋಟಿ ಹಂಚಿಕೆ ಮಾಡಿತ್ತು. 2023-24ನೇ ಸಾಲಿಗೆ ₹52,138 ಕೋಟಿ ಮೀಸಲಿಡಲಾಗಿದೆ. ಜತೆಗೆ, 15ನೇ ಹಣಕಾಸು ಆಯೋಗವು ನೈರ್ಮಲೀಕರಣಕ್ಕೆ ಅನುದಾನ ಹಂಚಿಕೆ ಮಾಡಿದೆ ಎಂದು ಸಚಿವಾಲಯದ ಪ್ರಕಟಣೆ ತಿಳಿಸಿದೆ.

40 ಅಡಿ ಆಳದ ಬಾವಿಗೆ ಹಾರಿ ಮಗು ರಕ್ಷಿಸಿದ 13ರ ಬಾಲಕಿ!

ಛಾತ್ರ (ಜಾರ್ಖಂಡ್) (ಪಿಟಿಐ): ಹದಿಮೂರು ವರ್ಷದ ಬಾಲಕಿಯೊಬ್ಬಳು 40 ಅಡಿ ಆಳದ ಬಾವಿಗೆ ಹಾರಿ ಮೂರು ವರ್ಷದ ಮಗುವನ್ನು ರಕ್ಷಿಸಿರುವ ಸಾಹಸಮಯ ಪ್ರಸಂಗ ಛಾತ್ರ ಜಿಲ್ಲೆಯ ಹುಸೈನ್ ಗ್ರಾಮದಲ್ಲಿ ನಡೆದಿದೆ ಎಂದು ಬುಧವಾರ ಗ್ರಾಮಸ್ಥರು ತಿಳಿಸಿದ್ದಾರೆ.

ಈ ಘಟನೆಯು ಭಾನುವಾರ ಸಂಜೆ ನಡೆದಿದೆ. ಶಿವಂ ಕುಮಾರ್ ಎಂಬ ಮಗು ಆಟವಾಡುವ ವೇಳೆ ಬಾವಿಗೆ ಬಿದ್ದಿದೆ. ಮಗು ಬೀಳುತ್ತಿರುವುದನ್ನು ಕಂಡ ಕಾಜಲ್ ಕುಮಾರಿ ಭುಯಿಯಾನ್ ಒಂದು ಕ್ಷಣವೂ ತಡಮಾಡದೇ ತಾನೂ ಬಾವಿಗೆ ಹಾರಿದ್ದಾಳೆ. ಮಗುವನ್ನು ಒಂದು ಕೈಯಲ್ಲಿ ಹಿಡಿದು, ಮತ್ತೊಂದು ಕೈಯಲ್ಲಿ ಬಾವಿಗೆ ಅಳವಡಿಸಿದ್ದ ಪೈಪನ್ನು ಹಿಡಿದು ಇಬ್ಬರೂ ಮುಳುಗದಂತೆ ನಿಭಾಯಿಸಿದ್ದಾಳೆ. ಬಳಿಕ ನೆರವಿಗಾಗಿ ಕೂಗಿದ್ದಾಳೆ. ಆಕೆಯ ಧ್ವನಿ ಕೇಳಿ ಗ್ರಾಮಸ್ಥರು ನೆರವಿಗೆ ಧಾವಿಸುವವರೆಗೂ ಆಕೆ ಪೈಪ್ ಹಿಡಿದೇ ಹೋರಾಟ ನಡೆಸಿದ್ದಾಳೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಒಂದು ಗಂಟೆ ಬಳಿಕ ಕಾಜಲ್ ಮತ್ತು ಶಿವಂ ಇಬ್ಬರನ್ನೂ ಹಗ್ಗದ ಸಹಾಯದೊಂದಿಗೆ ರಕ್ಷಿಸಲಾಗಿದೆ. ಬಾಲಕಿ ತೀವ್ರಗಾಗಿ ಗಾಯಗೊಂಡಿದ್ದಾಳೆ. ಚಿಕಿತ್ಸೆಗಾಗಿ ಆಕೆಯನ್ನು ಹಝಾರಿಬಾಗ್‌ನ ಶೇಕ್ ಭಿಖಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

ಈ ಅಪೂರ್ವ ಧೈರ್ಯ ಮತ್ತು ಸಾಹಸ ತೋರಿದ ಬಾಲಕಿ ಬಾವಿಗೆ ಬಿದ್ದ ಮಗುವಿನ ಚಿಕ್ಕಮ್ಮ (ಅಮ್ಮನ ತಂಗಿ) ಎಂದು ಹೇಳಲಾಗಿದೆ.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ — ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ-ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಎಸ್‌ಎಸ್‌ಎಲ್‌ಸಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಚೆಕ್ ಅಥವಾ ಡಿ.ಡಿ.ರೂಪದಲ್ಲಿ ಹಣವನ್ನು 'Deccan Herald-Prajavani relief Trust'ಗೆ ಕಳುಹಿಸಬಹುದು. ದಾನಿಗಳು ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು dept.finc@printersmysore.co.inಗೆ ಮೇಲ್ ಕಳುಹಿಸಿ.

ಆನ್‌ಲೈನ್/ಚೆಕ್ ಮೂಲಕವೂ ಹಣ ವರ್ಗಾಯಿಸಬಹುದು. ₹1,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಸೆಕ್ಷನ್ 80 ಜಿ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ
https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ
'Deccan Herald-Prajavani Relief Trust'
Canara Bank, Cantonment Branch
A/c no. - 0404101200385
IFSC code - CNRB0000404
MICR Code - 560015009

ಸೂಚನೆ: ದಾನಿಗಳು ಲಕೋಟೆ ಮೇಲೆ ಶೈಕ್ಷಣಿಕ ನೆರವಿಗೆ ಕೊಡುಗೆ ಎಂದು ನಮೂದಿಸಬೇಕು

ವಿಳಾಸ: ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್-ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮ ಗಾಂಧಿ ರಸ್ತೆ ಬೆಂಗಳೂರು – 560001

ಶೈಕ್ಷಣಿಕ ನೆರವು, ವಿದ್ಯಾರ್ಥಿ ಮಾತು

'ಕಾಲೇಜಿನ ಶುಲ್ಕ ಭರಿಸಲು ಉಪಯೋಗಿಸಿದೆ'

'ಪ್ರಜಾವಾಣಿ' ನೀಡಿದ ಪ್ರೋತ್ಸಾಹಧನವನ್ನು ಕಾಲೇಜಿನ ಶುಲ್ಕ ಭರಿಸಲು ಉಪಯೋಗಿಸಿಕೊಂಡೆ. ದ್ವಿತೀಯ ಪಿಯುಸಿಗೂ ಈ ಕಾರ್ಯಕ್ರಮ ಮುಂದುವರಿದಿದ್ದರೆ ಅನುಕೂಲವಾಗುತ್ತಿತ್ತು. ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಪತ್ರಿಕೆಯ ಕಾರ್ಯ ಮುಂದುವರಿಯಲಿ. ಪತ್ರಿಕಾ ಸಂಸ್ಥೆಗೆ ಧನ್ಯವಾದಗಳು.

ಕುಶಾಲ್‌ಕುಮಾರ್ ಎಂ., ಸೊರಬ, ಶಿವಮೊಗ್ಗ

'ಶುಲ್ಕ ಕಟ್ಟಲು ಸಹಾಯ'

ದ್ವಿತೀಯ ಪಿಯುಸಿ ಪರೀಕ್ಷೆ ಶುಲ್ಕ ಕಟ್ಟಲು 'ಪ್ರಜಾವಾಣಿ' ವಿದ್ಯಾರ್ಥಿ ವೇತನ ನೆರವಾಗಿದೆ. ತುಂಬಾ ಕಷ್ಟದ ಸಮಯದಲ್ಲಿ ಹಣ ಬಂತು. ಮುಂದಿನ ದಿನಗಳಲ್ಲಿ ಮತ್ತಷ್ಟು ಸಾಧನೆ, ಓದಿಗೆ ಪ್ರೋತ್ಸಾಹ ನೀಡಿದ್ದಾರೆ. ಇದರಿಂದ ಹೊಸ ಉತ್ತೇಜನ ದೊರೆಯುತ್ತದೆ. 'ಪ್ರಜಾವಾಣಿ' ಈ ಕೆಲಸ ಹೀಗೆ ಸಾಗಲಿ. ಹಲವರ ಕಷ್ಟಕ್ಕೆ ನೆರವಾಗಲಿ.

ಕೆ.ವಿ.ಅಮೂಲ್ಯ, ತುಮಕೂರು

ಪ್ರಜಾವಾಣಿ ಪ್ರಜಾಧ್ವನಿ
ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ

ಚುನಾವಣೆಯಲ್ಲಿ ದಾಖಲೆ ಮೊತ್ತದ ನಗದು, ವಸ್ತುಗಳ ಜಪ್ತಿಯನ್ನು ಗಮನಿಸಿದರೆ, ಮತದಾರರಿಗೆ ಆಮಿಷ ತಡೆಗೆ ಕಠಿಣ ಕಾಯ್ದೆ ರೂಪಿಸಲು ಇದು ಸಕಾಲ ಎನ್ನಿಸುತ್ತದೆಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

'ಹಕ್ಕಿ-ಪಿಕ್ಕಿ ಜನರನ್ನು ಸಂಕಷ್ಟಕ್ಕೆ ದೂಡಿದ ಕಾಂಗ್ರೆಸ್'

ಜೈಪುರ (ಪಿಟಿಐ): ಸುಡಾನ್ ಸಂಘರ್ಷದಲ್ಲಿ ಸಿಲುಕಿದ್ದ ಕರ್ನಾಟಕದ ಹಕ್ಕಿ-ಪಿಕ್ಕಿ ಜನರ ಫೋಟೋವನ್ನು ಸಾಮಾಜಿಕ ಜಾಲತಾಣದಲ್ಲಿ ಪ್ರಕಟಿಸುವ ಮೂಲಕ ಕರ್ನಾಟಕ ಕಾಂಗ್ರೆಸ್ ಅವರ ಜೀವದ ಜೊತೆ ಆಟವಾಡಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಕಿಡಿಕಾರಿದರು.

ರಾಜಸ್ಥಾನದ ರಾಜ್‌ಸಮಂದ್ ಜಿಲ್ಲೆಯ ನಾಥ್ವಾರದಲ್ಲಿ ಬುಧವಾರ ₹ 5,500 ಕೋಟಿಯ ವಿವಿಧ ಯೋಜನೆಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, 'ತಮ್ಮ ಮತ ಬ್ಯಾಂಕ್ ಅನ್ನು ಗಟ್ಟಿಗೊಳಿಸಲು ಕಾಂಗ್ರೆಸ್, ಸುಡಾನ್‌ನಲ್ಲಿದ್ದ ಹಕ್ಕಿ-ಪಿಕ್ಕಿ ಜನರನ್ನು ಸಂಕಷ್ಟಕ್ಕೆ ದೂಡಿತ್ತು. ಆದರೆ ಪ್ರತಿ ಭಾರತೀಯನ ರಕ್ಷಣೆಗಾಗಿ ಮೋದಿ ಯಾವ ಮಟ್ಟಕ್ಕಾದರೂ ಹೋಗುತ್ತಾನೆ ಎಂಬುದು ಅವರಿಗೆ ತಿಳಿದಿಲ್ಲ. ಮೋದಿಗೆ ತೊಂದರೆ ಕೊಡಲು ದೇಶಕ್ಕೆ ಹಾನಿ ಮಾಡಲು ಕಾಂಗ್ರೆಸ್‌ನವರು ಹೊರಟಿದ್ದಾರೆ' ಎಂದರು.

> 'ಪ್ರಜಾಪ್ರಭುತ್ವದಲ್ಲಿ ಪ್ರತಿಪಕ್ಷಗಳನ್ನು ಗೌರವಿಸಬೇಕು. ಪ್ರಧಾನಿ ನರೇಂದ್ರ ಮೋದಿ ಅವರೂ ಈ ಹಾದಿಯಲ್ಲಿ ಸಾಗುತ್ತಾರೆ ಎಂದು ಭಾವಿಸಿದ್ದೇನೆ
> **ಅಶೋಕ್ ಗೆಹಲೋತ್,** ರಾಜಸ್ಥಾನ ಮುಖ್ಯಮಂತ್ರಿ

ಬುಡಕಟ್ಟು ಸಮುದಾಯದ ಸುಮಾರು 200 ಜನ ಸುಡಾನ್ ಸಂಘರ್ಷದಲ್ಲಿ ಸಿಲುಕಿದ್ದಾಗ, ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಅವರು ತಮ್ಮ ಟ್ವಿಟರ್‌ನಲ್ಲಿ 31 ಹಕ್ಕಿ ಪಿಕ್ಕಿ ಸದಸ್ಯರ ಚಿತ್ರವನ್ನು ಪ್ರಕಟಿಸಿ, ಇವರನ್ನು ಸುರಕ್ಷಿತವಾಗಿ ಭಾರತಕ್ಕೆ ಕರೆತರುವಂತೆ ಸಂದೇಶ ಬರೆದು ಮೋದಿ ಅವರಿಗೆ ಟ್ಯಾಗ್ ಮಾಡಿದ್ದರು.

ಇದನ್ನು ಉದ್ದೇಶಿಸಿ ಮಾತನಾಡಿದ ಮೋದಿ, 'ಸುಡಾನ್‌ನಿಂದ ಭಾರತೀಯರನ್ನು ಸುರಕ್ಷತೆಯಿಂದ ಕರೆತರುವುದು ಸರ್ಕಾರದ ಆದ್ಯತೆಯಾಗಿತ್ತು. ಇದರ ನಡುವೆ ಕಾಂಗ್ರೆಸ್, ಹಕ್ಕಿ ಪಿಕ್ಕಿಗಳ ಭಾವಚಿತ್ರವನ್ನು ಪ್ರಸಾರ ಮಾಡುವ ಮೂಲಕ ಅವರ ಜೀವಕ್ಕೆ ಕುತ್ತು ತರುವ ಪ್ರಯತ್ನ ಮಾಡಿತ್ತು. ಅಲ್ಲಿ ಅವರ ಜೀವಕ್ಕೆ ಕುತ್ತಾದರೆ, ಕರ್ನಾಟಕದ ಸರ್ಕಾರವನ್ನು ದೂಷಿಸಿ ಚುನಾವಣೆಯಲ್ಲಿ ಲಾಭ ಪಡೆದುಕೊಳ್ಳಲು ನೋಡಿದ್ದರು' ಎಂದು ಆರೋಪಿಸಿದರು.

'ಪೊಲೀಸರು ಚಿಕಿತ್ಸೆಗೆ ಕರೆ ತಂದಿದ್ದ ವ್ಯಕ್ತಿಯಿಂದಲೇ ಯುವ ವೈದ್ಯೆ ಹತ್ಯೆ'

ಡಾ.ವಂದನಾ ದಾಸ್

ಕೊಚ್ಚಿ (ಪಿಟಿಐ): 'ಕೊಲ್ಲಂ ಜಿಲ್ಲೆಯ ಕೊಟ್ಟಾರಕ್ಕರ ಪ್ರದೇಶದ ತಾಲ್ಲೂಕು ಆಸ್ಪತ್ರೆಯಲ್ಲಿ ಬುಧವಾರ ನಸುಕಿನಲ್ಲಿ ಚಿಕಿತ್ಸೆ ಪಡೆಯಲು ಬಂದಿದ್ದ ವ್ಯಕ್ತಿ ಕತ್ತರಿ ಮತ್ತು ಚಾಕುವಿನಿಂದ ದಾಳಿ ನಡೆಸಿ, 23 ವರ್ಷದ ವೈದ್ಯೆ ಡಾ. ವಂದನಾ ದಾಸ್ ಎಂಬುವವರನ್ನು ಹತ್ಯೆ ಮಾಡಿದ್ದಾನೆ' ಎಂದು ಪೊಲೀಸರು ತಿಳಿಸಿದ್ದಾರೆ.

ಈ ಹೃದಯ ವಿದ್ರಾವಕ ಘಟನೆಗೆ ತಕ್ಷಣ ಸ್ಪಂದಿಸಿರುವ ಕೇರಳ ಹೈಕೋರ್ಟ್, 'ಇದು ವೈದ್ಯರಿಗೆ ರಕ್ಷಣೆ ನೀಡುವಲ್ಲಿನ ವೈಫಲ್ಯದ ಸಂಕೇತ' ಎಂದು ರಾಜ್ಯ ಸರ್ಕಾರ ಮತ್ತು ಪೊಲೀಸ್ ಇಲಾಖೆಯನ್ನು ತೀವ್ರ ತರಾಟೆ ತೆಗೆದುಕೊಂಡಿದೆ.

ವೈದ್ಯೆ ಮೇಲೆ ದಾಳಿ ಮಾಡಿ ಕೊಂದಿರುವ ವ್ಯಕ್ತಿಯನ್ನು ಸಂದೀಪ್ ಎಂದು ಗುರುತಿಸಲಾಗಿದೆ. ಈತ ಶಾಲಾ ಶಿಕ್ಷಕ. ಸೇವೆಯಿಂದ ಅಮಾನತುಗೊಂಡಿದ್ದ. ಕುಟುಂಬದವರೊಂದಿಗೆ ಗಲಾಟೆ ಮಾಡಿಕೊಂಡು ಗಾಯಗೊಂಡಿದ್ದ ಈತನಿಗೆ ಚಿಕಿತ್ಸೆ ಕೊಡಿಸಲು ಪೊಲೀಸರು ಆಸ್ಪತ್ರೆಗೆ ಕರೆ ತಂದಿದ್ದರು.

ಕಾಲಿನ ಗಾಯಕ್ಕೆ ಶುಶ್ರೂಷೆ ಮಾಡುತ್ತಿದ್ದ 23 ವರ್ಷದ ಯುವ ವೈದ್ಯೆ ಡಾ. ವಂದನಾ ದಾಸ್ ಮೇಲೆ ಸಂದೀಪ್, ಇದ್ದಕ್ಕಿದ್ದಂತೆ ಕೋಪೋದ್ರಿಕ್ತನಾಗಿ ಕತ್ತರಿ ಮತ್ತು ಚಿಕ್ಕ ಚಾಕುವಿನಿಂದ ದಾಳಿ ನಡೆಸಿದ್ದಾನೆ. ಅಲ್ಲದೆ, ಸಮೀಪದಲ್ಲಿ ನಿಂತಿದ್ದವರ ಮೇಲೂ ದಾಳಿ ಮಾಡಿದ್ದಾನೆ. ತೀವ್ರ ಗಾಯಗೊಂಡ ವೈದ್ಯೆಯನ್ನು ತಿರುವನಂತಪುರದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಕೆಲವೇ ತಾಸುಗಳ ನಂತರ ವೈದ್ಯೆ ಮೃತಪಟ್ಟಿದ್ದಾರೆ. ಸ್ಥಳದಲ್ಲಿದ್ದ ಪೊಲೀಸ್ ಕಾನ್‌ಸ್ಟೆಬಲ್ ಒಬ್ಬರು ಸಹ ವ್ಯಕ್ತಿಯ ಚಾಕು ದಾಳಿಯಲ್ಲಿ ಗಾಯಗೊಂಡಿದ್ದಾರೆ.

ಘಟನೆಯಿಂದ ತೀವ್ರ ಆತಂಕಕ್ಕೆ ಒಳಗಾಗಿರುವ ವೈದ್ಯರು, ರೋಗಿಗಳಿಗೆ ಚಿಕಿತ್ಸೆ ಸ್ಥಗಿತಗೊಳಿಸಿ ಮುಷ್ಕರ ಹೂಡಿದ್ದಾರೆ. ಈ ಘಟನೆಯ ನಂತರ ಭಾರತೀಯ ವೈದ್ಯಕೀಯ ಸಂಘ-ಕೇರಳ ಘಟಕ ಮತ್ತು ವೈದ್ಯರ ಇತರ ವೇದಿಕೆಗಳು ರೊಚ್ಚಿಗೆದ್ದಿವೆ. ಗುರುವಾರದವರೆಗೆ ಎಲ್ಲ ತುರ್ತು ಸೇವೆಗಳನ್ನು ಹೊರತುಪಡಿಸಿ ಎಲ್ಲ ವೈದ್ಯಕೀಯ ಸೇವೆಗಳನ್ನು ಸ್ಥಗಿತಗೊಳಿಸಲು ವೈದ್ಯರು ನಿರ್ಧರಿಸಿದ್ದಾರೆ.

ಹೈಕೋರ್ಟ್ ನ್ಯಾಯಮೂರ್ತಿಗಳಾದ ದೇವನ್ ರಾಮಚಂದ್ರನ್ ಮತ್ತು ಕೌಸರ್ ಎಡಪ್ಪಾಗಥ್ ಅವರಿದ್ದ ವಿಶೇಷ ನ್ಯಾಯ ಪೀಠ, 'ಈ ಹಿಂದೆಯೇ ಇಂತಹ ಘಟನೆ ನಡೆಯಬಹುದೆಂದು ನಾವು ಹೇಳಿದ್ದೆವು ' ಎಂದು ಹೇಳಿತು.

ವೈದ್ಯೆ ಅನನುಭವಿ ಎಂದ ಸಚಿವೆ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಅನನುಭವದಿಂದಾಗಿ ಯುವ ವೈದ್ಯೆ ಚಿಕಿತ್ಸೆ ನೀಡಲು ಹಿಂಜರಿದಿರಬಹುದು. ಇದರಿಂದ ಕ್ರೋಧಗೊಂಡ ರೋಗಿ ದಾಳಿ ನಡೆಸಿರಬಹುದು ಎಂದು ಕೇರಳ ಆರೋಗ್ಯ ಸಚಿವೆ ವೀಣಾ ಜಾರ್ಜ್ ಪ್ರತಿಕ್ರಿಯಿಸಿದ್ದು, ಇದು ವಿವಾದಕ್ಕೆ ಕಾರಣವಾಗಿದೆ. ಸಚಿವೆಯ ಈ ಹೇಳಿಕೆ ಭಾರಿ ಟೀಕೆಗೂ ಗುರಿಯಾಗಿದೆ.

ಮೂರು ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಣೆ

ರಾಜ್ಯದಲ್ಲಿ ಮಳೆ ಮುಂದುವರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಾದ್ಯಂತ ಗುರುವಾರವೂ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದ್ದು, ಹವಾಮಾನ ಇಲಾಖೆ ಮೂರು ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಿದೆ.

ಮೈಸೂರು, ಮಂಡ್ಯ ಹಾಗೂ ಚಾಮರಾಜನಗರ ಜಿಲ್ಲೆಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ದಕ್ಷಿಣ ಒಳನಾಡಿನ ಜಿಲ್ಲೆಗಳಾದ ಬಳ್ಳಾರಿ, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಹಾಸನ, ಕೊಡಗು, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ಶಿವಮೊಗ್ಗ, ತುಮಕೂರು ಹಾಗೂ ವಿಜಯನಗರದಲ್ಲಿ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಕರಾವಳಿಯ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಹಾಗೂ ಉತ್ತರ ಒಳನಾಡಿನ ಬೆಳಗಾವಿ, ಬಾಗಲಕೋಟೆ, ಧಾರವಾಡ, ಗದಗ, ಹಾವೇರಿ, ಕೊಪ್ಪಳ, ರಾಯಚೂರು, ಯಾದಗಿರಿ ಜಿಲ್ಲೆಯ ಕೆಲವೆಡೆ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ದಕ್ಷಿಣ ಒಳನಾಡಿನ ಒಂದೆರಡು ಕಡೆ ಬಿರುಗಾಳಿಯ ವೇಗವು ಪ್ರತಿ ಗಂಟೆಗೆ 30-40 ಕಿ.ಮೀ. ಇರುವ ಸಾಧ್ಯತೆಯಿದೆ. ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಂಜೆ ಅಥವಾ ರಾತ್ರಿಯ ಅವಧಿಯಲ್ಲಿ ಸಾಧಾರಣ ಮಳೆಯಾಗಲಿದೆ. ಶುಕ್ರವಾರದಿಂದ ಉತ್ತರ ಒಳನಾಡಿನ ಜಿಲ್ಲೆಗಳಲ್ಲಿ ಒಣಹವೆ ಕಾಣಿಸಿಕೊಳ್ಳುವ ಸಾಧ್ಯತೆಯಿದೆ ಎಂದು ಇಲಾಖೆ ಹೇಳಿದೆ.

ಬುಧವಾರ ಬೆಳಿಗ್ಗೆ 8.30ಕ್ಕೆ ಅನ್ವಯಿಸಿದಂತೆ ಹಿಂದಿನ 24 ಗಂಟೆಯ ಅವಧಿಯಲ್ಲಿ ಹಾವೇರಿಯ ರಾಣೆಬೆನ್ನೂರಿನಲ್ಲಿ (5 ಸೆಂ.ಮೀ.) ಗರಿಷ್ಠ ಮಳೆಯಾಗಿದೆ. ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ, ಕಲಬುರಗಿ ಜಿಲ್ಲೆಯ ಆಳಂದ, ಚಿಕ್ಕಮಗಳೂರು ಜಿಲ್ಲೆಯ ಬಾಳೆಹೊನ್ನೂರು, ಶಿವನಿ, ನರಸಿಂಹರಾಜಪುರ, ಹಾಸನ ಜಿಲ್ಲೆಯ ಚನ್ನರಾಯಪಟ್ಟಣ, ಶಿವಮೊಗ್ಗ ಜಿಲ್ಲೆಯ ಹುಂಚದಕಟ್ಟೆ, ಮೈಸೂರಿನ ಜಿಲ್ಲೆಯ ಟಿ. ನರಸೀಪುರ ಹಾಗೂ ತುಮಕೂರು ಜಿಲ್ಲೆಯ ಕೊನೇಹಳ್ಳಿಯಲ್ಲಿ 4 ಸೆಂ.ಮೀ. ಮಳೆಯಾಗಿದೆ. ಉಳಿದೆಡೆ ಈ ಪ್ರಮಾಣ 4 ಸೆಂ.ಮೀ.ಗಿಂತ ಕಡಿಮೆ ವರದಿಯಾಗಿದೆ.

ಕಲಬುರಗಿಯಲ್ಲಿ ಗರಿಷ್ಠ ಉಷ್ಣಾಂಶ (37.3 ಡಿಗ್ರಿ ಸೆಲ್ಸಿಯಸ್) ದಾಖಲಾಗಿದೆ ಎಂದು ಇಲಾಖೆ ತಿಳಿಸಿದೆ.

ಮಳೆಗೆ ಹಾರಿದ ಶೀಟು: ಸಿಡಿಲಿಗೆ ಒಬ್ಬ ಸಾವು

ಕೊಪ್ಪಳ: ನಗರ ಸೇರಿ ಜಿಲ್ಲೆಯ ಹಲವು ಕಡೆ ಬುಧವಾರ ಬೀಸಿದ ಬಿರುಗಾಳಿ ಹಾಗೂ ಜೋರು ಮಳೆಗೆ ಕೊಪ್ಪಳ ತಾಲ್ಲೂಕಿನ ಇಂದಿರಾ ನಗರ ತಾಂಡಾದಲ್ಲಿ ಮನೆಯ ಚಾವಣಿ ಹಾರಿಹೋಗಿದೆ. ಕೊಪ್ಪಳ, ಕುಕನೂರು, ಅಳವಂಡಿಯಲ್ಲಿ ಮಳೆಯಾಗಿದೆ.

ಜಬ್ಬಲಗುಡ್ಡ ಬಳಿ ಕುರಿ ಮೇಯಿಸುತ್ತಿದ್ದ ಗಂಗಾವತಿ ತಾಲ್ಲೂಕಿನ ಮುಕ್ಕುಂಪಿ ಗ್ರಾಮದ ಯಮನೂರಪ್ಪ ಕುದರಿಮೋತಿ (25) ಎಂಬುವವರು ಸಿಡಿಲು ಬಡಿದು ಮೃತಪಟ್ಟರೆ, ಅಂಬರೀಶ್ ಬಂಕಾಪುರ ಎಂಬುವರು ಗಾಯಗೊಂಡಿದ್ದಾರೆ.

ಬಿರುಗಾಳಿ ಬೀಸಿದಾಗ ತಾಂಡಾದ ಮನೆಯಲ್ಲಿ ನಾಲ್ವರು ಇದ್ದರು. ಮನೆಯ ಯಜಮಾನ ನಾಗರಾಜಪ್ಪ, ಹಾರಿ ಹೋಗುತ್ತಿದ್ದ ಚಾವಣಿಯ ತಗಡಿನ ಶೀಟ್‌ಗಳನ್ನು ಹಿಡಿಯಲು ಮುಂದಾದಾಗ ಕಾಲಿಗೆ ಗಾಯಗಳಾದವು. ಉಳಿದ ಮೂವರು ಹಾರಿ ಹೋಗಿದ್ದ ತಗಡುಗಳನ್ನು ಹಿಡಿದು ವಾಪಸ್ ತರಲು ಹರಸಾಹಸ ಪಟ್ಟರು.

ಕೊಪ್ಪಳ ತಾಲ್ಲೂಕಿನ ಇಂದಿರಾ ನಗರ ತಾಂಡದಲ್ಲಿ ಬುಧವಾರ ಮಳೆಯಿಂದ ಹಾರಿಹೋದ ತಗಡಿನ ಶೀಟ್‌ಗಳು –ಪ್ರಜಾವಾಣಿ ಚಿತ್ರ

ತಮಿಳುನಾಡು: ಅಣ್ಣಾಮಲೈ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲು

ಚೆನ್ನೈ (ಪಿಟಿಐ): ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ವಿರುದ್ಧ ಮಾನಹಾನಿ ಹೇಳಿಕೆ ನೀಡಿದ ಆರೋಪದ ಮೇಲೆ ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷ ಕೆ.ಅಣ್ಣಾಮಲೈ ವಿರುದ್ಧ ರಾಜ್ಯ ಸರ್ಕಾರವು ಬುಧವಾರ ಮಾನನಷ್ಟ ಮೊಕದ್ದಮೆ ಹೂಡಿದೆ.

ಸರ್ಕಾರಿ ವಕೀಲ ಜಿ.ದೇವರಾಜನ್ ಅವರು ಅಣ್ಣಾಮಲೈ ಮಾಡಿರುವ ಎರಡು ಆರೋಪಗಳಿಗೆ ಸಂಬಂಧಿಸಿದಂತೆ ರಜಾ ಅವಧಿಯ ಸೆಷನ್ಸ್ ನ್ಯಾಯಾಧೀಶೆ ಸಿ. ಉಮಾ ಮಹೇಶ್ವರಿ ಅವರ ಪೀಠದೆದುರು ಮೊಕದ್ದಮೆ ದಾಖಲಿಸಿದ್ದಾರೆ.

ಸ್ಟಾಲಿನ್ ಅವರು ಹೂಡಿಕೆದಾರ ಸಂಸ್ಥೆ ಜೊತೆ ಒಳಒಪ್ಪಂದ ಮಾಡಿಕೊಂಡಿದ್ದರು ಮತ್ತು ₹200 ಕೋಟಿ ಲಂಚ ಪಡೆದಿದ್ದರು ಎಂದು ಅಣ್ಣಾಮಲೈ ಅವರು ಕಳೆದ ಏಪ್ರಿಲ್‌ನಲ್ಲಿ ಸುದ್ದಿಗೋಷ್ಠಿಯೊಂದರಲ್ಲಿ ಆರೋಪಿಸಿದ್ದರು.

ಸ್ಟಾಲಿನ್‌ರ ಹೆಸರಿಗೆ ಚ್ಯುತಿ ತರುವ ಉದ್ದೇಶದಿಂದಲೇ ಈ ಸುಳ್ಳು ಆರೋಪಗಳನ್ನು ಮಾಡಲಾಗಿದೆ ಎಂದು ಡಿಎಂಕೆ ಆರೋಪಿಸಿತ್ತು.

ಸ್ಪರ್ಧಾ ವಾಣಿ

ಕ್ರೀಡಾ ಕ್ಷೇತ್ರದ ಪ್ರಚಲಿತ ವಿದ್ಯಮಾನಗಳು

ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಹಲವು ಕ್ಷೇತ್ರಗಳಲ್ಲಿನ ಪ್ರಚಲಿತ ವಿದ್ಯಮಾನಗಳ ಕುರಿತ ಮಾದರಿ ಪ್ರಶ್ನೋತ್ತರಗಳಿರುತ್ತವೆ. ಈ ಪ್ರಶ್ನೋತ್ತರಕ್ಕೆ ಪೂರಕವಾದ ಕ್ರೀಡಾ ಕ್ಷೇತ್ರದ ಪ್ರಚಲಿತ ವಿದ್ಯಮಾನಗಳನ್ನು ಇಲ್ಲಿ ಕೊಡಲಾಗಿದೆ.

ಸಂದರ್ಶನಕ್ಕೆ ಹೋಗುವ ಮುನ್ನ...

ನಾಗೇಶ ಜಿ. ವೈದ್ಯ

ಈ ಹಿಂದೆ ಸಂಸ್ಥೆಗಳ ಪ್ರಸ್ತುತದ ಚಿತ್ರಣವನ್ನು ಕಾಣಲು ಸ್ವಾಟ್ ವಿಶ್ಲೇಷಣೆ (SWOT) ಬಳಕೆಯಾಗುತ್ತಿತ್ತು. ಅದರ ಸಾಮರ್ಥ್ಯ(Strength), ದೌರ್ಬಲ್ಯಗಳು(Weakness), ವ್ಯವಹಾರದ ಅವಕಾಶ (Oppurtunity) ಮತ್ತು ಬೆದರಿಕೆಗಳನ್ನು(Threat) ವಿಶ್ಲೇಷಿಸಿ, ಭವಿಷ್ಯದ ಯೋಜನೆಗಳನ್ನು ರೂಪಿಸಲಾಗುತ್ತಿತ್ತು. ಕಾಲಕ್ರಮೇಣ ಇದು ಅಭ್ಯರ್ಥಿಗಳ ವ್ಯಕ್ತಿತ್ವವನ್ನು ಅಳೆಯಲು ಬಳಸಲಾಗುವ ಜನಪ್ರಿಯ 'ಪರಿಕರ'ವಾಯಿತು.

ಸಾಮಾನ್ಯವಾಗಿ ಸಂದರ್ಶನದ ಆರಂಭದಲ್ಲಿ ಅಭ್ಯರ್ಥಿಗಳನ್ನು ಪರಿಚಯಿಸಿಕೊಳ್ಳುವಂತೆ ಕೇಳಲಾಗುತ್ತದೆ. ಇದು ಅಭ್ಯರ್ಥಿಯು ತನ್ನನ್ನು ಪರಿಣಾಮಕಾರಿಯಾಗಿ ಪ್ರಸ್ತುತಗೊಳಿಸಲು ಒದಗುವ ಸುವರ್ಣಾವಕಾಶ. ಈ ಸಂದರ್ಭದಲ್ಲಿ ಸಹಾಯಕ್ಕೆ ಬರುವುದೇ 'ಸ್ವಾಟ್ ವಿಶ್ಲೇಷಣೆ'.

ಸಂದರ್ಶನಕ್ಕೆ ಪೂರ್ವಭಾವಿಯಾಗಿ ಅಭ್ಯರ್ಥಿಯು 'ಸ್ವಾಟ್ ವಿಶ್ಲೇಷಣೆ' ಮೂಲಕ, ತನ್ನಲ್ಲಿರುವ ಸಾಮರ್ಥ್ಯ, ದೌರ್ಬಲ್ಯ, ಅವಕಾಶ, ಬೆದರಿಕೆಗಳನ್ನು ತಿಳಿದುಕೊಳ್ಳಬೇಕು. ಇದು ಸಿದ್ಧತೆಯನ್ನು ಬಲಪಡಿಸುವುದರ ಜೊತೆಗೆ, ತನ್ನನ್ನು ತಾನು ತಿಳಿದುಕೊಳ್ಳಲು ಸಹಾಯ ಮಾಡುತ್ತದೆ. ಮುಖ್ಯವಾಗಿ, ಈ ವಿಶ್ಲೇಷಣೆಯು ಅಭ್ಯರ್ಥಿಯ ಸಕಾರಾತ್ಮಕ ಸಾಮರ್ಥ್ಯ, ಅವಕಾಶಗಳ ಜೊತೆಗೆ ನಕಾರಾತ್ಮಕ ದೌರ್ಬಲ್ಯ ಹಾಗೂ ಬೆದರಿಕೆಗಳನ್ನು ನಿಭಾಯಿಸಲು ಪ್ರೇರೇಪಿಸುವ ಮಾರ್ಗದರ್ಶಿಯಾಗುತ್ತದೆ.

ತನ್ನಲ್ಲಿರುವ ಸಾಮರ್ಥ್ಯವನ್ನು ಹೇಳುತ್ತ, ನಕಾರಾತ್ಮಕ ದೌರ್ಬಲ್ಯ, ಬೆದರಿಕೆಗಳನ್ನೂ ಮೆಟ್ಟಿ ನಿಲ್ಲುವ ಸಕಾರಾತ್ಮಕ ಅಂಶಗಳೊಂದಿಗೆ ಅಭ್ಯರ್ಥಿಯು ತನ್ನ ವ್ಯಕ್ತಿತ್ವವನ್ನು ಆತ್ಮವಿಶ್ವಾಸದಿಂದ ಪ್ರತಿಬಿಂಬಿಸುವ ಮೂಲಕ ಸಂದರ್ಶನದಲ್ಲಿ ಗೆಲುವಿನತ್ತ ಹೆಜ್ಜೆಯಿಡಬಹುದು.

ಸಾಮರ್ಥ್ಯ: ನಿಮಗೆ ನೀವೇ ನಾಲ್ಕು ಪ್ರಶ್ನೆಗಳನ್ನು ಹಾಕಿಕೊಳ್ಳುವುದರ ಮೂಲಕ, ನಿಮ್ಮ ಸಾಮರ್ಥ್ಯವನ್ನು ನೀವೇ ಕಂಡುಕೊಳ್ಳಬಹುದು. ನನ್ನ ವಿಶೇಷ ಪ್ರತಿಭೆ ಏನು? ನಾನು ಇತರರಿಗಿಂತ ಭಿನ್ನ ಹೇಗೆ? ಯಾವ ಕ್ಷೇತ್ರ ನನಗೆ ಇಷ್ಟ? ನಾನು ಯಾವ ಗುಣಗಳಿಂದಾಗಿ, ಮೇಲುಗೈ ಸಾಧಿಸಬಲ್ಲೆ? ಇವುಗಳಿಗೆ ಉತ್ತರ ಹುಡುಕಿಕೊಂಡು ಮನನ ಮಾಡಿಕೊಳ್ಳಿ.

ಇದು ನಿಮ್ಮ ಮೊದಲ ಸಂದರ್ಶನವಾಗಿದ್ದರೆ, ನಿಮ್ಮ ಸಾಮರ್ಥ್ಯಗಳಲ್ಲಿ ನಿಮ್ಮ ಅಧ್ಯಯನ, ಶೈಕ್ಷಣಿಕ ಸಾಧನೆ, ಸಕಾರಾತ್ಮಕ ಚಿಂತನೆಗಳು, ಅರಿತಿರುವ ಭಾಷೆಗಳು, ಸೃಜನಾತ್ಮಕತೆ, ಉತ್ಸಾಹಿ ಮನೋಭಾವ, ನಾಯಕತ್ವದ ಗುಣಗಳು, ವಿಶೇಷ ಕೌಶlಗಳನ್ನು ಒಳಗೊಂಡಿರಲಿ. ಈಗಾಗಲೇ ನೀವು ಬೇರೆಲ್ಲೋ ಕೆಲಸ ಮಾಡಿದ್ದರೆ, ಹಿಂದಿನ ಅನುಭವ, ಸಾಧನೆಗಳು, ಪ್ರದರ್ಶಿಸಿದ ನಾಯಕತ್ವ, ಸ್ವಾವಲಂಬನೆ, ಹೊಂದಿಕೊಳ್ಳುವ ಗುಣ, ಕಿರಿಯರನ್ನು ಪ್ರೋತ್ಸಾಹಿಸಿದ್ದು, ಕಂಪನಿಗೆ ನೀವು ನೀಡಿದ ಗಮನಾರ್ಹ ಕೊಡುಗೆಗಳು, ಸವಾಲುಗಳನ್ನು ಯಶಸ್ವಿಯಾಗಿ ನಿರ್ವಹಿಸಿದ ಬಗ್ಗೆ ವಿವರಿಸಿ.

> ಅಭ್ಯರ್ಥಿಗಳು ತಮ್ಮನ್ನು ತಾವು ಅರಿಯುವುದಕ್ಕೆ 'ಸ್ವಾಟ್ ವಿಶ್ಲೇಷಣೆ' ತುಂಬಾ ನೆರವಾಗುತ್ತದೆ. ಸಂದರ್ಶನಕ್ಕೆ ಹೋಗುವ ಮುನ್ನ ಈ ವಿಶ್ಲೇಷಣೆ ಮಾಡಿಕೊಂಡರೆ, ಸಂದರ್ಶಕರ ಎದುರು ನಿಮ್ಮ ಶಕ್ತಿ ಸಾಮರ್ಥ್ಯವನ್ನು ಉತ್ತಮವಾಗಿ ಪ್ರಸ್ತುತಪಡಿಸಬಹುದು.

ಇವುಗಳ ಜೊತೆಗೆ ನಿಮ್ಮ ನೇಮಕಾತಿಯಿಂದ ಕಂಪನಿಗೆ ಆಗಲಿರುವ ಲಾಭದ ಬಗ್ಗೆಯೂ ಸಂದರ್ಶಕರಿಗೆ ಮನದಟ್ಟು ಮಾಡಿಕೊಡಿ.

ದೌರ್ಬಲ್ಯಗಳು: ದೌರ್ಬಲ್ಯವನ್ನು ಇತರರೆದುರು ಹೇಳಿಕೊಳ್ಳುವುದು ಕಷ್ಟಕರವೇ. ನನ್ನಲ್ಲಿ ಯಾವುದೇ ದೌರ್ಬಲ್ಯಗಳಿಲ್ಲ ಎನ್ನುವುದು ಅಸಹಜವೆನಿಸುತ್ತದೆ. ಬದಲಿಗೆ, ನಿಮ್ಮ ದೌರ್ಬಲ್ಯಗಳನ್ನು ವಿವರಿಸುವ ಮೂಲಕ ಅವುಗಳ ಬಗ್ಗೆ ನಿಮಗೆ ಅರಿವಿದೆ ಎಂಬುದನ್ನು ಪ್ರದರ್ಶಿಸಿ. ಹಾಗೆಯೇ ಅವುಗಳನ್ನು ಹೇಗೆ ಜಯಿಸಲಿದ್ದೀರಿ ಎಂಬುದನ್ನೂ ಪ್ರಾಮಾಣಿಕವಾಗಿ ವಿವರಿಸಿ. ನಿಮಗೆ ತೊಡಕಾಗುತ್ತಿರುವ ನಿಮ್ಮ ಭಯ, ಇತಿಮಿತಿಗಳನ್ನು ಪಟ್ಟಿ ಮಾಡಿಕೊಳ್ಳಿ. ಅವನ್ನು ನಿವಾರಿಸಿಕೊಳ್ಳಲು ತಕ್ಷಣವೇ ಪರಿಹಾರ ಕ್ರಮಗಳನ್ನು ಕೈಗೊಳ್ಳಿ.

ಉದಾಹರಣೆಗೆ ನೀವೊಬ್ಬ ಅಂತರ್ಮುಖಿ ಎಂದುಕೊಳ್ಳೋಣ. ಅಪರಿಚಿತರೊಂದಿಗೆ ಸಂವಹನ ನಡೆಸುವುದು ನಿಮಗೆ ಕಷ್ಟ. ಅದನ್ನೇ ಸಂದರ್ಶಕರಿಗೆ ಹೇಳಿ. ಈ ದೌರ್ಬಲ್ಯವನ್ನು ಅರಿತಾಗಿನಿಂದ ನಾನು ಅಪರಿಚಿತರೊಂದಿಗೆ ಹೆಚ್ಚು ಬೆರೆಯುತ್ತಿದ್ದೇನೆ. ಧೈರ್ಯದಿಂದ ಮಾತನಾಡುತ್ತಿದ್ದೇನೆ. ತುಂಬ ಪ್ರಗತಿ ಸಾಧಿಸಿದ್ದೇನೆ ಎಂದು ವಿಶ್ವಾಸದಿಂದ ಹೇಳಿ. ಹೀಗೆ ಯಾವುದೇ ದೌರ್ಬಲ್ಯವನ್ನು ಜಯಿಸಲು ನೀವು ತೆಗೆದುಕೊಂಡಿರುವ ಸಕಾರಾತ್ಮಕ ನಡೆಯನ್ನು ತಿಳಿಸುವ ಮೂಲಕ ಸಂದರ್ಶಕರ ಮನಗೆಲ್ಲಬಹುದು.

ಅವಕಾಶಗಳು: ಉದ್ಯೋಗದಿಂದ ನೀವು ಪಡೆದುಕೊಳ್ಳಬಹುದಾದ ಪ್ರಯೋಜನವನ್ನು ಅವಕಾಶಗಳೆನ್ನಬಹುದು. ಸಾಮಾನ್ಯವಾಗಿ ಸಂದರ್ಶಕರು, 'ನೀವು ಈ ಉದ್ಯೋಗವನ್ನು ಏಕೆ ಬಯಸುತ್ತೀರಿ? ನಿಮ್ಮ ಅರ್ಹತೆಗೆ ಇದಕ್ಕಿಂತ ಉತ್ತಮ ಅವಕಾಶಗಳು ಸಿಗಬಹುದಲ್ಲ' ಎಂದು ಪ್ರಶ್ನಿಸಿ, ನಿಮ್ಮನ್ನು ಒರೆಗೆ ಹಚ್ಚಬಹುದು.

ಇದಕ್ಕಾಗಿ, ಈ ಉದ್ಯೋಗದಲ್ಲಿ ನಿಮಗೆ ಏನೆಲ್ಲಾ ಅವಕಾಶಗಳು ಇವೆ ಎಂಬುದನ್ನು ಪೂರ್ವಭಾವಿಯಾಗಿ ವಿಶ್ಲೇಷಿಸಿ. ಉದಾಹರಣೆಗೆ ಕಂಪನಿಯ ಕಿರಿಯ ಸಹಾಯಕ ಹುದ್ದೆಗಾಗಿ ನೀವು ಸಂದರ್ಶನಕ್ಕೆ ಹಾಜರಾಗಿದ್ದಲ್ಲಿ, 'ಈ ಕಂಪನಿಯಲ್ಲಿ ಹಿರಿಯ ಸ್ಥಾನಕ್ಕೇರಲು ತುಂಬಾ ಅವಕಾಶಗಳಿವೆ. ಹಾಗಾಗಿ, ನಾನು ಈ ಹುದ್ದೆಯಿಂದ ನನ್ನ ವೃತ್ತಿ ಜೀವನ ಆರಂಭಿಸಲು ನಿರ್ಧರಿಸಿದ್ದೇನೆ' ಎನ್ನಬಹುದು. ಇದಕ್ಕೆ ನಿಮ್ಮ ಆಸಕ್ತಿ ಮತ್ತು ವಿದ್ಯಾರ್ಹತೆ ಕೂಡ ಪೂರಕವಾಗಿದೆ ಎಂಬುದನ್ನು ಮನದಟ್ಟು ಮಾಡಿಸಿ. ಜೊತೆಗೆ ದೇಶದ ಆರ್ಥಿಕ ಬೆಳವಣಿಗೆ, ಸರ್ಕಾರದ ನೀತಿಗಳು ಆ ಕ್ಷೇತ್ರಕ್ಕೆ ಪ್ರೋತ್ಸಾಹದಾಯಕವಾಗಿದ್ದರೆ, ಅದನ್ನೂ ತಪ್ಪದೇ ಹೇಳಿ. ಅದ್ಭುತ ಬೆಳವಣಿಗೆಯ ಈ ಕ್ಷೇತ್ರದಲ್ಲಿರುವ ಕಂಪನಿಯೊಂದಿಗೆ ನಾನೂ ಬೆಳೆಯಲು ಇಚ್ಛಿಸುತ್ತೇನೆ ಎಂದು ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿ.

ಈಗಾಗಲೇ ಉದ್ಯೋಗಿಯಾಗಿದ್ದರೆ, ಪ್ರಸಕ್ತ ಕಂಪನಿಯಲ್ಲಿನ ಬೆಳವಣಿಗೆಯಿಂದ ಆಕರ್ಷಿತನಾಗಿದ್ದೇನೆ. ವೃತ್ತಿಯಲ್ಲಿ ಉನ್ನತಿ ಪಡೆಯುವ ಆಸಕ್ತಿಯಿಂದಾಗಿ ಈ ಕಂಪನಿಯನ್ನು ಸೇರಲು ಬಯಸುತ್ತೇನೆಂದು ಹೇಳಬಹುದು.

ಬೆದರಿಕೆಗಳು: ಇವು ಮಾರುಕಟ್ಟೆಯಲ್ಲಿನ ಬದಲಾವಣೆ, ಕಾನೂನಿನ ಮಾರ್ಪಾಟು, ತಂತ್ರಜ್ಞಾನ, ರಾಜಕೀಯ, ಅಂತರರಾಷ್ಟ್ರೀಯ ಸ್ಪರ್ಧೆ ಮುಂತಾದವುಗಳಿಂದ ಉಂಟಾಗುವಂತಹವು. ಹಾಗಾಗಿ ನಮ್ಮ ನಿಯಂತ್ರಣದಲ್ಲಿಲ್ಲ.

ಉದಾಹರಣೆಗೆ ನೀವು ಪ್ರೋಗ್ರಾಮರ್ ಹುದ್ದೆಗೆ ಸೇರಲು ಸಂದರ್ಶನ ಎದುರಿಸುತ್ತಿದ್ದೀರಿ ಎಂದುಕೊಳ್ಳೋಣ. ಅಲ್ಲಿ ನೀವು ಎದುರಿಸುತ್ತಿರುವ ಬೆದರಿಕೆ ಬಗ್ಗೆ ಕೇಳಿದಾಗ, 'ಕೃತಕ ಬುದ್ಧಿಮತ್ತೆ, ಚಾಟ್‌ಜಿಪಿಟಿಯನ್ನು ಉಪಯೋಗಿಸಿ ಈಗ ಕೋಡ್‌ಗಳನ್ನು ಕೂಡ ಬರೆಯಬಹುದು. ಇದು ಭವಿಷ್ಯದಲ್ಲಿ ಪ್ರೋಗ್ರಾಮರ್‌ಗಳ ಉದ್ಯೋಗಕ್ಕೆ ಧಕ್ಕೆ ತರಬಹುದು. ಕೃತಕ ಬುದ್ಧಿಮತ್ತೆಯ ಕ್ಷೇತ್ರದಲ್ಲಿ ಅಪಾರ ಅವಕಾಶಗಳಿಗೆ ಕಾರಣವಾಗಬಹುದು. ಹಾಗಿರುವಾಗ, ಸಮಯದೊಂದಿಗೆ ನನ್ನ ಕೌಶಲವನ್ನೂ ವಿಸ್ತರಿಸಿಕೊಳ್ಳಬೇಕಾದ ಅವಶ್ಯಕತೆಯಿದೆ. ಈಗಾಗಲೇ ನಾನು ಆ ನಿಟ್ಟಿನಲ್ಲಿ ಸಾಗುತ್ತಿದ್ದೇನೆ' ಎನ್ನಬಹುದು. ನೀವು ಬೆದರಿಕೆಯನ್ನು ಕಡಿಮೆಗೊಳಿಸಲು ಅಥವಾ ಸಂಪೂರ್ಣವಾಗಿ ತೊಡೆದುಹಾಕಲು ಪೂರ್ವಭಾವಿಯಾಗಿ ಯೋಚಿಸುತ್ತಿರುವುದು ಸಂದರ್ಶಕರ ಮೇಲೆ ಸಕಾರಾತ್ಮಕ ಪರಿಣಾಮ ಬೀರುತ್ತದೆ.

ಸ್ವಾಟ್ ವಿಶ್ಲೇಷಣೆಯನ್ನು ಕಾಲಕಾಲಕ್ಕೆ ಮಾಡುತ್ತಿರಬೇಕು. ಭವಿಷ್ಯದಲ್ಲಿ, ನಿಮ್ಮ ಕ್ರಮಗಳಿಂದಾಗಿ ಹಲವಾರು ದೌರ್ಬಲ್ಯಗಳು ಕಡಿಮೆಯಾಗಬಹುದು; ಬೆದರಿಕೆಗಳು ಬದಲಾಗಬಹುದು. ಅವುಗಳನ್ನು ನಿಭಾಯಿಸಲು ಹೊಸ ತಂತ್ರಗಾರಿಕೆ ಬೇಕಾಗಬಹುದು. ❖

ಪ್ರಚಲಿತ

1. ಕ್ರಿಕೆಟಿಗ ಡೇವಿಡ್ ವಾರ್ನರ್

ಆಸ್ಟ್ರೇಲಿಯಾದ ಕ್ರಿಕೆಟಿಗ ಹಾಗೂ ಇಂಡಿಯನ್ ಪ್ರಿಮಿಯರ್ ಲೀಗ್‌ನ(ಐಪಿಎಲ್) ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕ ಡೇವಿಡ್ ವಾರ್ನರ್ 'ಐಪಿಎಲ್'ನಲ್ಲಿ ಅತಿ ಹೆಚ್ಚು ಪಂದ್ಯಗಳ ನಾಯಕತ್ವವಹಿಸಿದ ವಿದೇಶಿ ಕ್ರಿಕೆಟಿಗ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಈ ವರ್ಷ ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕರಾಗಿ ಕಾರ್ಯ ನಿರ್ವಹಿಸುವ ಮೂಲಕ ಈವರೆಗೂ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಗಳಲ್ಲಿ 75ನೇ ಪಂದ್ಯದ ನಾಯಕತ್ವ ವಹಿಸಿಕೊಂಡಂತಾಗಿದೆ.ಇದಕ್ಕೂ ಮುಂಚೆ ಆಸ್ಟ್ರೇಲಿಯದ ಮತ್ತೊಬ್ಬ ಕ್ರಿಕೆಟಿಗ ಆಡಂ ಗಿಲ್ ಕ್ರಿಸ್ಟ್ ಅವರು ಈ ಹೆಗ್ಗಳಿಕೆಗೆ ಪಾತ್ರರಾಗಿದ್ದರು.

2. 'ಅಂಡರ್-20 ಫುಟ್ಬಾಲ್ ವಿಶ್ವಕಪ್' ಆತಿಥ್ಯ

20ವರ್ಷವಯೋಮಿತಿಯಒಳಗಿನಫುಟ್‌ಬಾಲ್ ವಿಶ್ವಕಪ್ ಆತಿಥ್ಯದ ಜವಾಬ್ದಾರಿಯನ್ನು ಇಂಡೋನೇಷ್ಯಾಗೆ ನೀಡಲಾಗಿತ್ತು. ಆದರೆ FIFA ಇದನ್ನು ರದ್ದುಗೊಳಿಸಿ ಆತಿಥ್ಯದ ಅಧಿಕಾರವನ್ನು ಅರ್ಜೆಂಟೀನಾಗೆ ಕಲ್ಪಿಸಿದೆ. ಇಂಡೋನೇಷ್ಯಾದ ಗವರ್ನರ್, ಬಾಲಿಯಲ್ಲಿ ನಡೆಯಬೇಕಿದ್ದ ಇಸ್ರೇಲ್ ವಿರುದ್ಧದ ಪಂದ್ಯವನ್ನು ರದ್ದುಗೊಳಿಸಿದ ಕಾರಣ FIFA ಈ ನಿರ್ಧಾರ ತೆಗೆದುಕೊಂಡಿದೆ.

3. ಇಂಟರ್ ಕಾಂಟಿನೆಂಟಲ್ ಫುಟ್‌ಬಾಲ್ ಕ್ರೀಡಾಕೂಟ -2023

ನಾಲ್ಕು ತಂಡಗಳು ಭಾಗವಹಿಸುವ ಇಂಟರ್ ಕಾಂಟಿನೆಂಟಲ್ ಫುಟ್‌ಬಾಲ್ ಕ್ರೀಡಾಕೂಟವನ್ನು ಜೂನ್ 9 ರಿಂದ 18 ರವರೆಗೆ ಒಡಿಶಾ ರಾಜಧಾನಿ ಭುವನೇಶ್ವರದಲ್ಲಿ ಆಯೋಜಿಸಲಾಗುತ್ತಿದೆ. ಪ್ರಸ್ತುತ ಇದು ಮೂರನೇ ಆವೃತ್ತಿಯಾಗಿದ್ದು ಈ ಹಿಂದೆ ಕ್ರೀಡಾಕೂಟದ ಎರಡು ಆವೃತ್ತಿಗಳನ್ನು ಮುಂಬೈ ಮತ್ತು ಅಹಮದಾಬಾದ್‌ನಲ್ಲಿ ಆಯೋಜಿಸಲಾಗಿತ್ತು. ಈ ಕ್ರೀಡಾಕೂಟದಲ್ಲಿ ಭಾರತ, ಲೆಬನಾನ್, ಮಂಗೋಲಿಯ ಮತ್ತು ವನೌಟೋ ರಾಷ್ಟ್ರಗಳು ಭಾಗವಹಿಸುತ್ತವೆ.

4. ದಕ್ಷಿಣ ಆಫ್ರಿಕಾದ ಕ್ರಿಕೆಟಿಗ ಕಗಿಸೊ ರಬಾಡ

ಮೊಹಾಲಿಯ ಐ.ಎಸ್.ಬಿಂದ್ರಾ ಕ್ರೀಡಾಂಗಣದಲ್ಲಿ ಪಂಜಾಬ್ ಕಿಂಗ್ಸ್ ಮತ್ತು ಗುಜರಾತ್ ಟೈಟನ್ಸ್ ನಡುವೆ ನಡೆದ ಐಪಿಎಲ್ ಕ್ರಿಕೆಟ್ ಟೂರ್ನಿಯಲ್ಲಿ ದಕ್ಷಿಣ ಆಫ್ರಿಕಾದ ಬೌಲರ್ ಕಗಿಸೊ ರಬಾಡ ಮೂರನೇ ವಿಕೆಟ್ ಪಡೆಯುವ ಮೂಲಕ ಅತ್ಯಂತ ವೇಗವಾಗಿ 100 ವಿಕೆಟ್ ಪಡೆದ ಆಟಗಾರ ಎನ್ನುವ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಕಗಿಸೊ ರಬಾಡಗೂ ಮುನ್ನ ಶ್ರೀಲಂಕಾದ ಕ್ರಿಕೆಟಿಗ ಲಸಿತ್ ಮಲಿಂಗ ಅವರು ಈ ದಾಖಲೆ ಹೊಂದಿದ್ದರು. ಲಸಿತ್ ಮಲಿಂಗ ಅವರು 70 ನೇ ಪಂದ್ಯದಲ್ಲಿ ನೂರು ವಿಕೆಟ್‌ಗಳ ಗಡಿ ತಲುಪಿದ್ದರು. ಆದರೆ ಕಗಿಸೊ ರಬಾಡ ಅವರು ತಮ್ಮ 64 ನೇ ಪಂದ್ಯದಲ್ಲಿ 100 ವಿಕೆಟ್ ಪಡೆದು ಲಸಿತ್ ಮಲಿಂಗ ಅವರನ್ನು ಹಿಂದಿಕ್ಕಿದರು.

ಐಪಿಎಲ್‌ನಲ್ಲಿ ನೂರು ವಿಕೆಟ್ ಗಡಿ ದಾಟಿರುವ ಕ್ರಿಕೆಟಿಗರು: ಭುವನೇಶ್ವರ್ ಕುಮಾರ್, ರಶೀದ್ ಖಾನ್, ಅಮಿತ್ ಮಿಶ್ರಾ, ಆಶಿಶ್ ನೆಹ್ರಾ, ಯಜುವೇಂದ್ರ ಚಹಾಲ್

5. ವಿಶ್ವದ 3ನೇ ಅತಿ ದೊಡ್ಡ ಕ್ರಿಕೆಟ್ ಕ್ರೀಡಾಂಗಣ

ರಾಜಸ್ಥಾನದ ಜೈಪುರದಲ್ಲಿ ವಿಶ್ವದ ಮೂರನೇ ಅತಿ ದೊಡ್ಡ ಹಾಗೂ ಭಾರತದ ಎರಡನೇ ಅತಿದೊಡ್ಡ ಕ್ರಿಕೆಟ್ ಕ್ರೀಡಾಂಗಣವನ್ನು ನಿರ್ಮಿಸಲು ರಾಜಸ್ಥಾನ ಕ್ರಿಕೆಟ್ ಅಸೋಸಿಯೇಷನ್ ವೇದಾಂತ್ ಹಿಂದೂಸ್ತಾನ್ ಜಿಂಕ್ ಲಿಮಿಟೆಡ್ ಸಂಸ್ಥೆಯೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದೆ. ಜೈಪುರದ ಚೋಂಪ್(Chomp) ಗ್ರಾಮದಲ್ಲಿ ಈ ಕ್ರೀಡಾಂಗಣ ನಿರ್ಮಾಣವಾಗಲಿದ್ದು, ಮೊದಲ ಹಂತದ ಕಾಮಗಾರಿ ಪೂರ್ಣವಾಗಲು ₹400 ಕೋಟಿ ಹೂಡಿಕೆ ಅವಶ್ಯಕತೆಯಿದೆಯೆಂದು ಅಂದಾಜಿಸಲಾಗಿದೆ. ಈ ಕ್ರೀಡಾಂಗಣಕ್ಕೆ ಅನಿಲ್ ಅಗರ್ವಾಲ್ ಅವರ ಹೆಸರನ್ನು ಇಡಲು ನಿರ್ಧರಿಸಲಾಗಿದೆ. ಇದು 75,000 ಆಸನ ಸಾಮರ್ಥ್ಯವಿರುವ ಕ್ರೀಡಾಂಗಣವಾಗಿ ಅಭಿವೃದ್ಧಿಪಡಿಸಲಾಗುತ್ತದೆ ಎಂದು ರಾಜಸ್ಥಾನ ಕ್ರಿಕೆಟ್ ಅಸೋಸಿಯೇಷನ್ ಘೋಷಿಸಿದೆ.

ವಿಶೇಷ ಸೂಚನೆ: ಯೋಜನೆಯ ಒಟ್ಟು ವೆಚ್ಚದಲ್ಲಿ ₹300 ಕೋಟಿಯನ್ನು ಹಿಂದುಸ್ತಾನ್ ಜಿಂಕ್ ಲಿಮಿಟೆಡ್ ಸಂಸ್ಥೆ ದೇಣಿಗೆಯ ರೂಪದಲ್ಲಿ ನೀಡಲು ಮುಂದಾಗಿದೆ. ❖

ದೊಡ್ಡ ಕ್ರೀಡಾಂಗಣಗಳ ವಿವರ

ಕ್ರೀಡಾಂಗಣ	ಸ್ಥಳ	ಆಸನ ಸಾಮರ್ಥ್ಯ
ನರೇಂದ್ರಮೋದಿ ಕ್ರೀಡಾಂಗಣ	ಅಹಮದಾಬಾದ್, ಗುಜರಾತ್	1,32,000
ಮೆಲ್ಬರ್ನ್ ಕ್ರೀಡಾಂಗಣ	ಮೆಲ್ಬರ್ನ್, ಆಸ್ಟ್ರೇಲಿಯಾ	1,00,24
ಈಡನ್ ಗಾರ್ಡನ್ಸ್	ಕೋಲ್ಕತ್ತಾ, ಪಶ್ಚಿಮ ಬಂಗಾಳ	68,000

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ
ಇನ್ನಷ್ಟು ಮಾಹಿತಿಗಾಗಿ
ಕ್ರೀಡೆ ಸೇರಿದಂತೆ ವಿವಿಧ ಕ್ಷೇತ್ರಗಳ ಪ್ರಚಲಿತ ವಿದ್ಯಾನಗಳು ಹಾಗೂ ನಾಗರಿಕ ಸೇವಾ ಪರೀಕ್ಷೆಗಳಿಗೆ ಅಗತ್ಯವಾದ ಲೇಖನಗಳು, ಪ್ರಬಂಧಗಳು ಹಾಗೂ ವಿಡಿಯೊಗಳಿಗಾಗಿ 'ಪ್ರಜಾವಾಣಿ - ಡೆಕ್ಕನ್‌ಹೆರಾಲ್ಡ್' ಪತ್ರಿಕೆಯ' ಎಕ್ಸಾಮ್ ಮಾಸ್ಟರ್ ಮೈಂಡ್' ಇ-ಪತ್ರಿಕೆಗೆ ಚಂದಾದಾರರಾಗಿ. ಚಂದಾಕ್ಕಾಗಿ ಮೇಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
www.exammastermind.com

ಪಿಯುಸಿ- ಸಿಇಟಿ ಪರೀಕ್ಷೆ ದಿಕ್ಸೂಚಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

PHYSICS

84) A cylindrical tube of length 0.2 m and radius R with sugar solution of concentration C produce a rotation of θ in the plane of vibration of a plane polarized light. The same sugar solution is transferred to another tube of length 0.3 m of same radius. The remaining gap is filled by distilled water. Now the optical rotation produced is

(a) θ (b) $2\frac{\theta}{3}$

(c) $3\frac{\theta}{2}$ (d) $9\frac{\theta}{4}$

Ans:- (a)

Expln- We know the specific rotation,

$$S = \frac{\theta}{1.c} = \frac{\theta . v}{1.m}$$

Where θ = rotation produced,
I = length of the tube
M = mass of sugar dissolved,
V = volume of sugar solution

$$\Rightarrow \theta = \frac{S.I.M}{V}$$

For first case, $\theta = \frac{SIm}{V}$ ....(i)

For second case, $\theta_1 = \frac{S l_1 m_1}{V_1}$ ....(ii)

here, $l = 0.2$m and $l_1 = 0.3$m

also, $V_1 = V + \frac{V}{2} = 1.5\ V = \frac{3}{2}V$

On dividing Eq. (ii) by Eq. (i), we get

$$\frac{\theta_1}{\theta} = \frac{\frac{S l_1 m}{V_1}}{\frac{S l m}{V}} = \frac{l_1}{l} \times \frac{V}{V_1} = \frac{l_1}{l} \times \frac{2V}{3V} = \frac{0.3}{0.2} \times \frac{2}{3} = 1$$

$$\Rightarrow \theta_1 = \theta$$

85) Two tangent galvanometers, which are identical except in their number of turns, are connected in parallel. The ratio of their resistances of the coils is 1 : 3. If the deflections in the two tangent galvanometers are 30^0 and 60^0 respectively, then the ratio of their number of turns is

(a) 1:3 (b) 3:1
(c) 1:2 (d) 1:6

Ans:- (a)

Expln- we know that the current passing through galvanometer coil is

$$I = K \tan\theta \text{ where, } K = \frac{2rB_H}{n\mu_0}$$

$\therefore$ Here, $I_1 = K_1 \tan\theta_1$ and $I_2 = K_2 \tan\theta_2$

Expln

$$(or)\ \frac{I_1}{I_2} = \frac{K_1 \tan\theta_1}{K_2 \tan\theta_2} = \frac{\frac{2r B_H}{n_1\mu_0}\tan\theta_2}{\frac{2r B_H}{n_2\mu_0}\tan\theta_2}$$

$$\Rightarrow \frac{R_1}{R_2} = \frac{n_2 \tan 30^0}{n_1 \tan 60^0}$$

$$\Rightarrow \frac{3}{1} = \frac{n_2}{n_1} . \frac{\sqrt{3}}{\sqrt{3}} \qquad \left(\because I = \frac{V}{R}\right)$$

$$\Rightarrow \frac{n_1}{n_2} = \frac{1}{3}$$

86) Radii of curvature of a converging lens are in the ratio 1:2. Its focal length is 6cm and refractive index is 1.5. Then its radii of curvature are .... respectively.

(a) 9 cm and 18 cm (b) 6 cm and 12 cm
(c) 3 cm and 6 cm (d) 4.5 cm and 9 cm

Ans:- (d)

Expln– Given, $\frac{R_1}{R_2} = \frac{1}{2}$, $f = 6$cm & $\mu = 1.5$

Let $R_1 = R$ and $R_2 = 2R$

We know the focal length of converging lens By using relation $\frac{1}{f} = (\mu - 1)\left[\frac{1}{R_1} + \frac{1}{R_2}\right]$

Substituting all the values, we get R = 4.5 cm

$\therefore R_1 = 4.5$ cm and $R_2 = 2 \times 4.5 = 9$ cm

87) Two mental spheres of radii 0.01 m and 0.02 m are given a charge of 15 mC and 45 mC respectively. They are then connected by a wire. The final charge on the first sphere is .... × 10^{-3}C.

(a) 40 (b) 30
(c) 20 (d) 10

Ans:- (c)

Expln- When two metal spheres are joined by a wire, charge flows from one at higher potential to the other at lower potential, till they acquire the same potential.

$$\therefore V_1 = V_2$$

$$\frac{q_1}{4\pi\varepsilon_0 r_1} = \frac{q_2}{4\pi\varepsilon_0 r_2}$$

$$\Rightarrow \frac{r_1}{r_2} = \frac{q_1}{q_2} = \frac{15\ mC}{45\ mC} = \frac{1}{3}$$

Final charge on first sphere,

$$q_1 = \frac{1}{3}(q_1 + q_2) = \frac{1}{3} \times 60 = 20mC$$

MATHEMATICS

MULTIPLE CHOICE QUESTIONS

87) $\int_1^e \log x\, dx =$

(A) 1 (B) e – 1
(C) e + 1 (D) 0

Ans: (A) 1

Expln:-

$$\int_1^e \underset{u}{\log x}\ \underset{dv}{dx} = uv - \int v\, du = (\log x)\, x - \int x . \frac{1}{x} dx$$

$$= [x \log x - x]_1^e$$

$$= e \log e - e - 1. \log 1 + 1$$

$$= e - e - 0 + 1 = 1.$$

89) The shortest distance between the lines $\frac{x-3}{3} = \frac{y-8}{-1} = \frac{z-3}{1}$ **and** $\frac{x+3}{-3} = \frac{y+7}{2} = \frac{z-6}{4}$ **is**

(A) $\sqrt{30}$ (B) $2\sqrt{30}$
(C) $5\sqrt{30}$ (D) $3\sqrt{30}$

Ans : (D) $3\sqrt{30}$

Expln:-The line (1) passes through (3, 8, 3) and has direction ratios proportional to 3, -1, 1.

$\therefore$ Its vector equation is $\vec{r} = \vec{a_1} + \lambda\vec{b_1}$

where $\vec{a_1} = 3\hat{i} + 8\hat{j} + 3k$

$\vec{b_1} = 3\hat{i} - \hat{j} + k.$

||| rly for line (2), $\vec{r} = \vec{a_2} + \mu\vec{b_2}$ where

$\vec{a_2} = -3\hat{i} - 7\hat{j} + 6k$, $\vec{b_2}$

$= -3\hat{i} + 2\hat{j} + 4k$

$$S.D. = \left[\frac{(\vec{a_2} - \vec{a_1}).(\vec{b_1} \times \vec{b_2})}{|\vec{b_1} \times \vec{b_2}|}\right]$$

$\vec{a_2} - \vec{a_1} = -6\hat{i} - 15\hat{j} + 3\hat{k}$

$$\vec{b_1} \times \vec{b_2} = \begin{vmatrix} \hat{i} & \hat{j} & k \\ 3 & -1 & 1 \\ -3 & 2 & 4 \end{vmatrix}$$

$= \hat{i}(-4-2) - \hat{j}(12+3) + k(6-3)$

$= -6\hat{i} - 15\hat{j} + 3k$

$|\vec{b_1} \times \vec{b_2}| = \sqrt{36+225+9} = \sqrt{270}$

$$S.D. = \frac{36+225+9}{\sqrt{270}}$$

$= \sqrt{270} = \sqrt{9 \times 30} = 3\sqrt{30}$

90) In a simultaneous throw of a pair dice the probability of getting a total more than 7 is

A) $\frac{7}{12}$ B) $\frac{5}{36}$

C) $\frac{5}{12}$ D) $\frac{7}{36}$

Ans:-C

Expln:- The sample space consists of 36 numbers

Let X be the sum of the numbers on two dice which takes the values

2, 3, 4, 6, 7, 8, 9, 10, 11, or 12

P(x=8) P(2,6), (3,5), (4,4), (5,3), (6,2) (i.e. sum more than 7 which is 8)

$\frac{5}{36}$

$P(x=9) = P\{(3,6),(4,5),(5,4)(6,3)\} = \frac{4}{36}$

$P(x=10) = P\{(4,6),(5,5),(6,4)\} = \frac{3}{36}$

$P(x=11) = P\{(5,6),(6,5)\} = \frac{2}{36}$

$P(x=12) = P\{(6,6),\} = \frac{1}{36}$

$\text{Required Probability} = \frac{5}{36}, \frac{4}{36}, \frac{3}{36}, \frac{2}{36}, \frac{1}{36} = \frac{15}{36} = \frac{5}{12}$

91) If in the expansion of $(1 + px)^n$, $n \in N$, the coefficients of x and x^2 are 8 and 24, then the values of n and p are

(A) n = 3, p = 2 (B) n = 5, p = 3
(C) n = 4, p = 3 (D) n = 4, p = 2

Ans: (D) n = 4, p = 2

$(1+px)^n = 1^n + nC_1 px + nC_2 p^2x^2 + ... + p^n x^n$

Coeff. of x = np, coeff. of $x^2 = nC_2p^2$

$= \frac{n(n+1)}{2}. p^2$

Given np = 8, $\frac{n(n-1)}{2}p^2 = 24$

np = 8 $(n^2 - n)p^2 = 48$

$n^2p^2 - np.\ p = 48$

$64 - 8p = 48$

$\therefore 8p = 16 \quad \therefore p = 2. \quad \therefore n = 4.$

92) If $A = \begin{bmatrix} 1 & 0 \\ 1 & 1 \end{bmatrix}$ **and $A^8 = aA + bI$, then (a, b)**

(A) (8, 7) (B) (-7, 8)
(C) (8, -7) (D) (-8, -7)

Ans: (C) (8, -7)



❦ ಸುಭಾಷಿತ ❦
ಎಂದಿಗೂ ತಪ್ಪು ಮಾಡದ ವ್ಯಕ್ತಿಯು ಹೊಸ ಕಾರ್ಯವನ್ನು ಮಾಡಲು ಪ್ರಯತ್ನಿಸುವುದೇ ಇಲ್ಲ.
–ಆಲ್ಬರ್ಟ್ ಐನ್‌ಸ್ಟೀನ್

ಕೇರಳ ದೋಣಿ ದುರಂತ ಸುರಕ್ಷತೆಗೆ ಎಚ್ಚರಿಕೆಯ ಸಂದೇಶ

ಕೇರಳದ ತಾನೂರ್‌ನಲ್ಲಿ ನಡೆದ ದೋಣಿ ದುರಂತವು 22 ಜನರನ್ನು ಬಲಿ ಪಡೆದಿರುವುದಕ್ಕೆ ದೋಣಿಯನ್ನು ನಿರ್ವಹಿಸುತ್ತಿದ್ದವರ ಹಾಗೂ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣ. ಈ ದುರಂತದಲ್ಲಿ ಮೃತಪಟ್ಟವರಲ್ಲಿ 15 ಮಕ್ಕಳೂ ಸೇರಿದ್ದಾರೆ. ಸಂಜೆಯ ಹೊತ್ತಿನಲ್ಲಿ ವಿಹಾರ ಕೈಗೊಳ್ಳುವ ಉದ್ದೇಶದಿಂದ ಹಲವರು ತಮ್ಮ ಮಕ್ಕಳ ಜೊತೆ ದೋಣಿಯನ್ನು ಏರಿದ್ದರು. ದುರಂತಕ್ಕೆ ತುತ್ತಾದ ದೋಣಿ, ಅದನ್ನು ನಿರ್ವಹಿಸುತ್ತಿದ್ದವರು ಹಾಗೂ ಅದು ಹೊರಟಿದ್ದ ಹಾದಿ... ಇವ್ಯಾವುವೂ ಸರಿಯಿರಲಿಲ್ಲ. ಆ ದೋಣಿಯು ಮೀನುಗಾರಿಕೆಗೆ ಬಳಸುವಂತಹದ್ದಾಗಿತ್ತು. ಅದರಲ್ಲಿ ಒಂದಿಷ್ಟು ಬದಲಾವಣೆಗಳನ್ನು ತಂದು, ಅದನ್ನು ಪ್ರವಾಸಿಗರ ಸುತ್ತಾಟಕ್ಕೆ ಬಳಸಿಕೊಳ್ಳಲಾಗಿತ್ತು. ಅದರ ಆಸನವ್ಯವಸ್ಥೆ ಮೂಲ ಸೌಕರ್ಯಗಳು ಅದರಲ್ಲಿ ಇರಲಿಲ್ಲ. ಬಂದರು ಪ್ರಾಧಿಕಾರದಲ್ಲಿ ಈ ದೋಣಿ ನೋಂದಣಿ ಆಗಿರಲಿಲ್ಲ. ವಾಸ್ತವದಲ್ಲಿ ಈ ನೋಂದಣಿ ಕಡ್ಡಾಯ. ದೋಣಿಯು ಸುಸ್ಥಿತಿಯಲ್ಲಿ ಇದೆಯೇ ಎಂಬ ಪರಿಶೀಲನೆ ನಡೆದಿರಲಿಲ್ಲ. ಈ ದೋಣಿ ಹಾಗೂ ಅದನ್ನು ಬಳಸಿ ನಡೆಸುತ್ತಿದ್ದ ವಿಹಾರದ ಬಗ್ಗೆ ಸ್ಥಳೀಯರು ದೂರಿದ್ದರು. ಆದರೆ ಈ ದೂರುಗಳಿಗೆ ಅಧಿಕಾರಿಗಳು ಕಿವಿಗೊಟ್ಟಿರಲಿಲ್ಲ. ತನ್ನ ಸಾಮರ್ಥ್ಯಕ್ಕಿಂತ ಹೆಚ್ಚಿನ ಜನರನ್ನು ಅದು ತುಂಬಿಕೊಂಡಿತ್ತು. ಸಂಜೆಯ ನಂತರ ಕಾರ್ಯಾಚರಣೆ ಬೇಕಿರುವ ಸೌಲಭ್ಯಗಳನ್ನು ಕೂಡ ಅದು ಹೊಂದಿರಲಿಲ್ಲ. ದೋಣಿಯ ಚಾಲಕನ ಬಗ್ಗೆ ಒಳ್ಳೆಯ ಅಭಿಪ್ರಾಯ ಇರಲಿಲ್ಲ ಎಂಬ ವರದಿಗಳೂ ಇವೆ. ಆದರೆ, ಈ ದೋಣಿಯ ವಿಹಾರದಲ್ಲಿ ಎಲ್ಲ ಬಗೆಯ ಸುರಕ್ಷತಾ ನಿಯಮಗಳನ್ನು ಉಲ್ಲಂಘಿಸಲಾಗಿತ್ತು.

ಪ್ರವಾಸೋದ್ಯಮವು ಸುರಕ್ಷಿತವಾಗಿ ಇರಬೇಕು ಎಂದಾದರೆ ಕಟ್ಟುನಿಟ್ಟಿನ ಕ್ರಮಗಳನ್ನು ಜಾರಿಗೆ ತರಬೇಕು ಎಂಬ ಪಾಠವನ್ನು ಈ ದುರಂತವು ಹೇಳುತ್ತಿದೆ

ದುರಂತದ ಬಗ್ಗೆ ನ್ಯಾಯಾಂಗ ತನಿಖೆಗೆ ಕೇರಳ ಸರ್ಕಾರ ಆದೇಶಿಸಿದೆ. ದುರಂತದಲ್ಲಿ ಮೃತಪಟ್ಟವರ ಕುಟುಂಬಗಳ ಸದಸ್ಯರಿಗೆ ಪರಿಹಾರವನ್ನು ಕೂಡ ಘೋಷಿಸಿದೆ. ಆದರೆ, ಪೊಲೀಸ್ ತನಿಖೆಗಿಂತ ಹೆಚ್ಚಿನ ವಿಚಾರಗಳೇನೂ ನ್ಯಾಯಾಂಗ ತನಿಖೆಯ ಮೂಲಕ ಹೊರಬರಲಿಕ್ಕಿಲ್ಲ. ಕೇರಳದಲ್ಲಿ ಈ ಹಿಂದೆಯೂ ದೋಣಿ ದುರಂತಗಳು ನಡೆದಿವೆ, ಜನ ಪ್ರಾಣ ಕಳೆದುಕೊಂಡಿದ್ದಾರೆ. 2009ರಲ್ಲಿ ನಡೆದ ತೇಕಡಿ ದೋಣಿ ದುರಂತದಲ್ಲಿ 45 ಮಂದಿ ಅಮಾಯಕರು ಪ್ರಾಣ ಕಳೆದುಕೊಂಡರು. ದೋಣಿ ದುರಂತ ನಡೆದಾಗಲೆಲ್ಲ ನ್ಯಾಯಾಂಗ ತನಿಖೆಗೆ ಆದೇಶಿಸಲಾಗುತ್ತದೆ. ತನಿಖೆ ನಂತರ ಒಂದಿಷ್ಟು ಶಿಫಾರಸುಗಳನ್ನು ಮಾಡಲಾಗುತ್ತದೆ. ತೇಕಡಿ ದುರಂತ ಸಂಭವಿಸಿದ ಹತ್ತು ವರ್ಷಗಳ ನಂತರ ದೋಷಾರೋಪ ಪಟ್ಟಿ ಸಲ್ಲಿಸಲಾಯಿತು. ಆದರೆ ವಿಚಾರಣೆಯು ಇನ್ನಷ್ಟೇ ಆರಂಭವಾಗಬೇಕಿದೆ. ಶಿಫಾರಸೊಂದನ್ನು ಆಧರಿಸಿ, ಬೇರೆ ಬೇರೆ ಪ್ರಾಧಿಕಾರಗಳನ್ನು ವಿಲೀನ ಮಾಡಿ, ಕೇರಳದಲ್ಲಿ ಪ್ರತ್ಯೇಕ ಜಲಸಾರಿಗೆ ಮಂಡಳಿಯೊಂದನ್ನು ರಚಿಸಲಾಯಿತು. ದೋಣಿಗಳಲ್ಲಿ ಸುರಕ್ಷತೆಯನ್ನು ಖಾತರಿಪಡಿಸುವ ಹೊಣೆಯು ಈ ಮಂಡಳಿಯ ಮೇಲಿದೆ. ಆದರೆ ಈಗ ನಡೆದಿರುವ ದುರಂತವು ಹೇಳುತ್ತಿರುವ ಲೋಪಗಳನ್ನು ಗಮನಿಸಿದರೆ, ಈ ಮಂಡಳಿಯು ಅದಕ್ಷವಾಗಿರುವ ಸಂಸ್ಥೆ ಎಂಬುದು ಗೊತ್ತಾಗುತ್ತದೆ. ಈ ಮಂಡಳಿಯ ಬಳಿ ಅಗತ್ಯ ಜನಸಂಪನ್ಮೂಲ ಇಲ್ಲ, ತಾನು ರೂಪಿಸುವ ನಿಯಮಗಳು ಜಾರಿಗೆ ಬರುವಂತೆ ನೋಡಿಕೊಳ್ಳಲು ಮಂಡಳಿಯ ಬಳಿ ಪ್ರತ್ಯೇಕ ವಿಭಾಗವೂ ಇಲ್ಲ.

ಪ್ರವಾಸೋದ್ಯಮಕ್ಕೆ ಕೇರಳ ಬಹಳ ಖ್ಯಾತಿ ಪಡೆದಿದೆ. ಅದರಲ್ಲೂ ಹಿನ್ನೀರು ಪ್ರದೇಶಗಳಲ್ಲಿ ದೋಣಿಗಳು ಪ್ರವಾಸಿಗರನ್ನು ಸೂಜಿಗಲ್ಲಿನಂತೆ ಸೆಳೆಯುತ್ತವೆ. ಕೆಲವು ಜನಪ್ರಿಯ ತಾಣಗಳಲ್ಲಿ ದೋಣಿಗಳನ್ನು ಬಹಳ ಮುತುವರ್ಜಿಯಿಂದ ನಿರ್ವಹಿಸಲಾಗುತ್ತಿದೆ. ಆದರೆ, ಇನ್ನು ಕೆಲವು ಕಡೆಗಳಲ್ಲಿ ದೋಣಿಗಳನ್ನು ವ್ಯವಸ್ಥಿತವಾಗಿ ಇಲ್ಲದವರು ನಡೆಸುತ್ತಿದ್ದಾರೆ. ಜಲ ಪ್ರವಾಸೋದ್ಯಮದಲ್ಲಿ ಸುರಕ್ಷತೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳದಿರುವುದು ಕೇರಳದಲ್ಲಿ ಅವಘಡಕ್ಕೆ ಕಾರಣವಾಗಬಹುದು ಎಂದು ತಜ್ಞರೊಬ್ಬರು ಈಚೆಗೆ ಎಚ್ಚರಿಸಿದ್ದರು. ಪ್ರವಾಸೋದ್ಯಮವು ಸುರಕ್ಷಿತವಾಗಿರಬೇಕು ಎಂದಾದರೆ ಕಟ್ಟುನಿಟ್ಟಿನ ಕ್ರಮಗಳನ್ನು ಜಾರಿಗೆ ತರಬೇಕು ಎಂಬ ಪಾಠವನ್ನು ಈ ದುರಂತವು ಹೇಳುತ್ತಿದೆ. ಜಲ ಪ್ರವಾಸೋದ್ಯಮಕ್ಕೆ ದೊಡ್ಡ ಸವಾಲು ಒಡ್ಡುವ ಮುಂಗಾರು ಮಳೆ ಆರಂಭವಾಗುವುದಕ್ಕೆ ಇನ್ನು ಕೆಲವೇ ವಾರಗಳು ಮಾತ್ರ ಬಾಕಿ ಇವೆ. ಇಂತಹ ಸಂದರ್ಭದಲ್ಲಿ ಅಗತ್ಯ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವುದು ಬಹಳ ಮಹತ್ವದ್ದಾಗುತ್ತದೆ.

ದಿನದ ಟ್ವೀಟ್

ದೂರ ಉಳಿಯಲಿ

ರಾಜಕಾರಣಿಗಳಿಗೆ ಯಾವುದೇ ಧರ್ಮದಲ್ಲಿ ನಂಬಿಕೆ ಇರಬಹುದು– ತಮಗೆ ನಂಬಿಕೆ ಇರುವ ಧಾರ್ಮಿಕ ತಾಣಗಳಿಗೆ ಅವರು ಭೇಟಿ ನೀಡಬಹುದು– ಆದರೆ ಅದು ಟಿ.ವಿ.ಗಳಲ್ಲಿ ಪ್ರಸಾರ ಆಗಬೇಕಾಗಿಲ್ಲ! ರಾಜಕೀಯ ಉದ್ದೇಶಗಳಿಗಾಗಿ ಧಾರ್ಮಿಕ ಚಿಹ್ನೆಗಳನ್ನು ಬಳಸುವುದರಿಂದ ಅವರು ದೂರ ಉಳಿಯಬೇಕು.

ಚಂದ್ರಕುಮಾರ್ ಬೋಸ್, ಸಾಮಾಜಿಕ ಕಾರ್ಯಕರ್ತ

ಕಿಡಿನುಡಿ

ಸದ್ಯದ ರಾಜಕೀಯ ವ್ಯವಸ್ಥೆ ನೋಡಿದರೆ, ಮರ್ಯಾದೆ ಇದ್ದವರು ರಾಜಕಾರಣದಲ್ಲಿ ಇರಬಾರದ ಪರಿಸ್ಥಿತಿ ಎದುರಾಗಿದೆ. ಅಭ್ಯರ್ಥಿಗಳು ಮತದಾರರಿಗೆ ಆಮಿಷ ಒಡ್ಡುವುದು ವಿಷಾದನೀಯ. ಒಂದೊಂದು ಮತಕ್ಕೆ ಐದು ಸಾವಿರ ಕೊಟ್ಟಿದ್ದಾರೆ ಎನ್ನಲಾಗುತ್ತಿದೆ. ಮತದಾರರೂ ಆಮಿಷಕ್ಕೆ ಒಳಗಾಗುತ್ತಿದ್ದು, ಪ್ರಜಾಪ್ರಭುತ್ವದಲ್ಲಿ ಈ ರೀತಿ ಆಗಬಾರದು.



ಬಸವರಾಜ ಹೊರಟ್ಟಿ, ವಿಧಾನ ಪರಿಷತ್ ಸಭಾಪತಿ

25 ವರ್ಷಗಳ ಹಿಂದೆ
ಸೋಮವಾರ, 11-5-1998

• ಚಿತ್ರದುರ್ಗ ಜೈಲಿನಲ್ಲಿ ಮತ್ತೆ ಹಿಂಸಾಚಾರ, ಅಶ್ರುವಾಯು

ಚಿತ್ರದುರ್ಗ, ಮೇ 10– ಇಲ್ಲಿನ ಜಿಲ್ಲಾ ಉಪ ಬಂದೀಖಾನೆಯಲ್ಲಿ ಇಂದು ಮಧ್ಯಾಹ್ನ ಮತ್ತೆ ಬಂಡೆದ್ದು ಹಿಂಸಾಚಾರ ಮತ್ತು ಪೊಲೀಸರ ಮೇಲೆ ಹಲ್ಲೆ ನಡೆಸಿದ ಕೈದಿಗಳ ಗುಂಪನ್ನು ನಿಯಂತ್ರಿಸಲು ಏಳು ಸುತ್ತು ಅಶ್ರುವಾಯು ಪ್ರಯೋಗಿಸಿದ ಘಟನೆ ನಡೆಯಿತು.

ಈ ಬಂದೀಖಾನೆಯಲ್ಲಿ ಕೈದಿಗಳ ಬಂಡಾಯ ಮೂರು ದಿನಗಳ ಅವಧಿಯಲ್ಲಿ ಇದು ಎರಡನೇ ಸಲ. ಜೈಲಿನ ನಾಲ್ಕು ಗೋಡೆಗಳ ಮಧ್ಯೆ ನಡೆದ ಇಂದಿನ ಗಲಭೆಯಲ್ಲಿ ಮೀಸಲು ಪಡೆಯ ಡಿಎಸ್‌ಪಿ ಜವರಯ್ಯ, ನಗರ ಠಾಣೆ ಇನ್‌ಸ್ಪೆಕ್ಟರ್ ಡಿ.ಕೆ.ಕವಳಪ್ಪ, ಎಸ್‌ಐ ಟಿ.ಎಚ್.ರಾಜಪ್ಪ ಸೇರಿ 10 ಪೊಲೀಸರಿಗೆ ಏಟು ಬಿದ್ದಿದೆ.

ಕೈದಿಗಳ ಗುಂಪು ಬಂದೀಖಾನೆಯ ಒಳ ಆವರಣದ 3 ಬಾಗಿಲುಗಳನ್ನು ಧ್ವಂಸ ಮಾಡಿದೆ. ಅಡುಗೆ ಮನೆಯಲ್ಲಿದ್ದ ಸಲಕರಣೆಗಳನ್ನು ಆಯುಧವಾಗಿ ಉಪಯೋಗಿಸಿದೆ. ಕೈದಿಗಳ ಹಲ್ಲೆಯಿಂದ ತತ್ತರಿಸಿದ ಜಿಲ್ಲಾ ಮತ್ತು ರಾಜ್ಯ ಮೀಸಲು ಪೊಲೀಸರು ಪ್ರಾಣ ಭಯದಿಂದ ಹೊರಗೆ ಓಡಿಬಂದರು.

• ಮತ್ತಷ್ಟು ದೃಢ ನಿಲುವು ಪ್ರಧಾನಿಗೆ ಹೆಗಡೆ ಸಲಹೆ

ನವದೆಹಲಿ, ಮೇ 10 (ಪಿಟಿಐ, ಯುಎನ್‌ಐ)– ಬಿಜೆಪಿ ನೇತೃತ್ವದಲ್ಲಿನ ವಿವಿಧ ಪಕ್ಷಗಳ ನಡುವಣ ಮೈತ್ರಿಯ ಭದ್ರತೆಯ ದೃಷ್ಟಿಯಿಂದ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ದೃಢ ಹಾಗೂ ಕಠಿಣ ಮನೋಭಾವ ಪ್ರದರ್ಶಿಸುವ ಅಗತ್ಯವಿದೆ ಎಂದು ಕೇಂದ್ರ ವಾಣಿಜ್ಯ ಸಚಿವ ರಾಮಕೃಷ್ಣ ಹೆಗಡೆ ಅವರು ಹೇಳಿದ್ದಾರೆ.

ಮೈತ್ರಿ ಹಿತಾಸಕ್ತಿಯಿಂದ ಅಗತ್ಯಬಿದ್ದರೆ ಬಜೆಟ್ ಅಧಿವೇಶನದ ನಂತರ ಸಂಪುಟ ರಚನೆ ಮಾಡಬೇಕು ಎಂದು ಟಿ.ವಿ ಸಂದರ್ಶನವೊಂದರಲ್ಲಿ ಅವರು ಸಲಹೆ ಮಾಡಿದ್ದಾರೆ.

ಪ್ರಧಾನಿಯಾಗಿ ವಾಜಪೇಯಿ ಅವರು ಸಾಕಷ್ಟು ದೃಢತೆ ಪ್ರದರ್ಶಿಸಿದ್ದಾರೆಯೇ ಎಂಬ ಪ್ರಶ್ನೆಗೆ ‘ಸಮರ್ಥನೀಯವಲ್ಲದ ಬೇಡಿಕೆಗಳನ್ನು ಕೆಲವರು ಮುಂದಿಟ್ಟಾಗ ವಾಜಪೇಯಿ ಅವರು ಅವುಗಳಿಗೆ ಸಂಬಂಧಿಸಿದಂತೆ ತಮ್ಮ ನಿಲುವನ್ನು ಸಮರ್ಥಿಸಿಕೊಳ್ಳಬೇಕಿತ್ತು. ಈ ವಿಚಾರದಲ್ಲಿ ವಾಜಪೇಯಿ ತಪ್ಪು ಮಾಡಿದರೆಂದೇ ಹಲವರ ಅಭಿಪ್ರಾಯ’ ಎಂದು ಹೆಗಡೆ ಹೇಳಿದ್ದಾರೆ.

50 ವರ್ಷಗಳ ಹಿಂದೆ
ಶುಕ್ರವಾರ, 11-5-1973

• ರಾಷ್ಟ್ರದಲ್ಲಿ ಸದ್ಯಕ್ಕೆ ತುರ್ತು ಪರಿಸ್ಥಿತಿ ರದ್ದಾಗದು: ಪಂತ್

ನವದೆಹಲಿ, ಮೇ 10– ರಾಷ್ಟ್ರದಲ್ಲಿ ಜಾರಿಯಲ್ಲಿರುವ ‘ತುರ್ತು ಸ್ಥಿತಿ’ಯನ್ನು ಸದ್ಯಕ್ಕೆ ರದ್ದುಪಡಿಸುವ ಸಾಧ್ಯತೆ ಇಲ್ಲ ಎಂದು ಕೇಂದ್ರ ಗೃಹ ಖಾತೆ ಸ್ಟೇಟ್ ಸಚಿವ ಶ್ರೀ ಕೆ.ಸಿ.ಪಂತ್ ಅವರು ಇಂದು ರಾಜ್ಯಸಭೆಗೆ ತಿಳಿಸಿದರು.

ಆಂತರಿಕ ಭದ್ರತಾ ಶಾಸನದ ಬಗ್ಗೆ ಶ್ರೀ ಭೂಪೇಶ ಗುಪ್ತ ಅವರು ಮಂಡಿಸಿದ ನಿರ್ಣಯದ ಚರ್ಚೆಯಲ್ಲಿ ಮಧ್ಯ ಮಾತನಾಡಿದ ಪಂತ್ ಅವರು ‘ರಾಷ್ಟ್ರದ ಸಮಗ್ರ ಪರಿಸ್ಥಿತಿಯನ್ನು ಗಮನಿಸಿದಾಗ ತುರ್ತು ಸ್ಥಿತಿಯನ್ನು ರದ್ದುಪಡಿಸಲು ಇದು ಕಾಲವಲ್ಲ’ ಎಂದರು.

ಸಮಗ್ರ ಪರಿಸ್ಥಿತಿಯನ್ನು ಪರಿಶೀಲಿಸಿದಾಗ, ಅಂದರೆ, ಪಾಕಿಸ್ತಾನದಲ್ಲಿಯ ಪರಿಸ್ಥಿತಿ, ಅದರಲ್ಲೂ ಮುಖ್ಯವಾಗಿ ಸಿಮ್ಲಾ ಒಪ್ಪಂದ ಆದಾಗಿನಿಂದ ಅದರ (ಪಾಕಿಸ್ತಾನದ) ಬಿಗಿ ಧೋರಣೆ, ಅಮೆರಿಕದ ಶಸ್ತ್ರಾಸ್ತ್ರ ಸರಬರಾಜು ಮತ್ತು ಆ ರಾಷ್ಟ್ರದಲ್ಲಿನ ಆಂತರಿಕ ತೊಂದರೆಯನ್ನು ಗಣನೆಗೆ ತೆಗೆದುಕೊಳ್ಳಬೇಕು ಎಂದು ಅವರು ನುಡಿದರು.

ತುರ್ತು ಸ್ಥಿತಿಯನ್ನು ಜಾರಿಗೆ ತಂದ ಮೇಲೆ ನಾಗರಿಕನ ವೈಯಕ್ತಿಕ ಸ್ವಾತಂತ್ರ್ಯದಲ್ಲಿ ಹಸ್ತಕ್ಷೇಪ ಮಾಡಿಲ್ಲ ಎಂದೂ ಅವರು ತಿಳಿಸಿದರು.

ಚುನಾವಣಾ ಕಾಲದಲ್ಲಿ ವಶೀಕರಣ ತಂತ್ರಗಳ ಆಜೂಬಾಜು

ಸ್ತೋಮಸನ್ನಿಯ ಹಿತ, ಅಹಿತ ಸನ್ನಿಹಿತ

ವಿಜ್ಞಾನ ವಿಶೇಷ
ನಾಗೇಶ ಹೆಗಡೆ

ಪ್ರಧಾನಿ ನರೇಂದ್ರ ಮೋದಿಯವರ ಮೇ 7ರ ಬೆಂಗಳೂರಿನ ರೋಡ್ ಶೋ ನೆನಪಿದೆ ತಾನೆ? ತಮ್ಮದೇ ಮೂರು ಫೋಟೊಗಳಿದ್ದ ಪುಷ್ಪರಥದ ಮೇಲೆ ಮೋದಿ ವಿರಾಜಮಾನರಾಗಿ ಹೂಗಳ ಸುರಿಮಳೆಯಲ್ಲಿ ದಾರಿಯುದ್ದಕ್ಕೂ ಕೈಬೀಸುತ್ತ, ಮುಗುಳ್ನಗುತ್ತ ಹೂವೆಸೆಯುತ್ತ ಸಾಗಿದ್ದು?

ಮೇ 7 ಅಂದರೆ ಫ್ರೆಂಚ್ ಮನೋವಿಜ್ಞಾನಿ ಗುಸ್ತಾವ್ ಲ ಬಾನ್ ಎಂಬಾತನ ಜನ್ಮದಿನ. ಜನಸ್ತೋಮವನ್ನು ಮಂತ್ರಮುಗ್ಧಗೊಳಿಸುವುದು ಹೇಗೆ ಎಂಬ ವಿಷಯದ ಮೇಲೆ ಗ್ರಂಥವೊಂದನ್ನು ಬರೆದು ಜಗತ್ ಪ್ರಸಿದ್ಧಿ ಪಡೆದವ. ‘ದ ಕ್ರೌಡ್: ಎ ಸ್ಟಡಿ ಆಫ್ ದಿ ಪಾಪ್ಯುಲರ್ ಮೈಂಡ್’ ಹೆಸರಿನ ಆ ಗ್ರಂಥ ನೂರು ವರ್ಷಗಳ ಹಿಂದೆ ಅನೇಕ ಐರೋಪ್ಯ ಭಾಷೆಗಳಿಗೆ ತರ್ಜುಮೆಯಾಗಿ, 20ನೇ ಶತಮಾನದ ಅನೇಕ ಜನನಾಯಕರ ಕೈಪಿಡಿಯಾಗಿತ್ತೆಂಬ ಪ್ರತೀತಿ ಇದೆ. ಗುಂಪಾಗಿ ಸೇರಿದವರ ಸಾಮೂಹಿಕ ವರ್ತನೆ ಹೇಗಿರುತ್ತದೆ, ಇಡೀ ಸ್ತೋಮವನ್ನು ಹೇಗೆ ಪರವಶಗೊಳಿಸಬಹುದು ಎಂಬೆಲ್ಲ ವಿವರಗಳು ಅದರಲ್ಲಿವೆ. ಚುನಾವಣಾ ಭಾಷಣ ಕುರಿತೇ ಪ್ರತ್ಯೇಕ ಅಧ್ಯಾಯವಿದೆ. ಇಂಗ್ಲಿಷ್ ಗೊತ್ತಿದ್ದವರು ಇಡೀ ಪುಸ್ತಕದ ಧ್ವನಿಮುದ್ರಣವನ್ನು ಆಲಿಸಬಹುದು (ಅಂದಹಾಗೆ, librivox.org ಎಂಬ ವೆಬ್‌ಸೈಟ್‌ಗೆ ಹೋದರೆ ಎಲ್ಲ ವಯೋಮಾನದವರಿಗಾಗಿ ವಿವಿಧ ವಿಷಯಗಳ 36 ಸಾವಿರಕ್ಕೂ ಹೆಚ್ಚು ಧ್ವನಿಪುಸ್ತಕಗಳು ಉಚಿತವಾಗಿ ಸಿಗುತ್ತವೆ. ಹಿಂದಿ, ತೆಲುಗು, ತಮಿಳಿನಲ್ಲೂ ಕೆಲ ಪುಸ್ತಕಗಳಿವೆ. ಕನ್ನಡದ್ದಿಲ್ಲ).

ಮೋದಿಯವರ ಮಾತುಗಳು ಎಂಥವರನ್ನೂ ಮೋಡಿ ಮಾಡುತ್ತವೆ. ಅವರ ಮಾತಿನ ಶೈಲಿಗೆ ಶಶಿ ತರೂರ್, ರಾಮಚಂದ್ರ ಗುಹಾರಂಥ ವಾಗ್ಮಿಗಳೂ ತಲೆದೂಗಿದ್ದಾರೆ. ಒಂದು ಹಕೀಕತ್ ಗೊತ್ತೆ? ಉತ್ತಮ ಭಾಷಣಕಾರರ ಮಾತುಗಳನ್ನು ಟಿ.ವಿ ಅಥವಾ ಸ್ಮಾರ್ಟ್‌ಫೋನ್ ಪರದೆಯ ಮೇಲೆ ಕೇಳುವುದಕ್ಕಿಂತ ಜನಸ್ತೋಮದ ಮಧ್ಯೆ ನೈಜಕಾಲದಲ್ಲಿ ಕೇಳಿಸಿಕೊಳ್ಳುವಾಗ ಆಗುವ ಅನುಭೂತಿಯೇ ಬೇರೆ. ನಾವು ಆಗ ನಾವಾಗಿರುವುದಿಲ್ಲ. ಸ್ತೋಮಪ್ರಜ್ಞೆಯ ಅಡಿಯಾಳಾಗುತ್ತೇವೆ. ‘...ನನ್ನದೊಂದು ಮಾತನ್ನು ನಡೆಸಿಕೊಡ್ತೀರಾ? ನಡೆಸಿಕೊಡ್ತೀರಿ ತಾನೇ? ಪಕ್ಕಾ ಹೌದಾ? ಹೌದಾಗಿದ್ದರೆ ನಿಮ್ಮ ಮೊಬೈಲ್ ಬೆಳಕನ್ನು ನನ್ನ ಕಡೆ ತೋರಿಸಿ’ ಎಂದು ಭಾಷಣಕಾರ ಬಿಟ್ಟುಬಿಟ್ಟು ಹೇಳುವಾಗ ಸುತ್ತಲಿನ ಜನರ ಹೋಕಾರ ಹೂಂಕಾರಗಳೆಲ್ಲ ಒಟ್ಟಾಗಿ ಸಮೂಹ ಸನ್ನಿ-ವೇಶ ನಿರ್ಮಾಣವಾಗುತ್ತದೆ. ಅದರಲ್ಲಂತೂ, ಗುಸ್ತಾವ್ ಹೇಳುವ ಹಾಗೆ, ನಮ್ಮ ಸುಪ್ತ ಮನಸ್ಸಿನಲ್ಲಿರುವ ಪುರಾಣಪ್ರಜ್ಞೆಯನ್ನು ಕೆದಕಿದರೆ ಅಥವಾ ‘ಮನೆಯ ಹಿರಿಯರಿಗೆ ನನ್ನ ನಮಸ್ಕಾರ ತಿಳಿಸುತ್ತೀರಾ?’ ಎಂಬಂಥ ಸನ್ನಡತೆಯ ಮಾತುಗಳನ್ನು ಹೇಳಿದರೆ ವಶೀಕರಣ ಪಕ್ಕಾ! ಹೇಳಿದ್ದನ್ನೇ ಮತ್ತೆ ಮತ್ತೆ ಹೇಳಿ ಅದೇ ಪರಮಸತ್ಯವೆಂದು ಬಿಂಬಿಸುವುದೂ ಸಾಧ್ಯ.

ಎದುರಿಗಿದ್ದವರನ್ನು ಮಾತು, ಹಾವಭಾವ ಅಥವಾ ಧ್ವನಿಯ ಏರಿಳಿತದಿಂದಲೇ ವಶೀಕರಣಗೊಳಿಸುವ ತಂತ್ರಕ್ಕೆ ‘ಹಿಪ್ನಾಟಿಸಂ’ ಎನ್ನುತ್ತಾರೆ. ಆಸ್ಟ್ರಿಯಾದ ಫ್ರಾಂಝ್ ಮೆಸ್ಮೆರ್ ಎಂಬಾತ ಅದಕ್ಕೊಂದು ವೈಜ್ಞಾನಿಕ ಕಾರಣವನ್ನು ಕೊಟ್ಟ ಎಂದು ಹೇಳಲಾಗುತ್ತದೆ. ಆದರೆ ನಮ್ಮಲ್ಲಿ ಅದೆಷ್ಟೋ ಶತಮಾನಗಳಿಂದ ಇದು ಗೊತ್ತಿತ್ತೆಂಬುದಕ್ಕೆ ಸಾಕ್ಷಿ ಏನೆಂದರೆ ‘ಮಂತ್ರಮುಗ್ಧ’ ಎಂಬ ಪದ ನಮ್ಮ ಬಹುತೇಕ ಎಲ್ಲ ಭಾಷೆಗಳಲ್ಲೂ ಬಳಕೆಯಲ್ಲಿದೆ. ಛೂ ಮಂತ್ರ ಹಾಕಿ ಯಾವುದೇ ವ್ಯಕ್ತಿಯ ಮನಸ್ಸನ್ನು ವಶ ಮಾಡಿಕೊಳ್ಳುವ ತಂತ್ರ ವೇದಕಾಲದಿಂದಲೂ ಇತ್ತು. ಆದರೆ ಒಳ್ಳೆಯದಕ್ಕಿಂತ ಅನೈತಿಕ ಕೆಲಸಗಳಿಗೇ ಈ ತಂತ್ರ ಜಾಸ್ತಿ ಬಳಕೆಯಾದಂತಿದೆ. ಬೃಹಸ್ಪತಿಯ ಪತ್ನಿ ತಾರಾಳನ್ನು ಚಂದ್ರ ವಶೀಕರಣಗೊಳಿಸಿ ಭೋಗಿಸಿದನೆಂದೂ ಅವರಿಗೆ ಹುಟ್ಟಿದ ಮಗನೇ ‘ಬುಧ’ ಎಂತಲೂ ಹೇಳಲಾಗಿದೆ. ಯುದ್ಧಕಾಲದಲ್ಲಿ ಬಳಸುತ್ತಿದ್ದ ‘ಸಂಮೋಹನಾಸ್ತ್ರ’ವೂ ನಮಗೆ ಗೊತ್ತಿದೆ.

ಅಂಥ ಪುರಾಣಗಳು ಹೇಗೂ ಇರಲಿ, ವಶೀಕರಣ ವಿದ್ಯೆ ಎಂಬುದು ಕುಶಲ ಕಲೆಯೆ, ಕಣ್ಕಟ್ಟು ತಂತ್ರವೆ ಅಥವಾ ವಿಜ್ಞಾನದ ತೆಕ್ಕೆಗೆ ಸಿಗಬಹುದಾದ ಕರಾರುವಾಕ್ ಸಾಧನವೆ? ಇಷ್ಟು ಡೋಸ್ ಕೊಟ್ಟರೆ ಇಂಥ ವ್ಯಕ್ತಿಯನ್ನು ಇಷ್ಟು ಸಮಯದವರೆಗೆ ಮರುಳು ಮಾಡಬಹುದು ಎಂಬ ಲೆಕ್ಕಾಚಾರ ಸಾಧ್ಯವೆ? ಇದಕ್ಕೆ ಉತ್ತರ ಹುಡುಕಲು ಮನೋವಿಜ್ಞಾನಿಗಳು ಮತ್ತು ನರಮಂಡಲ ತಜ್ಞರು ತಿಣುಕುತ್ತಿದ್ದಾರೆ. ಹಿಪ್ನೋಸ್ (ನಿದ್ದೆ) ಎಂಬ ಲ್ಯಾಟಿನ್ ಪದದಿಂದ ಹಿಪ್ನಾಸಿಸ್ ಬಂದಿದೆಯಾದರೂ ಅದು ನಿದ್ರಾಸ್ಥಿತಿಯಲ್ಲ. ಮಿದುಳು ಎಚ್ಚರವಾಗಿರುತ್ತದೆ. ಆದರೆ ಪ್ರಜ್ಞಾಸ್ಥಿತಿ ಮೀರಿದ ಇನ್ನೊಂದು ಸ್ತರದಲ್ಲಿ ಬೇರೊಬ್ಬರ ಆದೇಶಗಳನ್ನು ಪಾಲಿಸುವ ‘ಮುಗ್ಧ’ತೆ ಅದಕ್ಕೆ ಬರುತ್ತದೆ. ಇದುವರೆಗಿನ ಅಧ್ಯಯನಗಳ ಪ್ರಕಾರ, ಯಾವುದೇ ಸಮಾಜದ ಶೇಕಡ 15-20ರಷ್ಟು ಜನರನ್ನು ತೀರಾ ಸುಲಭವಾಗಿ ವಶೀಕರಣ ಮಾಡಿಕೊಳ್ಳಬಹುದು. ಇನ್ನು ಸುಮಾರು ಶೇ 15-20ರಷ್ಟು ಜನರಿಗೆ ಸುಲಭವಾಗಿ ಯಾವ ಸಂಮೋಹಿನಿ ತಂತ್ರವೂ ವರ್ಕಾಗುವುದಿಲ್ಲ. ಮಧ್ಯಂತರದ ಶೇ 65-70ರಷ್ಟು ಜನರ ಮೇಲೆ ವಶೀಕರಣದ ಕೆಲವು ತಂತ್ರಗಳು ಮಾತ್ರ ಕೆಲಸ ಮಾಡುತ್ತವೆ. ವಶೀಕರಣಕ್ಕೆ ತಲೆಬಾಗುವ ಅಥವಾ ಪ್ರತಿರೋಧದ ಗುಣ ಎಳೆಯರಿದ್ದಾಗಲೂ ಅಷ್ಟೆ, ವೃದ್ಧಾಪ್ಯದಲ್ಲೂ ಅಷ್ಟೆ- ಜೀವಮಾನವಿಡೀ ಬದಲಾಗುವುದಿಲ್ಲ. ಬುದ್ಧಿಮತ್ತೆಗೂ ಅದಕ್ಕೂ ಸಂಬಂಧವಿಲ್ಲ.

ವಶೀಕರಣ ವಿದ್ಯೆಯೂ ಅಷ್ಟೆ. ಕೆಲವರಿಗೆ ಸಲೀಸಾಗಿ ಕರಗತವಾಗುತ್ತದೆ. ಹಾಗೆಂದು ಅವರಲ್ಲಿ ವಿಶೇಷ ಪವರ್ ಇರುತ್ತದೆ ಎಂಬುದೂ ಸುಳ್ಳು. ಆದರೆ ಹುಷಾರಾಗಿ ಪ್ರಾಕ್ಟೀಸ್ ಮಾಡಬೇಕು. ಹೊಸದಾಗಿ ಇದನ್ನು ಕಲಿತ ಹೈದನೊಬ್ಬ 2012ರಲ್ಲಿ ಕೆನಡಾದ ಕುಬೆಕ್‌ನಲ್ಲಿ ಒಂದಿಷ್ಟು ಹೈಸ್ಕೂಲ್ ಹುಡುಗಿಯರ ಮೇಲೆ ಸಂಮೋಹಿನಿ ತಂತ್ರದ ಪ್ರಯೋಗ ಮಾಡಲು ಹೋಗಿ ಎಡವಟ್ಟಾಗಿತ್ತು. ಪ್ರಯೋಗ ಮುಗಿದ ನಂತರ ಹುಡುಗಿಯರನ್ನು ಮಾಮೂಲು ಸ್ಥಿತಿಗೆ ತರಲು ಆತನಿಗೆ ಸಾಧ್ಯವಾಗಲೇ ಇಲ್ಲ. ತನಗೆ ವಿದ್ಯೆ ಕಲಿಸಿದ ಗುರುವನ್ನೇ ಆತ ತುರ್ತಾಗಿ ಕರೆಸಿಕೊಳ್ಳಬೇಕಾಯಿತು. ಕೆಲವು ಸ್ವಘೋಷಿತ ಪಂಡಿತರು ನಿಮ್ಮ ಅಂತರಾಳವನ್ನು ಕೆದಕುತ್ತ, ಬಾಲ್ಯಕ್ಕೂ, ಅಮ್ಮನ ಗರ್ಭಕ್ಕೂ, ಹಿಂದಿನ ಜನ್ಮಕ್ಕೂ ಒಯ್ಯುತ್ತೇವೆಂದು ಹೇಳುತ್ತಾರೆ. ಅವೆಲ್ಲ ನಿಜವಲ್ಲ. ಮನೋವಿಜ್ಞಾನಿಗಳು ಅತ್ಯಂತ ಕಟ್ಟುನಿಟ್ಟಿನ ಪ್ರಯೋಗ ಮಾಡಿ, ಯಾವುದು ಅವೈಜ್ಞಾನಿಕ, ಯಾವುದು ಢೋಂಗಿ ಎಂಬುದರ ಪಟ್ಟಿ ಮಾಡಿದ್ದಾರೆ. ಸ್ಟಾನ್‌ಫೋರ್ಡ್ ವಿಶ್ವವಿದ್ಯಾಲಯದ ನರತಜ್ಞರು ಹೇಳುವ ಪ್ರಕಾರ, ಕೆಲವರ ಮಿದುಳಿನ ಒಂದು ಭಾಗದಲ್ಲಿ ‘ಗಾಬಾ’ ಹೆಸರಿನ ನರವಾಹಕಗಳ ಸಂಖ್ಯೆ ತೀರ ಹೆಚ್ಚಿರುತ್ತದೆ. ಅಂಥವರನ್ನು ಸುಲಭವಾಗಿ ಮಂತ್ರಮುಗ್ಧ ಮಾಡಬಹುದು.

ವಶೀಕರಣಕ್ಕೆ ಸಲೀಸಾಗಿ ಸಿಲುಕುವಂಥ ಮುಗ್ಧತೆ ನಿಮಗಿದ್ದರೆ ಅದು ಒಳ್ಳೆಯದೊ ಕೆಟ್ಟದ್ದೊ? ಅದಕ್ಕೆ ನಿರ್ದಿಷ್ಟ ಮಾನದಂಡವಿಲ್ಲ. ನೀವು ಮೋಸ- ವಂಚನೆಗೆ, ಜೂಜುಕಟ್ಟೆಯ ಉನ್ಮಾದಕ್ಕೆ ಸಿಲುಕಬಹುದು. ಚುನಾವಣೆಯಲ್ಲಿ ಇಂಥವರೇ ಗೆಲ್ಲುತ್ತಾರೆಂದು ಪಣ ಕಟ್ಟಲು ಹೋಗಿ ಯುಧಿಷ್ಠಿರನ ಗತಿಗಿಳಿಯಬಹುದು. ಉತ್ತಮ ಸಂಗತಿ ಏನೆಂದರೆ, ನಿದ್ರಾಹೀನತೆ, ಅಲರ್ಜಿ, ಖಿನ್ನತೆ, ಚಟದಾಸ್ಯದಂಥ ಕೆಲವು ಕಾಯಿಲೆಗಳಿಂದ ಮುಕ್ತಿ ಪಡೆಯಬಹುದು. ಅದಕ್ಕೆಂದು ‘ಕ್ಲಿನಿಕಲ್ ಹಿಪ್ನೊಸಿಸ್’ ಎಂಬ ವೈದ್ಯಕೀಯ ವಿಭಾಗವೇ ವಿಕಾಸಗೊಂಡಿದೆ. ಹುಷಾರಾಗಿರಿ, ಶುಶ್ರೂಷೆಗೆಂದು ಯಾವುದೇ ತಜ್ಞರ ಬಳಿ ಹೋಗುವುದಾದರೂ ಆ ಡಾಕ್ಟರಿಗೆ ಅಧಿಕೃತ ವೈದ್ಯಕೀಯ ಮಂಡಳಿಯ ಸದಸ್ಯತ್ವ ಇದೆಯೇ ಖಾತರಿ ಮಾಡಿಕೊಳ್ಳಿ. ಈಗೇನು ಊರೂರಲ್ಲಿ ಹಿಪ್ನೊಥೆರಪಿ ತಜ್ಞರಿದ್ದಾರೆ. ಸ್ವಯಂವಶೀಕರಣದ ನಾನಾ ಬಗೆಯ appಗಳನ್ನು ಮೊಬೈಲ್‌ನಲ್ಲೂ ಇಳಿಸಿಕೊಳ್ಳಬಹುದು. ಹಣ ತೆತ್ತು ಮಂಗನಾಗಲೂಬಹುದು!

ಕೆಲವರಿಗೆ ಪದೇಪದೇ ಕರುಳಿನ ಉರಿಯೂತದ (ಐಬಿಎಸ್) ಕಾಯಿಲೆ ಬರುತ್ತಿರುತ್ತದೆ. ಹೊಟ್ಟೆಯಲ್ಲಿ ಉರಿ, ಅಜೀರ್ಣ, ವಾಯುಪೀಡೆ, ಅಸೌಖ್ಯ. ಆದರೆ ವೈದ್ಯಕೀಯ ಪರೀಕ್ಷೆ ಮಾಡಿದರೆ ಯಾವ ದೋಷವೂ ಇಲ್ಲ. ಆ ಒಂದು ಕಾಯಿಲೆಯ ವಶೀಕರಣ ಚಿಕಿತ್ಸೆಗೆ ವೈದ್ಯಕೀಯದಲ್ಲಿ ಮಾನ್ಯತೆ ಸಿಕ್ಕಿದೆ. ಲೇಟೆಸ್ಟ್ ಸಂಗತಿ ಏನು ಗೊತ್ತೆ? ಹೈವೇ ಹಿಪ್ನಾಸಿಸ್ ಕಾಯಿಲೆಗೆ ತುತ್ತಾಗುವವರ ಸಂಖ್ಯೆ ಹೆಚ್ಚುತ್ತಿದೆ. ಗಂಟೆಗಟ್ಟಲೆ ಏಕತಾನತೆಯಲ್ಲಿ ಹೆದ್ದಾರಿಯಲ್ಲಿ ಚಾಲನೆ ಮಾಡುವಾಗ ಮನಸ್ಸು ಆಟೊಪೈಲಟ್ ಆಗಿಬಿಡುತ್ತದೆ. ಎಚ್ಚರಿದ್ದರೂ ತಲೆ ಬೇರೆಲ್ಲೋ ಓಡುತ್ತಿರುತ್ತದೆ.

ಪರದೆಯ ಮೇಲಿನ ಚುನಾವಣಾ ಸಮೀಕ್ಷೆ ನೋಡುತ್ತ ಕೇಳುತ್ತ ನಮಗಾಗುವ ಸ್ಥಿತಿ ಅದು. ತಲೆಚಿಟ್ಟು ಹಿಡಿದರೂ ಬಟನ್ ಒತ್ತಲಾರದಷ್ಟು ಮರಗಟ್ಟಿ ಮಿದುಳು ಪರವಶ ಆಗಿರುತ್ತದೆ. ಅದಕ್ಕೆ ಔಷಧವಿಲ್ಲ.

ಚುರುಮುರಿ

ಮತ ಲಾಭ!

• ಎಸ್.ಬಿ.ರಂಗನಾಥ್

‘ಅಂತೂ ಚುನಾವಣಾ ಪರ್ವ ಮುಗಿದಂತಾಯ್ತು... ನಿನ್ನೆ ವೋಟು ಹಾಕಿದೆಯೇನೋ? ಬೂತ್ ಲಿಸ್ಟ್‌ನಲ್ಲಿ ನಿನ್ನ ಹೆಸರು ಇದೆಯೋ ಇಲ್ಲವೋ ಚೆಕ್ ಮಾಡಿಸಬೇಕೂಂತಿದ್ದೆ’ ಚೆಡ್ಡಿ ದೋಸ್ತ್‌ನನ್ನು ಕೇಳಿದೆ.

‘ನೋಡಿಲ್ಲಿ’ ಎಂದು ಎಡಗೈ ತೋರು ಬೆರಳ ತುದಿಯ ಕಪ್ಪು ಗೆರೆ ತೋರಿಸಿದ.

‘ನಾನು ಪೋಲಿಂಗ್ ಬೂತಿಗೆ ಬಂದಾಗ ನೀನು ಕಾಣಿಸಲಿಲ್ವಲ್ಲಯ್ಯಾ... ಅದೇ ಟೈಮಿಗೆ ನಮ್ಮ ಸೂಪರ್ ಸ್ಟಾರ್ ಹೀರೊಯಿನ್ ವೋಟ್ ಹಾಕಲು ಬಂದಿದ್ದರಿಂದ ಭಾಳ ಗದ್ದಲವಿತ್ತೂನ್ನು’.

‘ನಾನು ಬೆಳಗ್ಗೆ ಏಳಕ್ಕೆ ಸರಿಯಾಗಿ ಹೋಗಿದ್ದೆನಪ್ಪಾ... ಮತಗಟ್ಟೆ ಮುಂದೆ ತಗೊಂಡಿದ್ದ ನನ್ನ ಸೆಲ್ಫಿ ಟೀವೀಲಿ ಬಂತು, ನೋಡಲಿಲ್ವೇ?’

‘ಇಲ್ಲವಯ್ಯಾ... ಯಾಕೋ ಅಷ್ಟು ಬೇಗ ಹೋಗಿದ್ದೆ?’

‘ಹಾಗಲ್ಲ, ಪೇಪರ್ ನೋಡಲಿಲ್ವೇ? ವೋಟು ಮಾಡಿದ್ದಕ್ಕೆ ಬೆರಳ ಗುರುತು ತೋರಿಸಿದೋರಿಗೆ ಫ್ರೀ ಬೆಣ್ಣೆ ದೋಸೆ ಅಂತಿರಲಿಲ್ವಾ? ನಾನು ಡಬಲ್ ದೋಸೆ ತಿಂದು, ಬೈಕ್‌ಗೆ ಫ್ರೀ ಪೆಟ್ರೋಲ್ ಹಾಕಿಸ್ಕೊಂಡು...’

‘ಫ್ರೀ ಪೆಟ್ರೋಲು?!’

‘ಹೌದಪ್ಪಾ, ಒಂದು ಬಂಕ್‌ನವರು ಮತ ಹಾಕಿದೋರಿಗೆ ಉಚಿತವಾಗಿ ಪೆಟ್ರೋಲ್ ಕೊಟ್ರು. ಹಾಕಿಸ್ಕೊಂಡು ಜೂಮ್ ಅಂತ ನಂದಿ ಬೆಟ್ಟಕ್ಕೆ ಹೋದ್ರೆ ‘ಕ್ಲೋಸ್ಡ್’ ಅಂತ ಬೋರ್ಡ್ ಹಾಕಿದ್ರು!’

‘ತೆಪರೆ, ಎಲೆಕ್ಷನ್ ದಿನ ಬೆಟ್ಟಕ್ಕೆ ಪ್ರವೇಶ ಇಲ್ಲ ಅಂತ ಮೊದಲೇ ಅನೌನ್ಸ್ ಮಾಡಿದ್ರಲ್ಲೋ. ಅದ್ಸರಿ, ವೋಟರ್ಸ್ ಲಿಸ್ಟಲ್ಲಿ ನಿನ್ನ ಹೆಸರು ಇತ್ತೇ?’

‘ಇಲ್ಲದಿದ್ರೇನಂತೆ! ಬೆರಳಿಗೆ ಕಪ್ಪು ಶಾಯಿ ಹಾಕಿಕೊಳ್ಳಲು ಬರೋಲ್ವೆ?’

‘ಭೇಷ್! ಮುಂದಿನ ಅಸೆಂಬ್ಲಿ ಚುನಾವಣೆಗೆ ನಿನಗೆ ಖಂಡಿತ ಟಿಕೆಟ್ ಸಿಗುತ್ತೆ’.

‘ನಿನ್ನ ಬಾಯಿ ಹರಕೆ ಫಲಿಸಲಿ. ನಾನಿನ್ನು ಬರ್ತೀನಿ, ಅಲ್ಲಿ ವೋಟು ಹಾಕಿದ ಗುರುತು ತೋರಿಸಿದವರಿಗೆ ಉಚಿತ ಅಕ್ಕಿ, ಬೇಳೆ ಕೊಡ್ತಾರಂತೆ’.

ನನ್ನ ತೆರೆದ ಬಾಯಿ ಮುಚ್ಚಲಿಲ್ಲ. ನನ್ನ ಕೈ ಬೆರಳ ತುದಿಯ ಕಪ್ಪು ಅಗಲವಾದಂತೆ ಭಾಸವಾಗತೊಡಗಿತು!

ಸಂಗತ

ಶಾಲೆಗೆ ದಾಖಲು: ಬೇಡ ಅವಸರ

ಸೂಕ್ತ ವಯಸ್ಸಿಗೆ ಮೊದಲೇ ಶಾಲೆಗೆ ದಾಖಲಾಗುವ ಮಕ್ಕಳು ಅಧ್ಯಯನದಲ್ಲಿ ಹಿಂದೆ ಬೀಳುತ್ತಾರೆ ಎಂಬುದನ್ನು ಸಂಶೋಧನಾ ವರದಿಗಳು ದೃಢಪಡಿಸಿವೆ

• ಡಾ. ಎಚ್.ಬಿ.ಚಂದ್ರಶೇಖರ್

2023– 24ನೇ ಸಾಲಿನಲ್ಲಿ ಎಲ್‌ಕೆಜಿಗೆ ದಾಖಲಿಸಲು ಮಗುವಿಗೆ ನಾಲ್ಕು ವರ್ಷಗಳಾಗಿರಬೇಕು ಎಂದು ರಾಜ್ಯ ಶಿಕ್ಷಣ ಇಲಾಖೆಯು ಆದೇಶ ಹೊರಡಿಸಿದೆ. 2025–26ನೇ ಸಾಲಿನಿಂದ ಮಕ್ಕಳನ್ನು ಒಂದನೇ ತರಗತಿಗೆ ದಾಖಲಿಸಲು, ಆ ಶೈಕ್ಷಣಿಕ ವರ್ಷಾರಂಭದ ಜೂನ್ ಒಂದಕ್ಕೆ ಮಗುವಿಗೆ ಆರು ವರ್ಷ ಪೂರ್ಣಗೊಂಡಿರಬೇಕು ಎಂಬ ಹಿಂದಿನ ಆದೇಶಕ್ಕೆ ಪೂರಕವಾಗಿ ಈ ಆದೇಶ ಹೊರಡಿಸಲಾಗಿದೆ.

ಈ ಕುರಿತು ಅನೇಕ ಪೋಷಕರಲ್ಲಿ ತಳಮಳ ಶುರುವಾಗಿದೆ. ನಿಗದಿತ ವಯಸ್ಸಿಗೆ ಕೆಲವೇ ದಿನ ಅಥವಾ ತಿಂಗಳುಗಳಷ್ಟು ಕಡಿಮೆ ವಯೋಮಾನದವರಾದ ಮಕ್ಕಳು ಎಲ್‌ಕೆಜಿ ಅಥವಾ ಯುಕೆಜಿ ತರಗತಿಯನ್ನು ಪುನರಾವರ್ತಿಸಬೇಕಾಗುತ್ತದೆ. ಇದರಿಂದ ಮಕ್ಕಳಿಗೆ ಒಂದು ವರ್ಷ ನಷ್ಟವಾಗುವುದರ ಜೊತೆಗೆ ಆರ್ಥಿಕ ಹೊರೆಯೂ ಆಗುತ್ತದೆ ಎಂಬ ದೂರು ಕೆಲ ಪೋಷಕರದ್ದಾಗಿದೆ.

ಮಕ್ಕಳು ಬೇಗ ಶಾಲೆಗೆ ಸೇರಿ, ಒಳ್ಳೆಯ ಶಿಕ್ಷಣ ಪಡೆದು, ಚಂದದ ನೌಕರಿ ಹಿಡಿದು, ದೊಡ್ಡ ಮಟ್ಟದ ವೇತನ ಪಡೆಯುವಂತಾಗಬೇಕು ಎಂಬ ತುಡಿತ ನಮ್ಮ ಹೆಚ್ಚಿನ ಪೋಷಕರಲ್ಲಿ ಇರುತ್ತದೆ. ಒಂದನೇ ತರಗತಿಗೆ ಮಕ್ಕಳ ದಾಖಲಾತಿಯ ವಯಸ್ಸನ್ನು ಹಲವು ವರ್ಷಗಳ ಕೆಳಗೆ 5.10 ವರ್ಷಕ್ಕೆ ನಿಗದಿ ಮಾಡಲಾಗಿತ್ತು. ಪೋಷಕರ ಪ್ರತಿರೋಧದಿಂದಾಗಿ ಅದನ್ನು 5.5 ವರ್ಷಕ್ಕೆ ನಿಗದಿ ಮಾಡಲಾಯಿತು. ಈ ಮೊದಲು ಮಕ್ಕಳ ನೈಜ ಜನ್ಮದಿನಾಂಕವನ್ನು ಬದಲಾಯಿಸಿ, ಆತುರದಲ್ಲಿ ಒಂದನೇ ತರಗತಿಗೆ ದಾಖಲಿಸುವ ಪರಿಪಾಟ ಇತ್ತು. ಜನ್ಮದಿನಾಂಕ ಕುರಿತ ದೃಢೀಕೃತ ದಾಖಲೆಗೆ ಒತ್ತಾಯಿಸದೆ, ಪೋಷಕರ ಲಿಖಿತ ಹೇಳಿಕೆ ಆಧರಿಸಿ ದಾಖಲು ಮಾಡಿಕೊಳ್ಳಲಾಗುತ್ತಿತ್ತು.

ನನಗೆ ನಾಲ್ಕೂವರೆ ವರ್ಷವಾಗಿದ್ದಾಗ ಐದು ವರ್ಷ ಹತ್ತು ತಿಂಗಳೆಂದು ಜನ್ಮದಿನಾಂಕವನ್ನು ಬದಲಿಸಿ ಶಾಲೆಗೆ ಸೇರಿಸಲಾಗಿತ್ತು. ಇದರ ಪರಿಣಾಮವಾಗಿ, ಶಾಲೆಯಲ್ಲಿ ನಿಗದಿಪಡಿಸಿದ ಪಠ್ಯಾಂಶ, ಪರಿಕಲ್ಪನೆಗಳನ್ನು ಅರ್ಥೈಸಿಕೊಳ್ಳಲು ನಾನು ಪ್ರಯಾಸಪಡುತ್ತಿದ್ದುದು ನನ್ನ ನೆನಪಿನಲ್ಲಿದೆ. 50, 60ರ ದಶಕಗಳಲ್ಲಿ ಶಾಲೆಗೆ ಸೇರಿದ ಹೆಚ್ಚಿನವರ ಜನ್ಮದಿನಾಂಕವು ಜೂನ್ ಅಥವಾ ಜುಲೈ ತಿಂಗಳನ್ನೇ ಒಳಗೊಂಡಿರುತ್ತಿದ್ದುದು ಕಾಕತಾಳೀಯವಲ್ಲ. ಹೆಚ್ಚಿನ ಪೋಷಕರಿಗೆ ಮಕ್ಕಳ ಜನ್ಮದಿನಾಂಕದ ಮಾಹಿತಿ ಇರದಿದ್ದ ಕಾರಣದಿಂದ ಶಿಕ್ಷಕರು ಸ್ವತಃ ದಿನಾಂಕವನ್ನು ಅಂದಾಜಿಸಿ, ಅವರನ್ನು ಶಾಲೆಗೆ ಸೇರಿಸಿಕೊಂಡುಬಿಡುತ್ತಿದ್ದರು. ತಮ್ಮ ವಯೋಮಾನಕ್ಕೆ ಹೆಚ್ಚಿನದಾದ ಕ್ಲಿಷ್ಟ ವಿಷಯಗಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗದೆ ಶಾಲೆಯನ್ನು ಅರ್ಧಕ್ಕೇ ಬಿಡುತ್ತಿದ್ದ ಮಕ್ಕಳ ಸಂಖ್ಯೆ ದೊಡ್ಡದಿತ್ತು.

ಹಿಂದಿನ ವರ್ಷ ಒಂದನೇ ತರಗತಿಗೆ 6 ವರ್ಷ ವಯಸ್ಸನ್ನು ಕಡ್ಡಾಯ ಮಾಡಿದ್ದ ಕೇಂದ್ರೀಯ ವಿದ್ಯಾಲಯದ ಆದೇಶದ ವಿರುದ್ಧ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದ ಪೋಷಕರಿಗೆ ನ್ಯಾಯಮೂರ್ತಿಗಳು, ‘ಶಾಲೆಗೆ ಮಕ್ಕಳನ್ನು ಕಳುಹಿಸಲು ಒಂದು ರೀತಿಯ ಅವಸರ, ನೂಕುನುಗ್ಗಲು ಇದೆ. ತಮ್ಮ ಮಕ್ಕಳು ಎರಡು ವರ್ಷ ತಲುಪುತ್ತಿದ್ದಂತೆಯೇ ಪೋಷಕರು ಅವರನ್ನು ಶಾಲೆಗಳಿಗೆ ದಾಖಲಿಸಲು ಇಚ್ಛಿಸುತ್ತಾರೆ. ಇದು ಮಕ್ಕಳ ಮಾನಸಿಕ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ’ ಎಂದು ಹೇಳುತ್ತಾ, ಪೋಷಕರ ಅರ್ಜಿಗಳನ್ನು ವಜಾ ಮಾಡಿದ್ದರು.

ಜಗತ್ತಿನ ಹೆಚ್ಚಿನ ರಾಷ್ಟ್ರಗಳಲ್ಲಿ ಒಂದನೇ ತರಗತಿಗೆ ಮಕ್ಕಳನ್ನು ದಾಖಲಿಸುವ ವಯಸ್ಸು 6 ವರ್ಷ ಇದೆ. ವಿಶ್ವದಲ್ಲಿ ಅತ್ಯುತ್ತಮವಾದ ಶಿಕ್ಷಣ ವ್ಯವಸ್ಥೆಯನ್ನು ಹೊಂದಿರುವ ಫಿನ್ಲೆಂಡ್ ದೇಶದಲ್ಲಿ ಒಂದನೇ ತರಗತಿಗೆ ದಾಖಲಾಗಲು ಮಕ್ಕಳಿಗೆ ಕನಿಷ್ಠ 7 ವರ್ಷವಾಗಿರಬೇಕು. ಅಮೆರಿಕದ ಹೆಚ್ಚಿನ ರಾಜ್ಯಗಳು ಹಾಗೂ ಚೀನಾದಲ್ಲಿ ಒಂದನೇ ತರಗತಿಯ ದಾಖಲಾತಿಗೆ 6 ವರ್ಷ ವಯಸ್ಸನ್ನು ನಿಗದಿ ಮಾಡಲಾಗಿದೆ. ಮಕ್ಕಳಿಗೆ ‘ಒಂದು ವರ್ಷ ಉಳಿಸುವ ಲೆಕ್ಕಾಚಾರ’ದಲ್ಲಿ ಕೆಲವು ಪೋಷಕರು ಮೂರು ವರ್ಷವಾಗುವ ಮೊದಲೇ ಅವರನ್ನು ಎಲ್‌ಕೆಜಿಗೆ ದಾಖಲಿಸುತ್ತಾರೆ. ಈ ರೀತಿ ಸೂಕ್ತ ವಯಸ್ಸಿಗೆ ಮೊದಲೇ ಆತುರಾತುರವಾಗಿ ಶಾಲೆಗೆ ದಾಖಲಾಗುವ ಮಕ್ಕಳು ಸರಿಯಾದ ವಯೋಮಾನ ಅಥವಾ ಹೆಚ್ಚಿನ ವಯೋಮಾನದವರಾದ ಮಕ್ಕಳಿಗಿಂತ ಅಧ್ಯಯನದಲ್ಲಿ ಹಿಂದೆ ಬೀಳುತ್ತಾರೆ.

ಇಂಗ್ಲೆಂಡ್‌ನ ಇನ್‌ಸ್ಟಿಟ್ಯೂಟ್ ಫಾರ್ ಫಿಸ್ಕಲ್ ಸ್ಟಡೀಸ್‌ನ ಸಂಶೋಧನಾ ವರದಿಯು, ಕಡಿಮೆ ವಯೋಮಾನದ ಮಕ್ಕಳು ಪರೀಕ್ಷೆಗಳಲ್ಲಿ ಕಡಿಮೆ ಸಾಧನೆ ತೋರುತ್ತಾರೆ ಮತ್ತು ಶೈಕ್ಷಣಿಕ ಚಟುವಟಿಕೆಗಳಲ್ಲಿ ಸಂತಸದಿಂದ ಪಾಲ್ಗೊಳ್ಳುವುದಿಲ್ಲ. ಕಡಿಮೆ ವಯೋಮಾನದವರನ್ನು ಬೇಗ ಶಾಲೆಗೆ ಸೇರಿಸುವುದು ಅವರ ಭವಿಷ್ಯದ ಹಿತದೃಷ್ಟಿಯಿಂದ ಮಾರಕ. ಅಂತಹ ಮಕ್ಕಳು ಆಟೋಟಗಳಲ್ಲಿ ತಮ್ಮ ತರಗತಿಯ ಹೆಚ್ಚಿನ ವಯೋಮಾನದ ಮಕ್ಕಳಿಗಿಂತ ಹಿಂದೆ ಬೀಳುತ್ತಾರೆ ಎಂದು ಹೇಳಿದೆ.

ಶೈಕ್ಷಣಿಕ ಚಟುವಟಿಕೆ, ಕ್ರೀಡೆ ಅಥವಾ ಇನ್ನಿತರ ಕ್ಷೇತ್ರಗಳಲ್ಲಿ ಸಾಧನೆ ಮಾಡಲು ಮಕ್ಕಳು ಸೂಕ್ತ ದೈಹಿಕ ಪಕ್ವತೆ ಹೊಂದಿರಬೇಕಾಗುತ್ತದೆ. ವಯೋಮಾನ ಆಧಾರಿತ ದೈಹಿಕ ಪಕ್ವತೆಯ ಮೇಲೆ ಮಕ್ಕಳಲ್ಲಿ ಬುದ್ಧಿಶಕ್ತಿಯ ಬೆಳವಣಿಗೆ ಯಾವ ರೀತಿ ಆಗುತ್ತದೆ ಎಂಬುದನ್ನು ವಿಜ್ಞಾನಿ ಪಿಯಾಜೆ ಹಂತ ಹಂತವಾಗಿ ವಿವರಿಸಿದ್ದಾರೆ. ಮಕ್ಕಳ ವಯೋಮಾನ ಆಧರಿಸಿ ಶೈಕ್ಷಣಿಕ ಮತ್ತು ಮನೋವೈಜ್ಞಾನಿಕ ತತ್ವಗಳಿಗೆ ಪೂರಕವಾಗಿ ಪಠ್ಯಪುಸ್ತಕಗಳನ್ನು ರೂಪಿಸಲಾಗಿರುತ್ತದೆ. ಇಂತಹ ಕಾರಣಗಳಿಂದ, ಮಕ್ಕಳನ್ನು ಶಾಲೆಗೆ ದಾಖಲಿಸಲು ಒಂದಷ್ಟು ತಡವಾದರೆ, ಅವರ ಭವಿಷ್ಯದ ದೃಷ್ಟಿಯಿಂದ ಲಾಭವೆಂಬ ಅಂಶವನ್ನು ಪೋಷಕರು ಮನಗಾಣಬೇಕು.

ವಾಚಕರ ವಾಣಿ

‘ಆಟ’ ಮುಗಿಯಿತೇ ಇಷ್ಟು ಬೇಗ?!

ಕರ್ನಾಟಕ ವಿಧಾನಸಭಾ ಚುನಾವಣೆಗೆ ಸುಮಾರು ಒಂದು ತಿಂಗಳಿನಿಂದ ಬಿರುಸಿನ ಪ್ರಚಾರ ನಡೆದು, ಬುಧವಾರ ಮತದಾನವೂ ಆಗಿದೆ. ರಾಜ್ಯದ ಮತದಾರರು ಈವರೆಗೆ ನಾನಾ ಪಕ್ಷಗಳ ಮುಖಂಡರ ಭಾಷಣಗಳನ್ನು ಆಲಿಸಿದ್ದರು. ವಿರೋಧಿಗಳ ಬಗ್ಗೆ ನಾಯಕರು ಆಡಿದ ಬೈಗುಳದ ಮಾತುಗಳು ಬೇಸರ ಮೂಡಿಸುವಂತಿದ್ದರೂ ಒಂದು ರೀತಿ ಮಜಾ ಕೊಡುತ್ತಿದ್ದವು. ಪರಸ್ಪರರ ಬೈಗುಳಗಳಲ್ಲಿ ವಿಷಸರ್ಪ, ವಿಷಕನ್ಯೆ ಹಾಗೂ ಕತ್ತೆ, ನಾಯಿ, ನರಿಯಂತಹ ಪ್ರಾಣಿಗಳ ಹೆಸರುಗಳೂ ಉಲ್ಲೇಖ ಆಗುತ್ತಿದ್ದವು. ಮಾಧ್ಯಮಗಳಲ್ಲಂತೂ ಅವರು ಹೀಗೆ, ಇವರು ಹಾಗೆ ಎಂಬಂತಹ ವರದಿಗಳು. ಅಲ್ಲಲ್ಲಿ ಗಲಾಟೆಗಳು. ಸ್ಟೌ, ಕುಕ್ಕರ್, ಸೀರೆ, ಮದ್ಯ, ಅಪಾರ ಹಣ ಜಪ್ತಿಯಂತಹ ಸುದ್ದಿಗಳನ್ನು ಕೇಳಿ ಮೈ ಝುಂ ಎನ್ನುತ್ತಿತ್ತು.

ಛೆ, ಇವೆಲ್ಲವೂ ಇಲ್ಲಿಗೇ ಮುಗಿದುಹೋದವೇ?! ಇನ್ನು ಕೆಲ ದಿನಗಳ ನಂತರವಂತೂ ಮಾಧ್ಯಮಗಳಲ್ಲಿನ ಸುದ್ದಿಗಳೆಲ್ಲಾ ಸಪ್ಪೆ ಎನಿಸತೊಡಗುತ್ತವೆ. ಇಂತಹ ‘ಸಡಗರ’ಕ್ಕೆ ಮುಂದಿನ ಚುನಾವಣೆಯವರೆಗೂ ಕಾಯಬೇಕಲ್ಲ!

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ನೌಕರಿ ಆಮಿಷ: ಬೆಳೆಯುತ್ತಿದೆ ವಂಚಕರ ಜಾಲ

ವಿದೇಶದಲ್ಲಿ ನೌಕರಿಗೆ ಸೇರುವ ಕನಸು ಕಾಣುವವರ ಸಂಖ್ಯೆಯೇನೂ ನಮ್ಮಲ್ಲಿ ಕಡಿಮೆ ಇಲ್ಲ. ಇದನ್ನೇ ಬಂಡವಾಳ ಮಾಡಿಕೊಂಡು, ವಿದೇಶದಲ್ಲಿ ಉದ್ಯೋಗದ ವೀಸಾ ಮತ್ತು ಪೌರತ್ವ ಕೊಡಿಸುವುದಾಗಿ ನಂಬಿಸಿ, ಸಾರ್ವಜನಿಕರಿಂದ ಲಕ್ಷಾಂತರ ರೂಪಾಯಿ ಪಡೆದು ವಂಚಿಸುವ ಜಾಲಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಮುಖ್ಯವಾಗಿ ಆಸ್ಟ್ರೇಲಿಯ, ಸಿಂಗಪುರ, ಮಲೇಷ್ಯಾ, ಆಫ್ರಿಕಾ ಮತ್ತು ಕೆನಡಾ ದೇಶಗಳಲ್ಲಿ ಕೆಲಸ ಕೊಡಿಸುವುದಾಗಿ ಅಮಾಯಕರನ್ನು ನಂಬಿಸಿ, ಪ್ರವಾಸಿ ವೀಸಾದ ಮೇಲೆ ಅವರನ್ನು ವಿದೇಶಕ್ಕೂ ಕಳುಹಿಸಿ ವಂಚಿಸುವ ಪ್ರಕರಣಗಳು ಬೆಳಕಿಗೆ ಬರುತ್ತಿವೆ.

ಮತ್ತೊಂದೆಡೆ, ವಿದೇಶದಲ್ಲಿ ಉದ್ಯೋಗ ಮತ್ತು ವೀಸಾ ಕೊಡಿಸುವುದಾಗಿ ಸಾಮಾಜಿಕ ಜಾಲತಾಣ ಹಾಗೂ ಅಂತರ್ಜಾಲದಲ್ಲಿ ಪ್ರಕಟಣೆ ಕೊಟ್ಟು, ಅದನ್ನು ನಂಬಿ ಬಂದವರಿಗೆ ಆನ್‌ಲೈನ್ ಮೂಲಕ ಸಂದರ್ಶನ ನಡೆಸಿ, ವೀಸಾ ಮಾಡಿಸಲು ಶುಲ್ಕ ಹಾಗೂ ಇನ್ನಿತರ ಖರ್ಚುಗಳ ನೆಪ ಹೇಳಿ ಲಕ್ಷಾಂತರ ರೂಪಾಯಿಯನ್ನು ಆನ್‌ಲೈನ್ ಮೂಲಕವೇ ವರ್ಗಾಯಿಸಿಕೊಳ್ಳುವ ಜಾಲಗಳೂ ಸಾಮಾನ್ಯವಾಗಿವೆ. ಇಂತಹ ವಂಚನೆಗಳ ಬಗ್ಗೆ ಜನಜಾಗೃತಿ ಮೂಡಿಸುವ ಕೆಲಸವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮಾಡಬೇಕಾಗಿದೆ.

ಡಾ. ವಿಜಯಕುಮಾರ್ ಎಚ್.ಕೆ., ರಾಯಚೂರು

ಲೆಕ್ಕಾಚಾರ...

ಅಂತೂ ಇಂತೂ ಮುಗಿಯಿತು
ಮತದಾನದ ಸಡಗರ
ಆಗಿಬಿಟ್ಟನಾ ಈಗ
ಮತದಾರ ‘ಹಗುರ’?!
ಆರಂಭವಾಯಿತಲ್ಲ
ನಿಂತಲ್ಲಿ ಕುಂತಲ್ಲಿ
ಸೋಲು, ಗೆಲುವಿನದೇ
ಲೆಕ್ಕಾಚಾರ...

ಮ.ಗು.ಬಸವಣ್ಣ
ನಂಜನಗೂಡು

ಕಲ್ಯಾಣ ಕರ್ನಾಟಕ: ಸುಧಾರಿಸಲಿ ಶೈಕ್ಷಣಿಕ ಗುಣಮಟ್ಟ

ಶಿಕ್ಷಣ ವ್ಯವಸ್ಥೆಯಲ್ಲಿ ಸುಧಾರಣೆ ತರಲಾಗಿದೆ ಎಂಬ ಮಾತು ಆಗಾಗ ಕೇಳಿಬರುತ್ತಲೇ ಇರುತ್ತದೆ. ಆದರೆ ಈಗ ಪ್ರಕಟವಾಗಿರುವ ಎಸ್‌ಎಸ್‌ಎಲ್‌ಸಿ ಫಲಿತಾಂಶ ಮತ್ತು ಕೆಲ ದಿನಗಳ ಹಿಂದೆ ಪ್ರಕಟವಾದ ದ್ವಿತೀಯ ಪಿಯು ಫಲಿತಾಂಶದಲ್ಲಿ ಕಲ್ಯಾಣ ಕರ್ನಾಟಕದ ಜಿಲ್ಲೆಗಳು ಪಡೆದಿರುವ ಸ್ಥಾನಗಳನ್ನು ನೋಡಿದರೆ ಈ ಮಾತು ಅಪವಾದ ಎನಿಸುತ್ತದೆ. ಪ್ರತಿ ವರ್ಷವೂ ಈ ಜಿಲ್ಲೆಗಳು ಕಡಿಮೆ ಮಟ್ಟದ ಫಲಿತಾಂಶವನ್ನೇ ದಾಖಲಿಸುತ್ತಿವೆ. ಆದರೂ ಯಾರೂ ಇದನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲವೇಕೆ? ಇನ್ನು ಯಾದಗಿರಿ ಜಿಲ್ಲೆಯಂತೂ ಶೈಕ್ಷಣಿಕ ಫಲಿತಾಂಶದಲ್ಲಿ ಸಾಮಾನ್ಯವಾಗಿ ಯಾವಾಗಲೂ ಕೊನೆಯ ಸ್ಥಾನದಲ್ಲಿಯೇ ಇರುತ್ತದೆ.

ಇಲ್ಲಿನ ಶಿಕ್ಷಣ ಮಟ್ಟವನ್ನು ಸುಧಾರಿಸುವ ಬಗ್ಗೆ ಸರ್ಕಾರ, ಈ ಭಾಗದ ಜನಪ್ರತಿನಿಧಿಗಳು ಹಾಗೂ ಶಿಕ್ಷಣಾಧಿಕಾರಿಗಳು ಗಂಭೀರವಾಗಿ ಚಿಂತಿಸಬೇಕು.

ಡಾ. ನಂದೀಶ್ವರ ದಂಡೆ, ಕೊಂಡನಾಯಕನಹಳ್ಳಿ, ಹೊಸಪೇಟೆ

ಯುದ್ಧ ವಿಮಾನ: ಸುರಕ್ಷತೆಗೆ ಸಿಗಲಿ ಆದ್ಯತೆ

ಭಾರತೀಯ ವಾಯುಪಡೆಯ ಮಿಗ್– 21 ಯುದ್ಧ ವಿಮಾನವು ರಾಜಸ್ಥಾನದ ಹನುಮಾನ್‌ಗಢ ಜಿಲ್ಲೆಯ ಮನೆಯೊಂದರ ಮೇಲೆ ಪತನವಾಗಿ, ಮನೆಯೊಳಗಿದ್ದ ಮೂವರು ಮಹಿಳೆಯರು ಸಾವಿಗೀಡಾದ ಸುದ್ದಿ ಓದಿ (ಪ್ರ.ವಾ., ಮೇ 9) ಮನ ಕಲಕಿತು. ಈ ಮಹಿಳೆಯರು ತಮ್ಮದಲ್ಲದ ತಪ್ಪಿಗಾಗಿ ಅಮೂಲ್ಯವಾದ ಜೀವವನ್ನು ತೆತ್ತಿದ್ದಾರೆ.

ಕೇಂದ್ರ ಬಜೆಟ್‌ನಲ್ಲಿ ಪ್ರತಿವರ್ಷ ರಕ್ಷಣಾ ವಲಯಕ್ಕೆ ಅತಿಹೆಚ್ಚು ಅನುದಾನ ಮೀಸಲಿಡಲಾಗುತ್ತದೆ. ರಕ್ಷಣಾ ಸಚಿವಾಲಯ ಹಾಗೂ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗೆ (ಡಿಆರ್‌ಡಿಒ) ಸರ್ಕಾರ ಅತಿಹೆಚ್ಚು ಒತ್ತು ನೀಡುತ್ತದೆಯಾದರೂ ಯುದ್ಧ ವಿಮಾನಗಳ ಗುಣಮಟ್ಟದ ನಿರ್ವಹಣೆಯಲ್ಲಿ ಹಿಂದುಳಿದಿರುವಂತಿದೆ.

ಕಾಲಕಾಲಕ್ಕೆ ಯುದ್ಧ ವಿಮಾನಗಳ ತಪಾಸಣೆ ಹಾಗೂ ಸುರಕ್ಷತೆಗೆ ಆದ್ಯತೆ ಕೊಡುವುದು ಅತ್ಯಗತ್ಯ. ಹನುಮಾನ್‌ಗಢದ ಜಿಲ್ಲಾಡಳಿತವೇನೋ ಮೃತ ಮಹಿಳೆಯರ ಕುಟುಂಬಕ್ಕೆ ತಲಾ ₹ 5 ಲಕ್ಷ ಪರಿಹಾರ ನೀಡುವುದಾಗಿ ಹೇಳಿದೆ. ಆದರೆ ಬಲಿಯಾದ ಜೀವಗಳನ್ನು ಮತ್ತೆ ತಂದುಕೊಡಲು ಕೇಂದ್ರ ಸರ್ಕಾರಕ್ಕಾಗಲಿ, ರಕ್ಷಣಾ ಸಚಿವಾಲಯಕ್ಕಾಗಲಿ ಸಾಧ್ಯವಿದೆಯೇ? ಅಮಾಯಕ ಜೀವಗಳಿಗೇಕೆ ತಮ್ಮದಲ್ಲದ ತಪ್ಪಿಗೆ ಈ ಶಿಕ್ಷೆ? ಹಿಂದಿನ ಆರು ದಶಕಗಳಲ್ಲಿ 400 ಮಿಗ್– 21 ಯುದ್ಧ ವಿಮಾನಗಳು ಪತನವಾಗಿವೆ ಎಂಬುದು ಇಲ್ಲಿ ಗಮನಾರ್ಹ. ಇದರಿಂದ ಮಿಗ್ ವಿಮಾನಗಳಲ್ಲಿ ಸುರಕ್ಷತೆ ಕಳಪೆ ಮಟ್ಟದಲ್ಲಿರುವುದು ಮತ್ತೆ ಮತ್ತೆ ಸಾಬೀತಾಗುತ್ತಿದ್ದರೂ ಅದನ್ನು ಗಂಭೀರವಾಗಿ ಪರಿಗಣಿಸದಿರುವುದು ಅತ್ಯಂತ ಪ್ರಮುಖವಾದ ಲೋಪವೇ ಸರಿ. ಇನ್ನಾದರೂ ಇಂತಹ ದುರಂತಗಳು ಸಂಭವಿಸದಂತೆ ರಕ್ಷಣಾ ಸಚಿವಾಲಯವು ಯುದ್ಧ ವಿಮಾನಗಳ ಸುರಕ್ಷತೆಗೆ ಅತಿ ಹೆಚ್ಚು ಆದ್ಯತೆ ನೀಡಲಿ.

ಲಿಖಿತಶ್ರೀ ಡಿ., ಮಧುಗಿರಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಡಾಲರ್ ಪಾರಮ್ಯ ಕಡಿವಾಣಕ್ಕೆ ಯತ್ನ

ಈಗ ಜಾಗತಿಕ ವಾಣಿಜ್ಯ ವಹಿವಾಟು ಬಹುತೇಕ ನಡೆಯುವುದು ಡಾಲರ್ ಆಧಾರದಲ್ಲಿ. ಎರಡು ದೇಶಗಳು ತಮ್ಮದೇ ಆದ ಕರೆನ್ಸಿಯನ್ನು ಹೊಂದಿದ್ದರೂ ಅವು ಅಮೆರಿಕದ ಡಾಲರ್ ಅನ್ನು ವಿನಿಮಯದ ಹಣವಾಗಿ ಬಳಸಿಕೊಳ್ಳುತ್ತವೆ. ಯಾವುದೇ ಸರಕು ಮತ್ತು ಸೇವೆಯನ್ನು ಡಾಲರ್‌ನ ಮೌಲ್ಯದ ಲೆಕ್ಕಾಚಾರದಲ್ಲಿ ಮಾರಾಟ ಮಾಡುತ್ತವೆ ಮತ್ತು ಖರೀದಿಸುತ್ತವೆ. ಹೀಗೆ ಜಾಗತಿಕ ವ್ಯಾಪಾರ ವಹಿವಾಟಿನ ಮೇಲೆ ಡಾಲರ್ ಸಾಧಿಸಿರುವ ಪಾರಮ್ಯವನ್ನು ಮುರಿಯಬೇಕು ಎಂದು ಕೆಲವು ದೇಶಗಳು ಹೊರಟಿವೆ. ತಮ್ಮದೇ ಕರೆನ್ಸಿಗಳ ಮೂಲಕ ವಹಿವಾಟು ನಡೆಸುತ್ತಿವೆ. ಈ ಬೆಳವಣಿಗೆ ಡಾಲರ್‌ನ ಪಾರಮ್ಯವನ್ನು ಮುರಿಯುತ್ತದೆ ಎಂದು ನಿರೀಕ್ಷಿಸಲಾಗಿದೆ. ಆದರೆ, ಡಾಲರ್ ಬದಲಿಗೆ ಬೇರೆ ಯಾವ ಕರೆನ್ಸಿಯನ್ನು ವ್ಯಾಪಾರ-ವಹಿವಾಟಿನ ಮಾಧ್ಯಮವನ್ನಾಗಿ ಬಳಸಬೇಕು ಎಂಬ ದೊಡ್ಡ ಪ್ರಶ್ನೆಯೂ ಎದುರಾಗಿದೆ

ಪ್ರಜಾವಾಣಿ ವಾರ್ತೆ

ಉಕ್ರೇನ್ ಮತ್ತು ರಷ್ಯಾ ನಡುವಣ ಯುದ್ಧ ಆರಂಭವಾದ ಬಳಿಕ, ಅಮೆರಿಕ ಮತ್ತು ನ್ಯಾಟೊ ದೇಶಗಳು ರಷ್ಯಾ ಮೇಲೆ ಆರ್ಥಿಕ ನಿರ್ಬಂಧಗಳನ್ನು ಹೇರಿದವು. ಯಾವ ದೇಶವೂ ರಷ್ಯಾ ಜತೆಗೆ ವ್ಯಾಪಾರ ವಹಿವಾಟು ನಡೆಸಬಾರದು ಎಂದು ತಾಕೀತು ಮಾಡಿದವು. ಅಮೆರಿಕವು ಡಾಲರ್ ರೂಪದಲ್ಲಿದ್ದ ರಷ್ಯಾದ ಮೀಸಲು ಹಣವನ್ನು ಜಪ್ತಿ ಮಾಡಿತು. ಅಮೆರಿಕದಲ್ಲಿದ್ದ ರಷ್ಯಾದ ಬ್ಯಾಂಕ್‌ಗಳನ್ನು ದೇಶದಿಂದ ಹೊರಗಟ್ಟಿತು. ರಷ್ಯಾವು ಜಾಗತಿಕ ಮಟ್ಟದಲ್ಲಿ ವ್ಯಾಪಾರ ನಡೆಸಲು ಸಾಧ್ಯವಾಗದೇ ಇರುವ ಸ್ಥಿತಿ ನಿರ್ಮಿಸಿ, ಅದನ್ನು ಇಕ್ಕಟ್ಟಿಗೆ ಸಿಲುಕಿಸುವ ಉದ್ದೇಶ ಈ ಕ್ರಮದ ಹಿಂದೆ ಇತ್ತು. ಆದರೆ, ರಷ್ಯಾ ಆ ನಿರ್ಬಂಧವನ್ನೂ ಮೀರಿ ಜಾಗತಿಕ ಮಟ್ಟದಲ್ಲಿ ವ್ಯಾಪಾರ ನಡೆಸಿತು. ತನ್ನ ಕರೆನ್ಸಿಯಾದ ರೂಬಲ್ ಮೂಲಕ ಖರೀದಿಸುವುದಾದರೆ ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿನ ಬೆಲೆಗಿಂತ ಕಡಿಮೆ ಬೆಲೆಗೆ ಕಚ್ಚಾತೈಲ ಪೂರೈಸುವುದಾಗಿ ಘೋಷಿಸಿತು. ರಷ್ಯಾದಿಂದ ಕಡಿಮೆ ಬೆಲೆಗೆ ಕಚ್ಚಾತೈಲ ಖರೀದಿಸಿದ ದೇಶಗಳಲ್ಲಿ ಭಾರತವೂ ಒಂದು. ಭಾರತದ ರೂಪಾಯಿ ಮತ್ತು ರಷ್ಯಾದ ರೂಬಲ್‌ನಲ್ಲಿಯೇ ಈ ವಹಿವಾಟು ನಡೆಯುತ್ತಿದೆ. ಅಮೆರಿಕದ ಡಾಲರ್ ಅನ್ನು ಬದಿಗಿಟ್ಟು ತಮ್ಮದೇ ಕರೆನ್ಸಿ ಮೂಲಕ ವಹಿವಾಟು ನಡೆಸಬೇಕು ಎಂಬ ದೊಡ್ಡಮಟ್ಟದ ಕೂಗು ಕೇಳಿಬಂದಿದ್ದು ಆಗಲೇ.

ಜಾಗತಿಕ ವ್ಯಾಪಾರ-ವಹಿವಾಟಿನಿಂದ ಡಾಲರ್ ಅನ್ನು ಹೊರಗಿಡುವ ಮತ್ತು ತಮ್ಮದೇ ಕರೆನ್ಸಿ ಮೂಲಕ ವಹಿವಾಟು ನಡೆಸುವ ಯತ್ನ ಇದೇ ಮೊದಲಲ್ಲ. ಎರಡನೇ ವಿಶ್ವಯುದ್ಧದ ನಂತರ ಇಂತಹ ಹಲವು ಯತ್ನಗಳು ನಡೆದಿವೆ. ಐರೋಪ್ಯ ಒಕ್ಕೂಟದ ಕರೆನ್ಸಿ-ಯೂರೊ ಸೃಷ್ಟಿಸುವಲ್ಲಿ, ಡಾಲರ್ ಪಾರಮ್ಯವನ್ನು ಮುರಿಯಬೇಕು ಎಂಬ ಉದ್ದೇಶವೂ ಪ್ರಮುಖವಾಗಿತ್ತು. 1999ರಲ್ಲಿ ಯೂರೊವನ್ನು ಚಲಾವಣೆಗೆ ತಂದಾಗ, ಅದು ಡಾಲರ್ ಅನ್ನು ಹಿಂದಿಕ್ಕುತ್ತದೆ ಅಥವಾ ಡಾಲರ್ ಅನ್ನು ಸರಿಗಟ್ಟುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ, ಎರಡೂ ಗುರಿಗಳನ್ನು ತಲುಪಲು ಯೂರೊ ಯಶಸ್ವಿಯಾಗಲಿಲ್ಲ. 2010ರ ದಶಕದಲ್ಲಿ ಚೀನಾ ಸಹ ತನ್ನ ಯುವಾನ್ ಕರೆನ್ಸಿಯನ್ನು ಡಾಲರ್‌ಗೆ ಪರ್ಯಾಯವಾಗಿ ಬಳಸುವ ಪ್ರಸ್ತಾವವನ್ನು ತನ್ನ ಮಿತ್ರ ರಾಷ್ಟ್ರಗಳ ಎದುರು ಇಟ್ಟಿತ್ತು. ಆದರೆ, ಅದು ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ಬರಲಿಲ್ಲ. ಆದರೆ, ಈಗ ಡಾಲರ್‌ನ ಪಾರಮ್ಯವನ್ನು ಮುರಿಯಬೇಕು ಮತ್ತು ತಮ್ಮದೇ ಕರೆನ್ಸಿಗಳಲ್ಲಿ ವಹಿವಾಟು ನಡೆಸಬೇಕು ಎಂಬ ಯೋಚನೆಯನ್ನು ಅತ್ಯಂತ ವ್ಯವಸ್ಥಿತವಾಗಿ ಜಾರಿಗೆ ತರಲು ಹಲವು ದೇಶಗಳು ಮುಂದಾಗಿವೆ. ಜತೆಗೆ, ಡಾಲರ್‌ಗೆ ಪರ್ಯಾಯವಾದ ಮತ್ತೊಂದು ಕರೆನ್ಸಿಯನ್ನೂ ಚಲಾವಣೆಗೆ ತರಬೇಕು ಎಂಬ ಮತ್ತೊಂದು ಪ್ರಸ್ತಾವವೂ ಇದೆ.

ಭಾರತ ಮತ್ತು ರಷ್ಯಾ ಮಧ್ಯೆ ನಡೆಯುತ್ತಿರುವ ಕಚ್ಚಾತೈಲದ ವ್ಯಾಪಾರವು ರೂಪಾಯಿ-ರೂಬಲ್‌ನಲ್ಲಿಯೇ ನಡೆಯುತ್ತಿದೆ. ಭಾರತವು ಕಚ್ಚಾತೈಲ ಖರೀದಿಗೆ ರೂಪಾಯಿಯಲ್ಲೇ ಪಾವತಿ ಮಾಡುತ್ತಿದೆ. ಈ ಸ್ವರೂಪದ ವಹಿವಾಟು ಆರಂಭವಾದಾಗ ಭಾರತಕ್ಕೆ ಕಚ್ಚಾತೈಲ ಪೂರೈಸುವ ದೇಶಗಳ ಸಾಲಿನಲ್ಲಿ ರಷ್ಯಾ ಐದನೇ ಸ್ಥಾನದಲ್ಲಿತ್ತು. ಈಗ ರಷ್ಯಾವು ಭಾರತಕ್ಕೆ ಅತಿಹೆಚ್ಚು ಕಚ್ಚಾತೈಲ ಪೂರೈಸುವ ದೇಶ ಎನಿಸಿದೆ. ಇದೇ ಮಾದರಿಯನ್ನು ಇರಿಸಿಕೊಂಡು ಬೇರೆ ದೇಶಗಳೂ ವ್ಯಾಪಾರ ನಡೆಸಬಹುದು ಎಂದು ಸಿದ್ಧತೆ ಮಾಡಿಕೊಂಡಿವೆ. ಕೆಲವು ದೇಶಗಳು ಜಾರಿಗೂ ತಂದಿವೆ. ಏಷ್ಯಾ, ಮಧ್ಯಪ್ರಾಚ್ಯ ಮತ್ತು ಲ್ಯಾಟಿನ್ ಅಮೆರಿಕದ ಒಟ್ಟು 19 ದೇಶಗಳು ಈಗ ತಮ್ಮದೇ ಕರೆನ್ಸಿಯಲ್ಲಿ ಕೆಲವು ಜಾಗತಿಕ ವಹಿವಾಟುಗಳನ್ನು ನಡೆಸುತ್ತಿವೆ.

ಡಾಲರ್ ಅನ್ನು ಹೊರಗಿಟ್ಟು, ತಮ್ಮದೇ ಕರೆನ್ಸಿಯಲ್ಲಿ ವಹಿವಾಟು ನಡೆಸಬೇಕು ಎಂದು ಗಟ್ಟಿಯಾಗಿ ಹೇಳುತ್ತಿರುವ ದೇಶಗಳ ಹೆಚ್ಚಿನವು ಅಮೆರಿಕ ವಿರೋಧಿ ದೇಶಗಳೇ ಆಗಿವೆ. ಅಂತಹ ದೇಶಗಳಲ್ಲಿ ಚೀನಾ ಮೊದಲ ಸ್ಥಾನದಲ್ಲಿದ್ದರೆ, ರಷ್ಯಾ ಎರಡನೇ ಸ್ಥಾನದಲ್ಲಿದೆ. ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಮತ್ತು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಇತ್ತೀಚೆಗೆ ಮಾತುಕತೆ ನಡೆಸಿದ್ದರು. ಮಾತುಕತೆಯ ನಂತರ ಪುಟಿನ್, 'ಚೀನಾದ ಯುವಾನ್ ಕರೆನ್ಸಿಯ ಮೂಲಕ ವ್ಯಾಪಾರ ನಡೆಸಲು ರಷ್ಯಾ ಸಿದ್ಧವಿದೆ. ಏಷ್ಯಾ, ಮಧ್ಯಪ್ರಾಚ್ಯ ಮತ್ತು ಲ್ಯಾಟಿನ್ ಅಮೆರಿಕದ ದೇಶಗಳು ಯುವಾನ್ ಮೂಲಕವೇ ಜಾಗತಿಕ ವ್ಯಾಪಾರ ನಡೆಸಬಹುದು' ಎಂದು ಘೋಷಿಸಿದ್ದರು. ಮಲೇಷ್ಯಾ ಸಹ ತಾನು ಅಮೆರಿಕದ ಡಾಲರ್ ಮೂಲಕ ಜಾಗತಿಕ ವ್ಯಾಪಾರ ನಡೆಸುವುದಿಲ್ಲ ಎಂದು ಘೋಷಿಸಿತ್ತು. ಏಷ್ಯಾಕ್ಕಾಗಿಯೇ ಪ್ರತ್ಯೇಕ 'ಏಷ್ಯಾ ಹಣಕಾಸು ನಿಧಿ'ಯನ್ನು ಸ್ಥಾಪಿಸಬೇಕು ಮತ್ತು ಹೊಸ ಕರೆನ್ಸಿಯನ್ನು ಸೃಷ್ಟಿಸಬೇಕು ಎಂದು ಮಲೇಷ್ಯಾ ಹೇಳಿದೆ. ಬ್ರಿಕ್ಸ್ ದೇಶಗಳ (ಬ್ರೆಜಿಲ್, ರಷ್ಯಾ, ಭಾರತ, ಚೀನಾ ಮತ್ತು ದಕ್ಷಿಣ ಆಫ್ರಿಕಾ) ಮುಂದಿನ ಶೃಂಗಸಭೆ ಆಗಸ್ಟ್‌ನಲ್ಲಿ ನಡೆಯಲಿದೆ. ಬ್ರಿಕ್ಸ್ ದೇಶಗಳ ನಡುವಣ ವ್ಯಾಪಾರ ವಹಿವಾಟಿಗೆ ಪ್ರತ್ಯೇಕ ಕರೆನ್ಸಿಯನ್ನು ಸ್ಥಾಪಿಸಬೇಕು ಎಂಬುದರ ಮೇಲೆ ಚರ್ಚೆ ನಡೆಸುವುದು ಆ ಶೃಂಗಸಭೆಯ ಪ್ರಮುಖ ಕಾರ್ಯಸೂಚಿಗಳಲ್ಲಿ ಒಂದು.

ಚೀನಾ ಪಾರಮ್ಯಕ್ಕೆ ಅವಕಾಶ

ಡಾಲರ್ ಅನ್ನು ಜಾಗತಿಕ ವ್ಯಾಪಾರ-ವಹಿವಾಟಿನಿಂದ ಹೊರಗಿಡುವುದು ಚೀನಾದ ಕರೆನ್ಸಿ ಯುವಾನ್‌ನ ಪಾರಮ್ಯಕ್ಕೆ ಕಾರಣವಾಗಬಹುದು. ಆ ಮೂಲಕ ಚೀನಾದ ಪಾರಮ್ಯಕ್ಕೂ ಕಾರಣವಾಗಬಹುದು ಎಂದು ವಿಶ್ಲೇಷಿಸಲಾಗಿದೆ. ತನ್ನ ಯುವಾನ್ ಮೂಲಕ ವ್ಯಾಪಾರ ನಡೆಸಬೇಕು ಎಂಬುದನ್ನು ಚೀನಾ ಅತ್ಯಂತ ವ್ಯವಸ್ಥಿತವಾಗಿ ಅನುಷ್ಠಾನಕ್ಕೆ ತರುತ್ತಿದೆ. ಚೀನಾವು ರಷ್ಯಾ ಮತ್ತು ಮಲೇಷ್ಯಾ ಜತೆಗೆ ಈಗಾಗಲೇ ಈ ಸಂಬಂಧ ಒಪ್ಪಂದಕ್ಕೆ ಬಂದಿದೆ. 10ಕ್ಕೂ ಹೆಚ್ಚು ದೇಶಗಳ ಜತೆಗೆ ಯುವಾನ್ ಮೂಲಕ ವ್ಯಾಪಾರ ನಡೆಸುತ್ತಿದೆ. ಸೌದಿ ಅರೇಬಿಯಾವನ್ನೂ ಶಾಂಘೈ ಸಹಕಾರ ಒಕ್ಕೂಟಕ್ಕೆ ಸೇರಿಸಿಕೊಂಡಿದೆ. ಜತೆಗೆ ಯುವಾನ್ ಮೌಲ್ಯದಲ್ಲಿ ಸ್ಥಿರತೆಯನ್ನು ಕಾಯ್ದುಕೊಳ್ಳುವ ಮತ್ತು ಯುವಾನ್ ಮೀಸಲು ಭದ್ರತೆಯನ್ನು ಹೆಚ್ಚಿಸಲು ಹೆಚ್ಚಿನ ಪ್ರಮಾಣದಲ್ಲಿ ಚಿನ್ನವನ್ನು ಖರೀದಿಸುತ್ತಿದೆ. ತನ್ನ ಪಾರಮ್ಯವನ್ನು ಸಾಧಿಸಲು ಈ ಅವಕಾಶವನ್ನು ಚೀನಾ ಬಳಸಿಕೊಳ್ಳುತ್ತಿರುವುದರ ಸೂಚನೆ ಇದು ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

ಡಾಲರ್‌ನ ಬದಲಿಗೆ ಯುವಾನ್ ಮೂಲಕ ವ್ಯಾಪಾರ ನಡೆಸುವ ಚೀನಾದ ಪ್ರಸ್ತಾವಕ್ಕೆ ರಷ್ಯಾ ಬೆಂಬಲ ಸೂಚಿಸಿದೆ. ಯುವಾನ್ ಮೂಲಕ ವಹಿವಾಟು ನಡೆಸಬೇಕು ಎಂದು ರಷ್ಯಾ ತನ್ನ ಮಿತ್ರ ರಾಷ್ಟ್ರಗಳಿಗೆ ಹೇಳಿದೆ. ಭಾರತದೊಂದಿಗೆ ರೂಪಾಯಿ-ರೂಬಲ್ ಮೂಲಕ ವಹಿವಾಟು ನಡೆಸುತ್ತಿದ್ದರೂ ಯುವಾನ್ ಮೂಲಕ ವಹಿವಾಟು ನಡೆಸೋಣ ಎಂದು ರಷ್ಯಾ ಈಚೆಗೆ ಭಾರತಕ್ಕೆ ಹೇಳಿದೆ. ಡಾಲರ್‌ಗೆ ಪರ್ಯಾಯ ಕರೆನ್ಸಿಯನ್ನು ಭಾರತವು ಬೆಂಬಲಿಸಿದರೆ, ಅದು ಚೀನಾದ ಈ ಯತ್ನಕ್ಕೆ ನೆರವಾಗಲಿದೆ. ಇದು ಭಾರತಕ್ಕೆ ಹಿನ್ನಡೆಯಾಗಬಹುದು ಎಂಬ ಆತಂಕವೂ ಇದೆ. ಹೀಗಾಗಿ ಬ್ರಿಕ್ಸ್ ಶೃಂಗಸಭೆಯಲ್ಲಿ ಭಾರತವು ಯಾವ ನಿಲುವನ್ನು ತೆಗೆದುಕೊಳ್ಳಲಿದೆ ಎಂಬುದು ಮಹತ್ವ ಪಡೆದಿದೆ.

ಪರಿಣಾಮಗಳೇನು...

- ಡಾಲರ್ ಅನ್ನು ಹೊರಗಿಟ್ಟು ತಮ್ಮದೇ ಕರೆನ್ಸಿ ಮೂಲಕ ವ್ಯಾಪಾರ ನಡೆಸುವುದರಿಂದ ಸರಕು ಮತ್ತು ಸೇವೆಗಳು ಕಡಿಮೆ ಬೆಲೆಗೆ ಲಭ್ಯವಾಗುವ ಸಾಧ್ಯತೆ ಅತ್ಯಧಿಕವಾಗಿರುತ್ತದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲ ಮತ್ತು ಚಿನ್ನದ ಬೆಲೆಯನ್ನು ಡಾಲರ್‌ನಲ್ಲಿ ನಿಗದಿ ಮಾಡಲಾಗುತ್ತದೆ. ಡಾಲರ್ ಅನ್ನು ಹೊರಗಿಟ್ಟರೆ, ಈ ಸರಕುಗಳನ್ನು ಪೂರೈಸುವ ದೇಶಗಳು ತಮ್ಮದೇ ಕರೆನ್ಸಿಯಲ್ಲಿ ಬೆಲೆ ನಿಗದಿ ಮಾಡಬಹುದು. ಅಂತಹ ಸರಕುಗಳ ಬೆಲೆ ಕಡಿಮೆಯಾಗಬಹುದು. ಉದಾಹರಣೆಗೆ ರಷ್ಯಾವು ಕಚ್ಚಾತೈಲವನ್ನು ಅಂತರರಾಷ್ಟ್ರೀಯ ಮಾರುಕಟ್ಟೆಯ ಬೆಲೆಗಿಂತ ಕಡಿಮೆ ಬೆಲೆಗೆ ಪೂರೈಕೆ ಮಾಡುತ್ತಿದೆ
- ಡಾಲರ್‌ಗೆ ಬೇಡಿಕೆ ಕುಸಿಯುವುದರಿಂದ, ಅದರ ಮೌಲ್ಯವೂ ಕಡಿಮೆಯಾಗುತ್ತದೆ. ಆಗ ಡಾಲರ್ ಮೂಲಕ ಖರೀದಿಸಲಾಗುವ ಸರಕು ಮತ್ತು ಸೇವೆಗಳ ಬೆಲೆ ಕಡಿಮೆಯಾಗಲಿದೆ. ಇದರಿಂದ ಆ ದೇಶಗಳಲ್ಲಿ ಹಣದುಬ್ಬರ ಸ್ಥಿತಿ ನಿಯಂತ್ರಣಕ್ಕೆ ಬರಬಹುದು. ದೇಶಗಳು ಡಾಲರ್ ಮೂಲಕ ಪಡೆದಿರುವ ಸಾಲದ ಮರುಪಾವತಿಯ ಮೊತ್ತ ಕಡಿಮೆಯಾಗಲಿದೆ. ಹಿಂದುಳಿದ ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಇದರಿಂದ ಅನುಕೂಲವಾಗಲಿದೆ ಎಂದು ವಿಶ್ಲೇಷಿಸಲಾಗಿದೆ
- ಡಾಲರ್ ಪಾರಮ್ಯವು, ಜಾಗತಿಕ ಮಟ್ಟದಲ್ಲಿ ಅಮೆರಿಕದ ಪಾರಮ್ಯಕ್ಕೂ ಕಾರಣವಾಗಿದೆ. ಡಾಲರ್‌ನ ಪಾರಮ್ಯವನ್ನು ಸರಿಗಟ್ಟುವ ಮೂಲಕ, ಅಮೆರಿಕದ ಪಾರಮ್ಯವನ್ನೂ ಕಡಿಮೆ ಮಾಡಬಹುದು. ಇದು ಜಾಗತಿಕ ಶಕ್ತಿ ರಾಜಕಾರಣದ ಚಿತ್ರಣವನ್ನು ಬದಲಿಸಲಿದೆ. ಅಮೆರಿಕ ಮಾತ್ರವಲ್ಲದೆ, ಬೇರೆ ದೇಶಗಳೂ ನಿರ್ಣಾಯಕ ಸ್ಥಾನ ಪಡೆಯುವ ಅವಕಾಶವಿರುತ್ತದೆ

ಸವಾಲುಗಳು...

ಜಾಗತಿಕ ವ್ಯಾಪಾರ-ವಹಿವಾಟಿನಿಂದ ಅಮೆರಿಕದ ಡಾಲರ್ ಅನ್ನು ಹೊರಗಿಡುವುದರಲ್ಲಿ ಎಷ್ಟು ಅನುಕೂಲಗಳಿವೆಯೋ, ಅಷ್ಟೇ ಸವಾಲುಗಳೂ ಇವೆ. ಹೀಗಾಗಿಯೇ ಡಾಲರ್ ಅನ್ನು ಸರಿಗಟ್ಟುವ ಈ ಹಿಂದಿನ ಯತ್ನಗಳೆಲ್ಲವೂ ನಿರೀಕ್ಷಿತ ಪರಿಣಾಮಗಳನ್ನು ಬೀರಿಲ್ಲ ಅಥವಾ ಅಂತಹ ಯತ್ನಗಳೆಲ್ಲವೂ ವಿಫಲವಾಗಿವೆ ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

- ಜಾಗತಿಕ ವ್ಯಾಪಾರ-ವಹಿವಾಟಿನಲ್ಲಿ ವಿನಿಮಯದ ಮೂಲವಾಗಿ ಅಮೆರಿಕದ ಡಾಲರ್ ಅನ್ನು ಹೆಚ್ಚು ಬಳಸಲಾಗುತ್ತಿದೆ. ಡಾಲರ್ ಈ ವಿಚಾರದಲ್ಲಿ ಹೆಚ್ಚು ವಿಶ್ವಾಸಾರ್ಹ ಮತ್ತು ಹೆಚ್ಚು ಸ್ಥಿರವಾದ ಕರೆನ್ಸಿಯಾಗಿದೆ. ಡಾಲರ್ ಗಳಿಸಿರುವ ಈ ವಿಶ್ವಾಸಾರ್ಹತೆ ಇರುವವರೆಗೂ ಅದರ ಸ್ಥಾನ ಭದ್ರವಾಗಿಯೇ ಇರಲಿದೆ. ಜಾಗತಿಕ ಮಟ್ಟದಲ್ಲಿ ಬೇರೆ ಕರೆನ್ಸಿಗಳಲ್ಲಿ ವಹಿವಾಟು ನಡೆಯುತ್ತಿದ್ದರೂ ಅವು ಡಾಲರ್‌ನ ಸ್ಥಾನಕ್ಕೆ ಏರಿಕೆಯಾಗಿಲ್ಲ. ಈಗ ವಿಶ್ವದ ಎಲ್ಲಾ ದೇಶಗಳ ಕೇಂದ್ರೀಯ ಬ್ಯಾಂಕ್‌ಗಳಲ್ಲಿ ಇರುವ ಮೀಸಲು ಮೊತ್ತದಲ್ಲಿ ಡಾಲರ್ ಪ್ರಮಾಣ ಶೇ 59ರಷ್ಟು ಇದೆ. ಯೂರೊ ಪ್ರಮಾಣ ಶೇ 18ರಷ್ಟು ಇದ್ದರೆ, ಚೀನಾದ ಯುವಾನ್ ಮೀಸಲು ಪ್ರಮಾಣ ಶೇ 3ರಷ್ಟು ಮಾತ್ರ
- ಡಾಲರ್ ಹೊರಗಿಟ್ಟು ವ್ಯಾಪಾರ ವಹಿವಾಟು ನಡೆಸುವ ದೇಶಗಳು ಅಮೆರಿಕದ ನಿಷ್ಠುರಕ್ಕೆ ಗುರಿಯಾಗುವ ಸಾಧ್ಯತೆ ಇರುತ್ತದೆ. ಅಮೆರಿಕ ಮತ್ತು ಅದರ ಮಿತ್ರ ರಾಷ್ಟ್ರಗಳು ಅಂತಹ ದೇಶಗಳ ಮೇಲೆ ಆರ್ಥಿಕ ನಿರ್ಬಂಧಗಳನ್ನು ಹೇರಬಹುದು. ಆರ್ಥಿಕ ನೆರವು, ಸೇನಾ ನೆರವನ್ನು ಸ್ಥಗಿತಗೊಳಿಸಬಹುದು. ಅಂತಹ ಸ್ಥಿತಿಯನ್ನು ಸರಿಯಾಗಿ ಎದುರಿಸುವ ಸಮರ್ಥ ವ್ಯವಸ್ಥೆಯನ್ನು ಆಯಾ ದೇಶಗಳು ರೂಪಿಸಿಕೊಳ್ಳಬೇಕಾಗುತ್ತದೆ
- ಡಾಲರ್ ಅನ್ನು ಹೊರಗಿಟ್ಟರೆ ಬೇರೆ ಯಾವ ಕರೆನ್ಸಿಯಲ್ಲಿ ವಹಿವಾಟು ನಡೆಸಬೇಕು ಎಂಬ ಸವಾಲು ಎದುರಾಗುತ್ತದೆ. ಎರಡು ದೇಶಗಳು ತಮ್ಮ ಕರೆನ್ಸಿಗಳ ಮೌಲ್ಯವನ್ನು ಹೇಗೆ ನಿರ್ಧರಿಸಬೇಕು ಎಂಬುದಕ್ಕೆ ಒಂದು ವ್ಯವಸ್ಥೆಯನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಒಂದು ದೇಶವು ತಾನು ವ್ಯಾಪಾರ ಸಂಬಂಧ ಇರಿಸಿಕೊಳ್ಳುವ ಎಲ್ಲಾ ದೇಶಗಳಿಗೂ ಇಂಥದ್ದೇ ಪ್ರತ್ಯೇಕ ಲೆಕ್ಕಾಚಾರ ವ್ಯವಸ್ಥೆಯನ್ನು ರೂಪಿಸಿಕೊಳ್ಳಬೇಕಾಗುತ್ತದೆ
- ತಮ್ಮ ಕರೆನ್ಸಿಯಲ್ಲಿ ವ್ಯಾಪಾರ ನಡೆಸದೇ ಇದ್ದರೆ, ಡಾಲರ್‌ನಂತೆ ಮತ್ತೊಂದು ಕರೆನ್ಸಿಯನ್ನು ಹೊಸದಾಗಿ ಚಲಾವಣೆಗೆ ತರಬೇಕಾಗುತ್ತದೆ ಅಥವಾ ಬೇರೆ ಯಾವುದೋ ಒಂದು ದೇಶದ ಕರೆನ್ಸಿಯನ್ನು ವಿನಿಮಯದ ಮೂಲವಾಗಿ ಬಳಸಬೇಕಾಗುತ್ತದೆ. ಅಮೆರಿಕವು ಡಾಲರ್‌ಗೆ ಸರಿಸಮನಾದ ಚಿನ್ನದ ಮೀಸಲು ಮತ್ತು ಡಾಲರ್ ಬಾಂಡ್‌ಗಳನ್ನು ಹೊಂದಿದೆ. ಹೀಗಾಗಿ ಡಾಲರ್ ಮೀಸಲಿನ ಬದಲಿಗೆ ಚಿನ್ನವನ್ನು ಅಥವಾ ಇತರೆ ಸ್ವತ್ತನ್ನು ಒದಗಿಸಲು ಶಕ್ತವಾಗಿದೆ. ಬೇರೊಂದು ದೇಶದ ಕರೆನ್ಸಿಯನ್ನು ಡಾಲರ್‌ನಂತೆ ವಿನಿಮಯದ ಮೂಲವಾಗಿ ಬಳಸುವುದಾದರೆ, ಆ ಕರೆನ್ಸಿಯ ಮೌಲ್ಯಕ್ಕೆ ಸಮನಾದ ಚಿನ್ನ ಅಥವಾ ಇತರೆ ಸ್ವತ್ತನ್ನು ಮೀಸಲಾಗಿ ಇಡಬೇಕಾಗುತ್ತದೆ. ಡಾಲರ್ ಹೊಂದಿರುವಷ್ಟು ಚಿನ್ನದ ಮೀಸಲು ಭದ್ರತೆಯನ್ನು ವಿಶ್ವದ ಬೇರೆ ಯಾವುದೇ ದೇಶದ ಕರೆನ್ಸಿಯೂ ಹೊಂದಿಲ್ಲ

ಆಧಾರ: ರಾಯಿಟರ್ಸ್, ಎಎಫ್‌ಪಿ ವರದಿಗಳು

ಸಿನಿ ಬಿಟ್ಸ್

ಆದಿಪುರುಷ್ ಚಿತ್ರದಲ್ಲಿ ನಟಿ ಕೃತಿ ಸನೋನ್, ಪ್ರಭಾಸ್, ಓಂ ಪ್ರಕಾಶ್, ಭೂಷಣ್ ಕುಮಾರ್

ರಾಮನಾಮ ಪಠಿಸುತ್ತಿರುವ 'ಆದಿಪುರುಷ'

ಬಾಹುಬಲಿ ಖ್ಯಾತಿಯ ಪ್ರಭಾಸ್ ಅಭಿನಯದ 'ಆದಿಪುರುಷ್' ಚಿತ್ರದ ಟ್ರೇಲರ್ ಬಿಡುಗಡೆಗೊಂಡಿದೆ. ಇದು ರಾಮಾಯಣದ ಸೀತಾಪಹರಣ ಭಾಗದ ಕಥೆ ಎಂಬುದು ಮೇಲ್ನೋಟಕ್ಕೆ ತಿಳಿಯುತ್ತಿದೆ. ರಾಮನಾಗಿ ಪ್ರಭಾಸ್, ಸೀತೆಯಾಗಿ ಕೃತಿ ಸನೋನ್, ರಾವಣನಾಗಿ ಸೈಫ್ ಅಲಿ ಖಾನ್ ಅಭಿನಯಿಸಿದ್ದಾರೆ. ಸಾಧಾರಣ ಗುಣಮಟ್ಟದ ಗ್ರಾಫಿಕ್ಸ್‌ನಿಂದಾಗಿ ಚಿತ್ರದ ಟೀಸರ್‌ಗೆ ವ್ಯಾಪಕ ಟೀಕೆ ವ್ಯಕ್ತವಾಗಿತ್ತು. ಆದರೆ ಟ್ರೇಲರ್‌ನಲ್ಲಿ ಆ ತಪ್ಪುಗಳನ್ನು ಸರಿಪಡಿಸಿ, ದೃಶ್ಯಗಳನ್ನು ಶ್ರೀಮಂತಗೊಳಿಸಲಾಗಿದೆ.

ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಓಂ ರಾವುತ್ ನಿರ್ದೇಶನದ ಚಿತ್ರವನ್ನು 'ಟಿ' ಸೀರೀಸ್‌ನ ಭೂಷಣ್‌ಕುಮಾರ್ ನಿರ್ಮಾಣ ಮಾಡಿದ್ದಾರೆ. ವಾಲ್ಮೀಕಿ ಬರೆದ ರಾಮಾಯಣದ ಅಂಶಗಳನ್ನು ಚಿತ್ರದಲ್ಲಿ ಬಳಸಲಾಗಿದೆ.

'ಇದು ನನ್ನ ಪ್ರಭು ರಾಮನ ಕಥೆ. ಮನುಷ್ಯನಾಗಿ ಹುಟ್ಟಿದವ ದೇವರಾದ ಚರಿತೆ. ಅವನ ಬದುಕೇ ಘನತೆಯ ಉತ್ಸವ. ಅದಕ್ಕೆ ಆತನ ಹೆಸರು ರಾಘವ' ಎನ್ನುವ ಸಂಭಾಷಣೆಯೊಂದಿಗೆ ಶುರುವಾಗುವ 3.15 ನಿಮಿಷದ ಟ್ರೇಲರ್ ದೃಶ್ಯ ವೈಭವದ ಅನುಭವ ನೀಡುತ್ತಿದೆ.

ಅಜಯ್-ಅತುಲ್ ಸಂಗೀತ, ಕಾರ್ತಿಕ್ ಪಳನಿ ಛಾಯಾಗ್ರಹಣ ಚಿತ್ರಕ್ಕಿದೆ. ಜೂನ್ 12ರಂದು ವಿಶ್ವದಾದ್ಯಂತ ಕನ್ನಡ ಸೇರಿದಂತೆ ಹಿಂದಿ, ತೆಲುಗು, ತಮಿಳು ಹಾಗೂ ಮಲೆಯಾಳಂ ಭಾಷೆಗಳಲ್ಲಿ 3D ಅವತರಣಿಕೆಯಲ್ಲಿ ತೆರೆಗೆ ಬರುತ್ತಿದೆ.

ರಾಧಿಕಾ ಹೊಸ ಚಿತ್ರ

ನಟಿ ರಾಧಿಕಾ ಕುಮಾರಸ್ವಾಮಿ ಹಾಗೂ ಬಾಲಿವುಡ್‌ನ ಶ್ರೇಯಸ್ ತಲಪಾಡೆ ಅಭಿಯನದ 'ಅಜಾಗ್ರತ' ಚಿತ್ರ ಶೀಘ್ರದಲ್ಲಿ ಸೆಟ್ಟೇರಲಿದೆ. ಕನ್ನಡ ಸೇರಿ ಏಳು ಭಾಷೆಗಳಲ್ಲಿ ನಿರ್ಮಾಣವಾಗುತ್ತಿರುವ ಚಿತ್ರಕ್ಕೆ ಈ ಹಿಂದೆ 'ಘಾರ್ಗ' ಎಂಬ ಚಿತ್ರ ನಿರ್ದೇಶಿಸಿದ್ದ ಎಂ.ಶಶಿಧರ್ ಆ್ಯಕ್ಷನ್-ಕಟ್ ಹೇಳುತ್ತಿದ್ದಾರೆ.

ರವಿರಾಜ್ ಚಿತ್ರದ ನಿರ್ಮಾಪಕರಾಗಿದ್ದು, ಇದೊಂದು ಸೈಕಾಲಜಿಕಲ್ ಕ್ರೈಂ ಥ್ರಿಲ್ಲರ್ ಕಥೆ ಹೊಂದಿರುವ ಚಿತ್ರವಾಗಿದೆ. ಏಳು ಭಾಷೆಗಳಲ್ಲಿಯೂ ಚಿತ್ರೀಕರಣವಾಗುತ್ತಿರುವುದು ಇದರ ವಿಶೇಷ ಎಂದು ಚಿತ್ರತಂಡ ಹೇಳಿಕೊಂಡಿದೆ.

ಕನ್ನಡದಲ್ಲಿ ಸ್ಪರ್ಶ ರೇಖಾ, ದೇವರಾಜ್, ಸುಚೇಂದ್ರ ಪ್ರಸಾದ್, ವಿನಯ್ ಪ್ರಸಾದ್, ಚಿತ್ರ ಶೆಣೈ, ಮುಂತಾದವರು ಅಭಿನಯಿಸುತ್ತಿದ್ದಾರೆ. ತೆಲುಗಿನಲ್ಲಿ ರಮೇಶ್, ಪುಷ್ಪ ಸುನಿಲ್, ರಾಘವೇಂದ್ರ ಶ್ರವಣ್ ನಟಿಸುತ್ತಿದ್ದಾರೆ. ಮೇ 13ರಿಂದ ಹೈದರಾಬಾದ್‌ನಲ್ಲಿ ಚಿತ್ರೀಕರಣ ಪ್ರಾರಂಭವಾಗಲಿದೆ ಎಂದು ತಂಡ ಹೇಳಿದೆ.

ರಾಧಿಕಾ ಕುಮಾರಸ್ವಾಮಿ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಹುಬ್ಬಳ್ಳಿಯಲ್ಲಿ ಇತ್ತೀಚೆಗೆ ನಡೆದ ಕಾಂಗ್ರೆಸ್ ಸಮಾವೇಶದಲ್ಲಿ ಪಕ್ಷದ ನಾಯಕರಾದ ಸೋನಿಯಾ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಭಾಗಿಯಾಗಿದ್ದರು. ವೇದಿಕೆಯ ಮೇಲೆ ಹಾಕಲಾಗಿದ್ದ ಕುರ್ಚಿಯಲ್ಲಿ ಕುಳಿತುಕೊಳ್ಳಲು ಖರ್ಗೆ ಅವರು ಸೋನಿಯಾ ಅವರ ಅನುಮತಿಗಾಗಿ ಕಾಯುತ್ತಿದ್ದರು ಎಂದು ಹೇಳಲಾಗುವ 18 ಸೆಕೆಂಡ್‌ನ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಹಲವರು ಈ ವಿಡಿಯೊ ಹಂಚಿಕೊಂಡಿದ್ದಾರೆ. ಬಿಜೆಪಿ ಜಾಲತಾಣ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ ಅವರು ಈ ವಿಡಿಯೊವನ್ನು ಟ್ವೀಟ್ ಮಾಡಿದ್ದಾರೆ. 'ಕರ್ನಾಟಕದಲ್ಲಿ ಕಾಂಗ್ರೆಸ್‌ಗೆ ಮತ ನೀಡಿದರೆ, 'ಸೋನಿಯಾ-ರಾಹುಲ್ ನೇರ ಆಳ್ವಿಕೆ ನಡೆಸುತ್ತಾರೆ. ಯೋಚಿಸಿ ಮತನೀಡಿ' ಎಂದು ಬರೆದಿದ್ದಾರೆ. ಆದರೆ, ಇದು ತಪ್ಪು ಮಾಹಿತಿ.

ವಿಡಿಯೊ ಜೊತೆಗೆ ಹೇಳಿರುವಂತೆ ಖರ್ಗೆ ಅವರು ಕುಳಿತುಕೊಳ್ಳಲು ಸೋನಿಯಾ ಅವರ ಅನುಮತಿಗೆ ಕಾದಿದ್ದರು ಎಂಬುದು ತಪ್ಪು ಮಾಹಿತಿ ಎಂದು 'ಆಲ್ಟ್ ನ್ಯೂಸ್' ವರದಿ ಮಾಡಿದೆ. ಪೂರ್ಣ ವಿಡಿಯೊವನ್ನು ಗಮನಿಸಿದರೆ ಸತ್ಯಾಂಶ ತಿಳಿಯುತ್ತದೆ. ಸೋನಿಯಾ ಅವರು ಭಾಷಣ ಮುಗಿಸಿ ತಮ್ಮ ಆಸನದತ್ತ ವಾಪಸಾದರು. ಆಗ, ಮುಂದಿನ ಭಾಷಣ ಮಾಡಬೇಕಿದ್ದ ಖರ್ಗೆ ಅವರು ಎದ್ದು ನಿಂತಿದ್ದರು. ನಿರೂಪಕರ ಮಾತು ಪೂರ್ಣಗೊಳ್ಳುವರೆಗೆ ಖರ್ಗೆ ಸೋನಿಯಾ ಅವರ ಪಕ್ಕದಲ್ಲಿ ನಿಂತಿದ್ದರು. ನಿರೂಪಕರ ಮಾತು ಪೂರ್ಣಗೊಂಡ ನಂತರ ಖರ್ಗೆ ಅವರು ಮೈಕ್‌ನತ್ತ ಧಾವಿಸಿದ ದೃಶ್ಯವು ಪೂರ್ಣ ವಿಡಿಯೊದಲ್ಲಿದೆ ಎಂದು 'ಆಲ್ಟ್ ನ್ಯೂಸ್' ವರದಿ ಮಾಡಿದೆ.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಮೇ 11, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ವೈಶಾಖ ಕೃಷ್ಣ ಷಷ್ಠಿ ಗಂ. 11-28 ನಕ್ಷತ್ರ: ಉತ್ತರಷಾಢ ಗಂ. 14-37, ಯೋಗ: ಶುಭ ಗಂ. 15-16 ಕರಣ: ವಣಿಜ ಗಂ. 11-28, ಮೇಷ ಮಾಸದ 27 ನೇ ದಿನ, ಮಳೆನಕ್ಷತ್ರ: ಭರಣಿ 4. ರಾಹುಕಾಲ : ಮಧ್ಯಾಹ್ನ 01-30 – 03-00 ಸೂರ್ಯೋದಯ : 06-09 ಸೂರ್ಯಾಸ್ತ : 06-44 ಮುಸ್ಲಿಂ ದಿನಾಂಕ : 20 ಶವ್ವಾಲ್
ಅದೃಷ್ಟ ಸಂಖ್ಯೆ : 1, 6

ಮೇಷ: ಕೈಯಲ್ಲಿರುವ ಹಣವನ್ನು ಪೂರ್ಣ ಪ್ರಮಾಣದಲ್ಲಿ ಖಾಲಿ ಮಾಡಿಕೊಳ್ಳುವುದು ಸರಿಯಲ್ಲ. ಮಾತೃ ವರ್ಗದವರ ಸಹಾಯದಿಂದ ಆರ್ಥಿಕತೆಯಲ್ಲಿನ ಭಯ ನಿವಾರಣೆಯಾಗುವುದು. ಶಿವನ ಆರಾಧನೆಯಿಂದ ನೆಮ್ಮದಿ.

ವೃಷಭ: ಕೈಗಾರಿಕಾ ಕ್ಷೇತ್ರದಲ್ಲಿ ಹೆಚ್ಚಿನ ಲಾಭ ಪಡೆಯುವಿರಿ. ಆಧ್ಯಾತ್ಮಿಕ ಚಿಂತನೆಗಳಿಂದ ಮಾನಸಿಕ ನೆಮ್ಮದಿ ಪ್ರಾಪ್ತಿಯಾಗಲಿದೆ. ಸಂಪರ್ಕ ಸಾಧನದಂತಹ ಉದ್ಯೋಗಿಗಳಿಗೆ ಸನ್ಮಾನ ಅಥವಾ ವಿಶೇಷ ಗೌರವ ಲಭಿಸುವುದು.

ಮಿಥುನ: ಉತ್ಪ್ರೇಕ್ಷೆ ಎನ್ನಿಸುವ ಕೆಲವು ಹೊಗಳಿಕೆಯ ಮಾತುಗಳಿಗೆ ಮರುಳಾಗದಿರಿ. ಸಂಪರ್ಕ ಸಂಬಂಧಿಸುವ ಸಾಧನಗಳ ನಿರ್ವಹಣೆಯ ಕೊರತೆಯಿಂದಾಗಿ ಅವುಗಳು ಕೈಕೊಡುವ ಸಾಧ್ಯತೆ ಇದೆ.

ಕರ್ಕಾಟಕ: ಸಹಜೀವನದಲ್ಲಿ ದೊರೆಯುವ ಸಹಕಾರ ಹಾಗೂ ಖುಷಿಯನ್ನು ಈಗ ಒಬ್ಬಂಟಿಯಾಗಿ ಜೀವಿಸುತ್ತಿರುವ ನೀವು ಬಹಳವಾಗಿ ನೆನೆಸಿಕೊಳ್ಳುವಿರಿ. ಅರಣ್ಯದಲ್ಲಿ ಸಂಚರಿಸುವವರಿಗೆ ವಿಷಜಂತುಗಳ ಕಾಟ ಇರಬಹುದು.

ಸಿಂಹ: ಮದುವೆಯ ವಿಚಾರದಲ್ಲಿ ನಿಶ್ಚಯವಾದ ಒಂದು ತೀರ್ಮಾನಕ್ಕೆ ಬರಲಾಗದೇ ಗೊಂದಲಕ್ಕೆ ಒಳಗಾಗುವಿರಿ. ತಾಂತ್ರಿಕ ವಿದ್ಯಾರ್ಥಿಗಳು ಉದ್ಯೋಗಕ್ಕಾಗಿ ಹೆಚ್ಚಿನ ಪರಿಶ್ರಮ ಮತ್ತು ದೇವರ ಕೃಪಾಕಟಾಕ್ಷ ಪಡಬೇಕಾಗುವುದು.

ಕನ್ಯಾ: ಖರ್ಚು ವೆಚ್ಚಕ್ಕೆ ಸಂಬಂಧಿಸಿದಂತೆ ಯೋಚಿಸಿ ಮುಂದಿನ ಹೆಜ್ಜೆ ಇಡುವುದು ಸೂಕ್ತ. ಕಠಿಣ ಪರಿಶ್ರಮದ ಮೂಲಕ ಮೇಲಧಿಕಾರಿಗಳ ಮನ ಗೆಲ್ಲಲು ಪ್ರಯತ್ನಿಸಿ. ವೃತ್ತಿ ಬದುಕಿನಲ್ಲಿ ಉನ್ನತ ಸ್ಥಾನಕ್ಕೇರಲು ಇದು ಸಕಾಲವಾಗಿದೆ.

ತುಲಾ: ಜಮೀನು ಖರೀದಿ ಅಥವಾ ನಿವೇಶನಗಳ ಖರೀದಿಯ ವ್ಯವಹಾರಗಳಿಂದ ಲಾಭ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ಎಲೆಕ್ಟ್ರಿಕಲ್ ಕಂಟ್ರಾಕ್ಟರ್‌ಗಳಿಗೆ ಈ ದಿನ ಉತ್ತಮ ಅವಕಾಶಗಳು ಸಿಗುವುದು.

ವೃಶ್ಚಿಕ: ಬಹುಕಾಲ ನೆನಪಿನಲ್ಲಿ ಉಳಿಯುವಂತಹ ಒಂದು ಮಧುರ ಘಟನೆ ಮನೆಯಲ್ಲಿ ನಡೆಯಲಿದೆ. ನಿಮ್ಮ ಸಮಸ್ಯೆಗಳನ್ನು ಸ್ನೇಹಿತರೊಂದಿಗೆ ಚರ್ಚಿಸಿದಲ್ಲಿ ಸರಾಗವಾಗಿ ಪರಿಹಾರವಾಗುವುದು. ವಸ್ತ್ರಾಭರಣ ಖರೀದಿ ಯೋಗವಿದೆ.

ಧನು: ದಿನನಿತ್ಯದ ಕೆಲಸಗಳಲ್ಲಿ ಅನಪೇಕ್ಷಿತ ತೊಡಕುಗಳು ಉಂಟಾಗುತ್ತದೆ. ಶಾಂತಿಯಿಂದ ವರ್ತಿಸಿದಲ್ಲಿ ಹಲವಾರು ಸಮಸ್ಯೆಗಳು ಪರಿಹಾರವಾಗುತ್ತದೆ. ಯಾವ ವಿಷಯದ ಬಗ್ಗೆಯೇ ಆದರೂ ಅತ್ಯಂತ ಆಳವಾದ ಯೋಚನೆ ಬೇಡ.

ಮಕರ: ವೃತ್ತಿಯಲ್ಲಿ ಅನುಭವ ಹೊಂದಿದವರಿಂದ ಬೈಗುಳ ಕೇಳಬೇಕಾಗುವುದು. ರಾಸಾಯನಿಕ ಔಷಧಿಗಳ ಬಳಕೆಗಿಂತ ತೈಲಗಳ ಲೇಪನದಂತಹ ಚಿಕಿತ್ಸೆ ಮಾಡಿಕೊಳ್ಳುವುದರಿಂದ ಕಾಲು ನೋವು ನಿವಾರಣೆಯಾಗುವುದು.

ಕುಂಭ: ಹೂಡಿಕೆಯಿಂದ ಅಧಿಕ ಲಾಭ ಬಂದಿರುವ ಸುದ್ದಿ ತಿಳಿದು ಅತೀವ ಸಂತೋಷಗೊಳ್ಳುವಿರಿ. ಪರಿಶ್ರಮಕ್ಕೆ ತಕ್ಕ ಆದಾಯವಿಲ್ಲದೆ ಸೊರಗಿರುವ ನಿಮಗೆ ಹಲವಾರು ಕನಸುಗಳು ಈಡೇರುವ ಅವಕಾಶ ಅಪರಿಚಿತ ವ್ಯಕ್ತಿ ತೋರುವರು.

ಮೀನ: ರಫ್ತು ವ್ಯಾಪಾರಗಳಲ್ಲಿ ಹೇರಳ ಲಾಭ ಮತ್ತು ತಲೆಬಿಸಿಯ ವಾತಾವರಣಗಳೆರಡೂ ಇರುವುದು. ಕೆಲಸ ಕಾರ್ಯಗಳಿಗೆ ಬೇಕಾದ ಸೂಕ್ತ ವ್ಯಕ್ತಿಯನ್ನು ಹುಡುಕುವಲ್ಲಿ ವಿಫಲರಾಗುವ ಮುನ್ಸೂಚನೆ ಸಿಗುವುದು.

ಬೆರಗಿನ ಬೆಳಕು

ಗುರುರಾಜ ಕರಜಗಿ

ನಾಲ್ಕು ಹಿತಗಳು

ಮಿತಿಯನರಿತಾಶೆ, ಸಮುಚಿತವ ಮರೆಯದ ಯತ್ನ |
ತೈತಿಕ್ಷೆ ಕಷ್ಟಾಂಶದಪರಿಹಾರ್ಯತೆಗೆ ||
ಮೃತಿಯೆ ಜೀವನಕಥೆಯ ಕೊನೆಯಲ್ಲವೆಂಬರಿವು ||
ಹಿತಗಳಿವು ನರಕುಲಕೆ – ಮಂಕುತಿಮ್ಮ || 881 ||

ಪದ-ಅರ್ಥ: ಮಿತಿಯನರಿತಾಶೆ = ಮಿತಿಯನು- + ಅರಿತ + ಆಶೆ, ಸಮುಚಿತವ = ಉಚಿತವಾದ, ಸರಿಯಾದ, ತೈತಿಕ್ಷೆ = ತಾಳ್ಮೆ, ಕಷ್ಟಾಂಶದಪರಿಹಾರ್ಯತೆಗೆ = ಕಷ್ಟಾಂಶದ + ಅಪರಿಹಾರ್ಯತೆಗೆ(ಪರಿಹಾರವಿಲ್ಲದ) ಮೃತಿಯೆ = ಸಾವೇ, ಕೊನೆಯಲ್ಲವೆಂಬರಿವು = ಕೊನೆಯಲ್ಲ + ಎಂಬ + ಅರಿವು.

ವಾಚ್ಯಾರ್ಥ: ಮಿತಿಗಳನ್ನು ತಿಳಿದ ಆಸೆ, ಔಚಿತ್ಯವನ್ನು ಮರೆಯದ ಪ್ರಯತ್ನ, ಪರಿಹಾರವಾಗದ ಕಷ್ಟಗಳನ್ನು ಎದುರಿಸುವ ತಾಳ್ಮೆ, ಸಾವೇ ಜೀವನದ ಕೊನೆಯಲ್ಲ ಎಂಬ ತಿಳಿವು ಇವೇ ನರಕುಲಕೆ ಹಿತವಾದವುಗಳು.

ವಿವರಣೆ: ಯಾವ ನಡೆಗಳಿಂದ ಮನುಷ್ಯ ಕುಲಕ್ಕೆ ಹಿತವಾದೀತು ಎಂಬುದನ್ನು ಈ ಕಗ್ಗ ಹೇಳುತ್ತದೆ. ಕಗ್ಗ ಮುಖ್ಯವಾಗಿ ನಾಲ್ಕು ಗುಣಗಳನ್ನು ತಿಳಿಸುತ್ತದೆ.

1. ಮಿತಿಯನ್ನು ಅರಿತ ಆಸೆ: ಆಸೆ ಕೆಟ್ಟದ್ದಲ್ಲ, ಯಾವ ಆಸೆಯೂ ಇಲ್ಲದಿದ್ದರೆ ಬದುಕಿನ ಗತಿಯೇ ಸಾಧ್ಯವಿಲ್ಲ, ಆದರೆ ಆಸೆ ಅತಿಯಾದರೆ ಪೆಟ್ಟು ತಪ್ಪಿದಲ್ಲ. ನಮ್ಮ ಶಕ್ತಿಯ ಮಿತಿಗಳನ್ನು ಮೀರಿ ಅತಿಯಾಸೆಯಿಂದ ಪ್ರಯತ್ನಿಸುವಾಗ ಮನಸ್ಸಿಗೆ ಸಂಕಟ, ಬದುಕಿನಲ್ಲಿ ಅಶಾಂತಿ ಮತ್ತು ವೈಫಲ್ಯದ ಪೆಟ್ಟು ನಮ್ಮನ್ನು ಹೈರಾಣಾಗಿಸುತ್ತದೆ. ಆದ್ದರಿಂದ ಆಸೆಗಳು ನಮ್ಮ ಮಿತಿಯಲ್ಲಿರುವುದು ಶಾಂತಿಯನ್ನು ತರುತ್ತದೆ.

2. ಸಮುಚಿತವ ಮರೆಯದ ಯತ್ನ: ಯತ್ನವಿಲ್ಲದೆ ಯಾವ ಸಾಧನೆಯೂ ಆಗದು. ಆ ಪ್ರಯತ್ನ ಸತತವಾಗುವುದರೊಂದಿಗೆ ಔಚಿತ್ಯಪೂರ್ಣವೂ ಆಗಿರಬೇಕು. ಸರಿಯಾದ ದಾರಿಯಲ್ಲಿ ನಡೆಯದ ಪ್ರಯತ್ನ ಅನಾಹುತಕ್ಕೆ ದಾರಿ. ಪ್ರಪಂಚಕ್ಕೆ ಅಪರಿಮಿತ ವಿದ್ಯುತ್ ಶಕ್ತಿಯನ್ನು ನೀಡಲು ಪರಮಾಣು ವಿಭಜನೆಯನ್ನು ಕಂಡು ಹಿಡಿದ ವಿಜ್ಞಾನಿಗಳ ಶ್ರಮ ಔಚಿತ್ಯಪೂರ್ಣವಾದ ಯತ್ನ. ಆದರೆ ಅದನ್ನೊಂದು ಪರಮಾಣು ಅಸ್ತ್ರವನ್ನಾಗಿ ಬಳಸಿ ಲಕ್ಷಾಂತರ ಜನರ ಸಾವಿಗೆ ಕಾರಣವಾದ ಕಾರ್ಯ ಅನುಚಿತವಾದ ಯತ್ನ. ಕಗ್ಗ ಪ್ರತಿಯೊಂದು ಯತ್ನದ ಹಿಂದಿನ ಉಚಿತತೆಯನ್ನು ಅರಿಯಲು ಹೇಳುತ್ತದೆ.

3. ಪರಿಹಾರವಿಲ್ಲದ ಕಷ್ಟವನ್ನು ಎದುರಿಸುವ ತಾಳ್ಮೆ: ಬದುಕಿನಲ್ಲಿ ಅದಾವ ಕಾರಣಕ್ಕೋ ಪೆಟ್ಟುಗಳು ಬೀಳುತ್ತವೆ, ಅಪಾರ ನೋವನ್ನು ತರುತ್ತವೆ. ಕೆಲವು ನೋವುಗಳಿಗೆ ಪರಿಹಾರವಿದೆ. ಆದರೆ ಕೆಲವು ಕಷ್ಟಗಳಿಗೆ ಪರಿಹಾರವೇ ಇಲ್ಲ. ಅವುಗಳನ್ನು ಅನುಭವಿಸದೆ ಗತಿಯಿಲ್ಲ. ಆಗ ನಮಗೆ ಇರುವುದು ಒಂದೇ ದಾರಿ ಸಹನೆ, ತಾಳ್ಮೆ. ಇಂಗ್ಲೀಷಿನಲ್ಲಿ ಒಂದು ಮಾತಿದೆ. "What cannot be cured should be endured"" ಯಾವುದು ಅಪರಿಹಾರ್ಯವೋ ಅದನ್ನು ಸಹಿಸಿಕೊಳ್ಳಬೇಕು. ಸಹನೆ ವಜ್ರದ ಕವಚ.

4. ಸಾವು ಬದುಕಿನ ಕೊನೆಯಲ್ಲವೆಂಬ ಅರಿವು: ಹಿಂದೂ ಧರ್ಮ ಪುನರ್ಜನ್ಮವನ್ನು ನಂಬುತ್ತದೆ. "ಜಾತಸ್ಯ ಹಿ ಧ್ರುವೋ ಮೃತ್ಯು, ಧ್ರುವಂ ಜನ್ಮ ಮೃತಸ್ಯ ಚ" ಎನ್ನುತ್ತದೆ ಗೀತೆ. ಹುಟ್ಟಿದವನಿಗೆ ಸಾವು ತಪ್ಪಿದ್ದಲ್ಲ ಅಂತೆಯೇ ಸಾವಿನ ನಂತರ ಹುಟ್ಟು ಖಚಿತ. ಒಂದು ಸಾವು ಮತ್ತೊಂದು ಹುಟ್ಟಿನ ತಲೆಬಾಗಿಲು. ನಮ್ಮ ಇಂದಿನ ಸತ್ವಯುತ ಬದುಕು ಮುಂದಿನ ಶ್ರೇಷ್ಠ ಬದುಕಿಗೆ ಕಾರಣ ಎನ್ನುವುದು ನಮ್ಮನ್ನು ಕ್ರಿಯಾಶೀಲರನ್ನಾಗಿ ಮೌಲ್ಯವಂತರನ್ನಾಗಿ ಮಾಡುತ್ತದೆ.

ಈ ನಾಲ್ಕು ತಿಳುವಳಿಕೆಗಳು ಮನುಕುಲಕ್ಕೆ ಹಿತವನ್ನುಂಟು ಮಾಡುತ್ತವೆ.

ಪದಬಂಧ 5315 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಹೂವಿನ ಹುಡಿಯಿಲ್ಲಿ ಉಲ್ಟಾ ಕಾಣುತ್ತಿದೆ (3)
4. ಈತ ವಿದ್ವಾಂಸ (3)
6. ನಿಗದಿತ ಬೆಲೆಗಿಂತ ಹೆಚ್ಚು ಹಣ ಬಯಸುವವನು (5)
7. ಸರಸದಲ್ಲಿರುವಾಗ ಕಾಣಿಸಿದ ದ್ರವ (2)
9. ಕಡಲ ಬಳಿ ಪಡೆದ ಸಾಲ (2)
10. ಸರಕ್ಕನೆ ಹೋಗಿ ಧರಿಸಿದ ಮಾಲೆ (2)
11. ಕ್ರೀಡೆಯು ಉಲ್ಟಾ ಆಗಿದೆ (2)
16. ಒಳ್ಳೆತನದ ಸೋಗಿನಲ್ಲಿ ವಂಚನೆ ಮಾಡುವವ (5)
17. ಸೊಂಟದಿಂದ ಪ್ರಾರಂಭವಾದ ಕಂಪನ (3)
18. ರೀತಿಯೊಡನೆ ಬರುವ ಜೋಡು ನುಡಿ (3)

ಮೇಲಿಂದ ಕೆಳಕ್ಕೆ

1. ಅನ್ಯ ಮಾರ್ಗವು ಗರದೊಳಗಿದೆ (4)
2. ರೋದನಕ್ಕೊಂದು ಪರ್ಯಾಯ ಪದ (3)
3. ಮೂಗಿನಿಂದ ಬರುವ ಶ್ಲೇಷ್ಮವಸ್ತು (3)
4. ಕೆಸರಿನಲ್ಲಿ ಹುಟ್ಟಿದುದುದು (3)
5. ತಬ್ಬಿಬ್ಬನ್ನು ಹೀಗೂ ಹೇಳುವರು (4)
8. ವಾರದ ಕೊನೆಗೆ ಕಾಣಿಸಿದ ಆರೋಹಿ (3)
9. ಕೈಯಲ್ಲಿ ಹಿಡಿದ ಚಿಪ್ಪು (3)
10. ನೆಮ್ಮದಿ ಈ ರೀತಿ ಬಂದಿದೆ (4)
12. ಅಕ್ಕಪಕ್ಕ ಎಂದು ಹೀಗೆನ್ನಿ (4)
13. ಮಂದಿಯ ಹತ್ತಿರವಿರುವ ತಂದೆ (3)
14. ವಂಗ ದೇಶದಿಂದ ತಂದ ಸಾಂಬಾರ ದ್ರವ್ಯ (3)
15. ಕೊನೆಗಿರುವ ಕರಿಯ ಬಳಿಯಿರಿಸಿದ ಬುಟ್ಟಿ (3)



5314ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 3.ಕಿತಾಪತಿ 5.ಜಾಯಮಾನ 6.ಕುಡುಗೋಲು 8.ಮಡಿವಾಳ 12.ವನಸುಮ 14.ನಿರಾಯುಧ 15.ಅಂತರ್ಧಾನ 16.ಮನ್ವಂತರ

ಮೇಲಿಂದ ಕೆಳಕ್ಕೆ: 1.ಅಜಾತಶತ್ರು 2.ಸಮಾಗಮ 3.ಕಿರುಕುಳ 4.ತಿಕ್ಕಲು 7.ಗೋಣಿ 9.ವಾದನ 10.ಕಯನಾನಜ 11.ಣಿರಾ 12.ವಧಕಾರ 13.ಮನೆತನ 14.ನಿಗಮ

ಸುಡೊಕು 5701

6				9		1		8
	1			3			6	
		7	4			3		9
2	9				4	6		
1	4			5				2
			1				9	4
3		9			5		7	
	8			1		9		3
4		1	3		9		8	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5700 ಸುಡೊಕು

3	4	8	2	7	9	6	5	1
9	6	1	5	8	3	2	7	4
5	7	2	1	6	4	3	9	8
6	9	4	7	3	5	1	8	2
2	8	5	6	9	1	7	4	3
1	3	7	4	2	8	9	6	5
8	5	9	3	1	6	4	2	7
7	1	6	8	4	2	5	3	9
4	2	3	9	5	7	8	1	6

ಸಲಿಂಗ ಮದುವೆಗೆ ಮಾನ್ಯತೆ: ವಿಚಾರಣೆ ಮುಂದುವರಿಸಿದ ಸುಪ್ರೀಂ ಕೋರ್ಟ್‌ನ ಸಾಂವಿಧಾನಿಕ ಪೀಠ

‘ಮಾತೃತ್ವದ ಪರಿಕಲ್ಪನೆ ದಾಟಿದ ದೇಶ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ವೈವಾಹಿಕ ಸ್ಥಾನಮಾನ ಏನೇ ಇದ್ದರೂ, ವ್ಯಕ್ತಿಯೊಬ್ಬ ಮಗುವನ್ನು ದತ್ತು ತೆಗೆದುಕೊಳ್ಳುವುದಕ್ಕೆ ಭಾರತೀಯ ಕಾನೂನು ಅವಕಾಶ ನೀಡುತ್ತದೆ. ದೇಶವು ಈಗ ಮಾತೃತ್ವದ ಪರಿಕಲ್ಪನೆಯನ್ನು ದಾಟಿ ಬಹಳ ಮುಂದಕ್ಕೆ ಸಾಗಿದೆ. ಪಾಲಕತ್ವದ ಪರಿಕಲ್ಪನೆಯೆಡೆಗೂ ಹೆಜ್ಜೆ ಇಟ್ಟಿದೆ. ತಂದೆ ಅಥವಾ ತಾಯಿಯೇ ಮಗುವನ್ನು ಸಲಹುತ್ತಿರುವ ಅನೇಕ ಉದಾಹರಣೆಗಳೂ ನಮ್ಮ ಎದುರಿವೆ’ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

ಸಲಿಂಗ ಮದುವೆಗೆ ಮಾನ್ಯತೆ ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಐವರು ಸದಸ್ಯರನ್ನೊಳಗೊಂಡ ಸಾಂವಿಧಾನಿಕ ಪೀಠ ಬುಧವಾರವೂ ಮುಂದುವರಿಸಿತು. ಆಗ ಪೀಠವು ಈ ಅಭಿಪ್ರಾಯ ವ್ಯಕ್ತಪಡಿಸಿತು.

ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ (ಎನ್‌ಸಿಪಿಸಿಆರ್) ಪರ ವಾದ ಮಂಡಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯ ಭಾಟಿ, ‘ಭಿನ್ನಲಿಂಗಿ ದಂಪತಿಗೆ ಜನಿಸಿದ ಮಕ್ಕಳ ಹಿತರಕ್ಷಣೆ ಹಾಗೂ ಕಲ್ಯಾಣವೇ ನಮ್ಮ ಎಲ್ಲ ಕಾನೂನುಗಳ ಮುಖ್ಯ ಉದ್ದೇಶ’ ಎಂದು ಹೇಳಿದರು.

‘ಭಿನ್ನಲಿಂಗಿಗಳು ಹಾಗೂ ಸಲಿಂಗಿಗಳನ್ನು ಬೇರೆ ಬೇರೆಯಾಗಿ ಪರಿಗಣಿಸುವ ಸರ್ಕಾರದ ಕ್ರಮವನ್ನು ಕೂಡ ಸಮರ್ಥಿಸಲಾಗಿದೆ. ಲಿಂಗತ್ವವು ನಿರ್ದಿಷ್ಟವಾಗಿಲ್ಲದಿರಬಹುದು. ಆದರೆ ತಾಯಿ ಮತ್ತು ತಾಯ್ತನದ ಕುರಿತು ಹಾಗೆ ಹೇಳಲು ಆಗುವುದಿಲ್ಲ’ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಒಂದು ಕುಟುಂಬದಲ್ಲಿ ಜೈವಿಕವಾಗಿ ಜನಿಸಿದ ಮಕ್ಕಳು ಇಲ್ಲದೇ

ಇದ್ದರೂ, ಮಕ್ಕಳನ್ನು ಹೊಂದಿರುವ ಸನ್ನಿವೇಶಗಳಿವೆ. ಮಗುವನ್ನು ದತ್ತು ತೆಗೆದುಕೊಂಡಿರುವ ಕುಟುಂಬಕ್ಕೂ ಕಾನೂನಿನಡಿ ಮಾನ್ಯತೆ ಇರುತ್ತದೆ’ ಎಂದು ತಿಳಿಸಿತು.

‘ಯಾವುದೇ ಸನ್ನಿವೇಶವಾದರೂ ಮಗುವಿನ ಕಲ್ಯಾಣವೇ ಪ್ರಮುಖವಾಗಿರುತ್ತದೆ. ಆದರೆ, ಮಗುವನ್ನು ದತ್ತು ತೆಗೆದುಕೊಳ್ಳುವುದು ಮೂಲಭೂತ ಹಕ್ಕು ಅಲ್ಲ ಎಂಬುದಾಗಿ ಸುಪ್ರೀಂ ಕೋರ್ಟ್ ತನ್ನ ಹಲವಾರು ತೀರ್ಪುಗಳಲ್ಲಿ ಸ್ಪಷ್ಟಪಡಿಸಿದೆ’ ಎಂದು ಐಶ್ವರ್ಯ ಭಾಟಿ ಹೇಳಿದರು.

‘ಮಕ್ಕಳ ರಕ್ಷಣೆ ಹಾಗೂ ಕಲ್ಯಾಣವೇ ಪ್ರಧಾನ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ, ವಿವಿಧ ಕಾರಣಗಳಿಗಾಗಿ ಮಗುವನ್ನು ದತ್ತು ತೆಗೆದುಕೊಳ್ಳುವುದಕ್ಕೆ ನಮ್ಮ ಕಾನೂನುಗಳು ಮಾನ್ಯತೆ ನೀಡುವುದಿಲ್ಲ’ ಎಂದು ಚಂದ್ರಚೂಡ್ ಹೇಳಿದರು. ‘ಜೈವಿಕವಾಗಿ ಮಗುವಿಗೆ ಜನ್ಮ ನೀಡಲೇಬೇಕು ಎಂಬ ಕಠ್ಞಾಣ ನಿಯಮ ಎಲ್ಲೂ ಇಲ್ಲ’ ಎಂದೂ ಹೇಳಿದರು.

‘ಭಿನ್ನಲಿಂಗಿ ದಂಪತಿಯಲ್ಲಿ ಒಬ್ಬರು ಮೃತಪಟ್ಟಾಗ ಏನಾಗುತ್ತದೆ’ ಎಂದು ಪ್ರಶ್ನಿಸಿದ ನ್ಯಾಯಪೀಠ, ‘ಜೈವಿಕವಾಗಿ ಜನಿಸಿದ ಮಕ್ಕಳು ಇಲ್ಲದಂತಹ ‘ಮಾದರಿ ಕುಟುಂಬ’ವನ್ನು ಸಹ ಕಾನೂನು ಮಾನ್ಯ ಮಾಡುತ್ತದೆ’ ಎಂದು ಹೇಳಿತು.

‘ಸಹ ಜೀವನ ನಡೆಸುತ್ತಿರುವ ಜೋಡಿಯ ಪೈಕಿ ಯಾರಾದರೂ ಒಬ್ಬರು ಮಗುವನ್ನು ದತ್ತು ಪಡೆಯಬಹುದೇ. ಅಥವಾ ಸಹಜೀವನ ನಡೆಸುತ್ತಿದ್ದಾರೆ ಎಂಬ ಕಾರಣಕ್ಕೆ ಅವರಿಗೆ ಈ ಹಕ್ಕನ್ನು ನಿರಾಕರಿಸಬಹುದೇ’ ಎಂದು ನ್ಯಾಯಪೀಠ ಕೇಳಿತು.

ಇದಕ್ಕೆ ಪ್ರತಿಕ್ರಿಯಿಸಿದ ಭಾಟಿ, ‘ಮಗುವನ್ನು ದತ್ತು ಪಡೆಯಲು ಬಯಸುವ ಭಿನ್ನ ಲಿಂಗೀಯ ದಂಪತಿಯು ತಾವು ಎರಡು ವರ್ಷ ಸ್ಥಿರ ದಾಂಪತ್ಯ ಬದುಕು ನಡೆಸಿರುವುದನ್ನು ಸಾಬೀತುಪಡಿಸಬೇಕು. ಸಹ ಜೀವನಕ್ಕೆ ಮಾನ್ಯತೆ ಇಲ್ಲ. ಏಕೆಂದರೆ ಅವರು ಯಾವಾಗ ಬೇಕಾದರೂ ಬೇರ್ಪಡಬಹುದು’ ಎಂದು ತಿಳಿಸಿದರು.

ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್, ಎಸ್.ರವೀಂದ್ರ ಭಟ್, ಹಿಮಾ ಕೊಹ್ಲಿ ಹಾಗೂ ಪಿ.ಎಸ್. ನರಸಿಂಹ ಅವರೂ ಈ ನ್ಯಾಯಪೀಠದಲ್ಲಿದ್ದು, ಈ ಕುರಿತ ವಿಚಾರಣೆಯನ್ನು ಮುಂದುವರಿಸುವುದಾಗಿ ಹೇಳಿತು.

ಸಾಂಸ್ಕೃತಿಕ ತಳಹದಿ ಕಂಪಿಸಲಿದೆ: ಸಂವರ್ಧಿನಿ ನ್ಯಾಸ್

ನವದೆಹಲಿ (ಪಿಟಿಐ): ‘ಸಲಿಂಗ ವಿವಾಹಕ್ಕೆ ಕಾನೂನಿನ ಮಾನ್ಯತೆ ನೀಡಿದರೆ ದೇಶದ ಸಾಂಸ್ಕೃತಿಕ ತಳಹದಿಯೇ ಕಂಪಿಸಲಿದೆ. ಹಿಂದೂ ವಿವಾಹ ಕಾಯ್ದೆಯ ಮೂಲ ಆಶಯಗಳಿಗೆ ಧಕ್ಕೆ ಎದುರಾಗಲಿದೆ. ಹಿಂದೂ ಧರ್ಮದ ಸ್ವರೂಪಕ್ಕೂ ಕುಂದುಂಟಾಗಲಿದೆ’ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಅಂಗ ಸಂಸ್ಥೆ ಸಂವರ್ಧಿನಿ ನ್ಯಾಸ್ ಹೇಳಿದೆ. ಈ ಸಂಬಂಧ ಸುಪ್ರೀಂ ಕೋರ್ಟ್‌ನ ರಿಜಿಸ್ಟ್ರಾರ್‌ಗೆ ಬುಧವಾರ ಪತ್ರ ಬರೆದಿದೆ.

‘ಸಲಿಂಗ ಮದುವೆಯನ್ನು ಕಾನೂನು ಬದ್ಧಗೊಳಿಸುವುದರಿಂದ ಆ ಜೋಡಿಯ ಆರೈಕೆಯಲ್ಲಿ ಬೆಳೆದ ಮಗುವಿನ ವ್ಯಕ್ತಿತ್ವ ಹಾಗೂ ಬೆಳವಣಿಗೆ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗಲಿದೆ. ಇದು ಯುವ ಸಮುದಾಯದ ಮೇಲೂ ದುಷ್ಪರಿಣಾಮ ಬೀರಲಿದೆ’ ಎಂದು ಹೇಳಿದೆ.

‘ಮದುವೆ ಎಂಬುದು ಮಹಿಳೆ ಹಾಗೂ ಪುರುಷನ ನಡುವಣ ಬಂಧ. ಅದು ಸಲಿಂಗಿಗಳ ಸಂಬಂಧವಲ್ಲ. ಸಲಿಂಗ ವಿವಾಹವನ್ನು ಮಾನ್ಯಗೊಳಿಸುವುದು ನಮ್ಮ ಸಾಂಸ್ಕೃತಿಕ ಹಾಗೂ ಧಾರ್ಮಿಕ ನಂಬಿಕೆಗೆ ವಿರುದ್ಧವಾದುದು’ ಎಂದು ಸಂವರ್ಧಿನಿ ನ್ಯಾಸ್ ಸಂಸ್ಥೆಯ ಕಾನೂನು ಸಲಹೆಗಾರ್ತಿ ಶ್ವೇತಾ ಶರ್ಮಾ, ಪತ್ರದಲ್ಲಿ ತಿಳಿಸಿದ್ದಾರೆ.

ಸಿಜೆಐ ಹಿಂದೆ ಸರಿಯಲು ಕೋರಿ ಸಲ್ಲಿಸಿದ ಅರ್ಜಿ ವಜಾ

ಸಲಿಂಗ ಮದುವೆಗೆ ಮಾನ್ಯತೆ ಕೋರಿ ಸಲ್ಲಿಸಲಾಗಿರುವ ಅರ್ಜಿಗಳ ವಿಚಾರಣೆಯಿಂದ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಿಂದೆ ಸರಿಯಬೇಕು ಎಂದು ಕೋರಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಬುಧವಾರ ವಜಾಗೊಳಿಸಿದೆ.

ವರ್ಚುವಲ್ ವಿಧಾನದ ಮೂಲಕ ಹಾಜರಾದ ಅರ್ಜಿದಾರ ಆನ್ಸನ್ ಥಾಮಸ್, ‘ಈ ವಿಷಯ ಕುರಿತು ಮಾರ್ಚ್ 13 ಹಾಗೂ ಏಪ್ರಿಲ್ 17ರಂದು ಚಂದ್ರಚೂಡ್ ಅವರಿಗೆ ಪತ್ರ ಕಳುಹಿಸಿದ್ದೆ’ ಎಂದು ಹೇಳಿದರು.

‘ಈ ಅರ್ಜಿ ವಿಚಾರಣೆಯಿಂದ ಚಂದ್ರಚೂಡ್ ಅವರು ಹಿಂದೆ ಸರಿಯಬೇಕು’ ಎಂದರು.

ಆಗ, ‘ಧನ್ಯವಾದ ಥಾಮಸ್, ನಿಮ್ಮ ಅರ್ಜಿಯನ್ನು ತಿರಸ್ಕರಿಸಲಾಗಿದೆ’ ಎಂದು ಚಂದ್ರಚೂಡ್ ಹೇಳಿದರು.

ಸುದ್ದಿ 2 ನಿಮಿಷ

ಗಂಡನ ಪರಸಂಗ ತೋರಿಸಿಕೊಟ್ಟ ರಸ್ತೆ ಸುರಕ್ಷತಾ ಕ್ಯಾಮೆರಾ!

ತಿರುವನಂತಪುರ (ಪಿಟಿಐ): ಕೇರಳದಲ್ಲಿ ಅಳವಡಿಸಲಾಗಿರುವ ರಸ್ತೆ ಸುರಕ್ಷತಾ ಕ್ಯಾಮೆರಾಗಳು ರಾಜ್ಯ ಸರ್ಕಾರಕ್ಕೆ ಮಾತ್ರ ತಲೆನೋವಾಗಿರದೆ, ದಂಪತಿಯ ನಡುವೆ ಜಗಳಕ್ಕೂ ಕಾರಣವಾಗಿದೆ.

ಇಡುಕ್ಕಿಯ 32 ವರ್ಷದ ನಿವಾಸಿಯೊಬ್ಬರು ಏ.25ರಂದು ಹೆಲ್ಮೆಟ್ ಧರಿಸದೆ ತನ್ನ ಸ್ನೇಹಿತೆಯನ್ನು ಸ್ಕೂಟರ್‌ನಲ್ಲಿ ಕರೆದೊಯ್ದಿದ್ದು, ಅದರ ಚಿತ್ರ ಪತ್ನಿ ಕೈ ಸೇರಿದ್ದರಿಂದ ಅವರೀಗ ಜೈಲಿನ ಕಂಬಿ ಎಣಿಸುವಂತಾಗಿದೆ.

ಹೆಲ್ಮೆಟ್ ಧರಿಸದೆ ವಾಹನ ಚಲಾಯಿಸಿದ ಕಾರಣ ವ್ಯಕ್ತಿಯ ಫೋಟೊವನ್ನು ಕ್ಯಾಮೆರಾ ಸೆರೆಹಿಡಿದಿದ್ದು, ಅದನ್ನು ಸಾರಿಗೆ ಇಲಾಖೆ ದ್ವಿಚಕ್ರ ವಾಹನದ ಮಾಲೀಕರಾದ ಮಹಿಳೆಗೆ ಕಳುಹಿಸಿತ್ತು. ಇದನ್ನು ಗಮನಿಸಿದ ಪತ್ನಿ, ಆ ಮಹಿಳೆ ಯಾರೆಂದು ಪತಿಯನ್ನು ವಿಚಾರಿಸಿದ್ದರು. ‘ಆಕೆ ನನ್ನ ಸ್ನೇಹಿತೆ, ಆಕೆಗೆ ಕೇವಲ ಡ್ರಾಪ್ ನೀಡಿರುವೆ’ ಎಂದು ಪತಿ ಹೇಳಿದ್ದರು. ಆದರೆ ಇದನ್ನು ನಂಬದ ಪತ್ನಿ, ಪತಿ ಜೊತೆ ಜಗಳವಾಡಿದ್ದರು. ಮೇ 5ರಂದು ಕರಿಮನ ಪೊಲೀಸ್ ಠಾಣೆಗೆ ತೆರಳಿ, ಪತಿಯು ತನ್ನ ಹಾಗೂ ತನ್ನ ಮೂರು ವರ್ಷದ ಮಗುವಿನ ಮೇಲೆ ದೌರ್ಜನ್ಯವೆಸಗಿದ್ದಾರೆ ಎಂದು ದೂರು ದಾಖಲಿಸಿದ್ದಾರೆ.

ದೂರು ಆಧರಿಸಿದ ಪೊಲೀಸರು, ಮಹಿಳೆಯ ಪತಿಯನ್ನು ಬಂಧಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಈಗ ನ್ಯಾಯಾಂಗ ಬಂಧನದಲ್ಲಿ ಇರಿಸಿದ್ದಾರೆ.

ಈ ಕ್ಯಾಮೆರಾಗಳು ಇಂತಹ ವಿವಾದಕ್ಕೆ ಕಾರಣವಾಗಿದ್ದಲ್ಲದೆ ರಾಜಕೀಯ ಗದ್ದಲಕ್ಕೂ ಕಾರಣವಾಗಿವೆ. ರಸ್ತೆ ಸುರಕ್ಷತಾ ಕ್ಯಾಮೆರಾಗಳ ಅಳವಡಿಕೆಗೆ ಸಂಬಂಧಿಸಿದ ಒಪ್ಪಂದಗಳ ಕುರಿತು ಎಲ್‌ಡಿಎಫ್ ಸರ್ಕಾರದ ವಿರುದ್ಧ ಪ್ರತಿಪಕ್ಷ ಕಾಂಗ್ರೆಸ್ ಗಂಭೀರ ಭ್ರಷ್ಟಾಚಾರ ಆರೋಪವನ್ನೂ ಮಾಡಿದೆ.

ಮಹಾರಾಷ್ಟ್ರ ರಾಜಕೀಯ ಬಿಕ್ಕಟ್ಟು: ಇಂದು ಸುಪ್ರೀಂ ತೀರ್ಪು?

ನವದೆಹಲಿ (ಪಿಟಿಐ): ಮಹಾರಾಷ್ಟ್ರದ ಶಿವಸೇನಾ ಕೇಂದ್ರಿತ ರಾಜಕೀಯ ಬಿಕ್ಕಟ್ಟಿನ ಕುರಿತು ಸುಪ್ರೀಂ ಕೋರ್ಟ್ ಗುರುವಾರ ತೀರ್ಪು ಪ್ರಕಟಿಸುವ ಸಾಧ್ಯತೆ ಇದೆ. ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠ ಮಾರ್ಚ್ 16ರಂದು ತೀರ್ಪನ್ನು ಕಾಯ್ದಿರಿಸಿತ್ತು.

ಬಹುಮತ ಸಾಬೀತಿಗೆ ಸಿದ್ಧ: ‘ಅಡಳಿತಾರೂಢ ಶಿವಸೇನಾ -ಬಿಜೆಪಿ ಮೈತ್ರಿಕೂಟವು ಆತ್ಮವಿಶ್ವಾಸದಿಂದ ವಿಧಾನಸಭೆಯಲ್ಲಿ ಬಹುಮತ ಸಾಬೀತುಪಡಿಸಲಿದೆ’ ಎಂದು ಬಿಜೆಪಿ ರಾಜ್ಯ ಘಟಕ ಅಧ್ಯಕ್ಷ ಚಂದ್ರಶೇಖರ ಬಾವಾಂಕುಲೆ ಹೇಳಿದ್ದಾರೆ.

ದೇಶದಲ್ಲಿ ನ್ಯಾಯಾಂಗವು ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿದೆಯೇ ಎಂಬುದನ್ನು ಸುಪ್ರೀಂಕೋರ್ಟ್‌ನ ತೀರ್ಪು ನಿರ್ಧರಿಸಲಿದೆ ಎಂದು ಮಹಾ ರಾಷ್ಟ್ರ ವಿಕಾಸ ಅಘಾಡಿ ಪ್ರತಿಕ್ರಿಯಿಸಿದೆ.

ಸುಳ್ಳುಪತ್ತೆಗೆ ಒಳಪಡಿಸಿ: ಸಾಕ್ಷಿ ಮಲಿಕ್

ನವದೆಹಲಿ (ಪಿಟಿಐ): ಲೈಂಗಿಕ ದೌರ್ಜನ್ಯದ ಆರೋಪ ಹೊತ್ತಿರುವ ಭಾರತೀಯ ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್ ಭೂಷಣ್ ಅವರನ್ನು ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯಲ್ಲಿ ಸುಳ್ಳುಪತ್ತೆ ಪರೀಕ್ಷೆಗೆ ಒಳಪಡಿಸಬೇಕೆಂದು ಪ್ರತಿಭಟನನಿರತ ಕುಸ್ತಿಪಟುಗಳು ಬುಧವಾರ ಆಗ್ರಹಿಸಿದ್ದಾರೆ.

‘ನನ್ನ ವಿರುದ್ಧ ಸುಳ್ಳು ಆರೋಪ ಹೊರಿಸಲಾಗಿದೆ. ನಾನು ಸಜ್ಜ’ ಎಂದು ಬ್ರಿಜ್ ಭೂಷಣ್ ಪ್ರತಿಕ್ರಿಯಿಸಿರುವ ಹಿನ್ನೆಲೆಯಲ್ಲಿ ಕುಸ್ತಿಪಟುಗಳು ಈ ಬೇಡಿಕೆ ಇರಿಸಿದ್ದಾರೆ.

‘ನಮ್ಮ ಜೊತೆಗೆ (ಏಳು ಮಂದಿ ಮಹಿಳಾ ಕುಸ್ತಿಪಟುಗಳು) ಬ್ರಿಜ್ ಭೂಷಣ್ ಅವರನ್ನೂ ಸುಪ್ರೀಂ ಕೋರ್ಟ್ ಮೇಲ್ವಿಚಾರಣೆ ಅಡಿ ಸುಳ್ಳುಪತ್ತೆ ಪರೀಕ್ಷೆಗೆ ಒಳಪಡಿಸಿ. ಈ ಪರೀಕ್ಷೆಯಲ್ಲಿ ಯಾರ ದೋಷ ಸಾಬೀತಾಗುತ್ತದೆಯೋ ಅವರನ್ನು ಮರಣ ದಂಡನೆಗೆ ಗುರಿಪಡಿಸಿ’ ಎಂದು ಕುಸ್ತಿಪಟು ಸಾಕ್ಷಿ ಮಲಿಕ್ ಹೇಳಿದ್ದಾರೆ.

‘ಬ್ರಿಜ್ ಭೂಷಣ್ ಪರ ಮಾತನಾಡುತ್ತಿರುವವರಿಗೆ ನಾವು ನೀಡುತ್ತಿರುವ ಸವಾಲು ಇದು’ ಎಂದು ಅವರು ತಿಳಿಸಿದ್ದಾರೆ.

ತಮಗೆ ಬೆಂಬಲ ಸೂಚಿಸುವಂತೆ ಸಾಕ್ಷಿ ಅವರು ದೇಶದ ಮಹಿಳೆಯರಲ್ಲಿ ಮನವಿ ಮಾಡಿದ್ದಾರೆ. ‘2012ರಲ್ಲಿ ನಡೆದ ನಿರ್ಭಯಾ ಅತ್ಯಾಚಾರ ಪ್ರಕರಣದ ಸಂದರ್ಭದಲ್ಲಿ ಅನ್ಯಾಯದ ವಿರುದ್ಧ ಧ್ವನಿಯೆತ್ತಿದ ಮಾದರಿಯಲ್ಲೇ, ಮಹಿಳಾ ಕುಸ್ತಿಪಟುಗಳ ಪರವಾಗಿಯೂ ಧ್ವನಿಯೆತ್ತಿ, ಬೆಂಬಲ ನೀಡಿ. ಈ ಹೋರಾಟದಲ್ಲಿ ನಾವು ಗೆದ್ದರೆ, ದೇಶಕ್ಕೆ ಪ್ರಬಲ ಸಂದೇಶ ರವಾನಿಸಿದಂತಾಗುತ್ತದೆ. ಇಲ್ಲದಿದ್ದರೆ ನಾವು 50 ವರ್ಷಗಳು ಹಿಂದಕ್ಕೆ ಹೋಗುತ್ತೇವೆ’ ಎಂದಿದ್ದಾರೆ.

‘ಅಧಿಕಾರಿಗಳ ನಿಷ್ಕ್ರಿಯತೆ ವಿರುದ್ಧ ಪ್ರತಿಭಟನೆ ದಾಖಲಿಸಲು ಕೈಗೆ ಕಪ್ಪುಪಟ್ಟಿಗಳನ್ನು ಕಟ್ಟಿಕೊಂಡು ಗುರುವಾರ ಪ್ರತಿಭಟನೆ ನಡೆಸುತ್ತೇವೆ’ ಎಂದು ಮತ್ತೊಬ್ಬ ಕುಸ್ತಿಪಟು ವಿನೇಶಾ ಫೋಗಟ್ ಹೇಳಿದ್ದಾರೆ.

ಪಂಜಾಬ್‌ನಲ್ಲಿ ತರಬೇತಿ: ಬ್ರಿಜ್ ಭೂಷಣ್ ಸ್ಪರ್ಧಾನಿಲ್ಲರುವ ಭಾರತ ಕುಸ್ತಿ ಫೆಡರೇಷನ್-ಲಖನೌನಲ್ಲಿ ತರಬೇತಿ ಪಡೆಯಲು ಹಲವಾರು ಮಹಿಳಾ ಕುಸ್ತಿಪಟುಗಳು ಹಿಂದೇಟು ಹಾಕುತ್ತಿರುವ ಕಾರಣ ರಾಷ್ಟ್ರೀಯ ಮಹಿಳಾ ಕುಸ್ತಿ ತರಬೇತಿಯನ್ನು ಮುಂದಿನ ದಿನಗಳಲ್ಲಿ ಭಾರತದ ಕ್ರೀಡಾ ಪ್ರಾಧಿಕಾರದ ಪಂಜಾಬ್‌ನಲ್ಲಿಯ ಕೇಂದ್ರದಲ್ಲಿ ಆಯೋಜಿಸಲಾಗುವುದು ಎಂದು ಅಡ್‌ಹಾಕ್ ಸಮಿತಿ ಹೇಳಿದೆ.

ಎಫ್‌ಐಆರ್: ತನಿಖಾ ವರದಿ ಕೇಳಿದ ನ್ಯಾಯಾಲಯ

ಲೈಂಗಿಕ ದೌರ್ಜನ್ಯ ಆರೋಪಕ್ಕೆ ಸಂಬಂಧಿಸಿ ಭಾರತೀಯ ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರ ವಿರುದ್ಧ ದಾಖಲಿಸಲಾಗಿರುವ ಎಫ್‌ಐಆರ್‌ಗೆ ಸಂಬಂಧಿಸಿದಂತೆ ತನಿಖಾ ಸ್ಥಿತಿಗತಿ ವರದಿ ನೀಡುವಂತೆ ದೆಹಲಿ ಪೊಲೀಸರಿಗೆ ದೆಹಲಿ ನ್ಯಾಯಾಲಯವೊಂದು ಬುಧವಾರ ಸೂಚಿಸಿದೆ.

ಪ್ರಕರಣದ ತನಿಖೆಯ ಮೇಲ್ವಿಚಾರಣೆ ವಹಿಸಬೇಕು ಮತ್ತು ಸಂತ್ರಸ್ತರು ಎನ್ನಲಾದವರ ಹೇಳಿಕೆಗಳನ್ನು ನ್ಯಾಯಾಲಯದ ಎದುರು ದಾಖಲಿಸಿಕೊಳ್ಳಬೇಕು ಎಂದು ಕೋರಿ ಕುಸ್ತಿಪಟುಗಳು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಅರ್ಜಿ ಪರಿಶೀಲಿಸಿದ ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಹರ್ಜೀತ್ ಸಿಂಗ್ ಜಸ್ಪಾಲ್ ಅವರು ದೆಹಲಿ ಪೊಲೀಸರಿಗೆ ನೋಟಿಸ್ ನೀಡಿದ್ದಾರೆ. ಈ ಅರ್ಜಿಯ ಮುಂದಿನ ವಿಚಾರಣೆಯನ್ನು ಮೇ 12ರಂದು ನಿಗದಿಪಡಿಸಲಾಗಿದೆ. ಅಂದೇ ತನಿಖಾ ವರದಿ ಸಲ್ಲಿಸಲು ಪೊಲೀಸರಿಗೆ ನ್ಯಾಯಾಲಯ ನಿರ್ದೇಶಿಸಿದೆ. ಈ ಮೊಕದ್ದಮೆಯ ತನಿಖೆ ನಡೆಸಲು ಪೊಲೀಸರು ಸಿದ್ಧರಿಲ್ಲ, ನ್ಯಾಯಾಲಯದ ಎದುರು ಸಂತ್ರಸ್ತರ ಹೇಳಿಕೆಯನ್ನೂ ಪೊಲೀಸರು ದಾಖಲಿಸಿಲ್ಲ ಎಂದು ಅರ್ಜಿಯಲ್ಲಿ ದೂರಲಾಗಿದೆ.

ಮುಂದುವರಿದ ರೈತರ ಬೆಂಬಲ: ಸಂಯುಕ್ತ ಕಿಸಾನ್ ಮೋರ್ಚಾ ಸೇರಿ ಹಲವು ರೈತ ಸಂಘಟನೆಗಳ ಸದಸ್ಯರು ಬುಧವಾರವೂ ದೆಹಲಿಯ ಜಂತರ್‌ಮಂತರ್‌ಗೆ ಆಗಮಿಸಿ ಪ್ರತಿಭಟನಾನಿರತ ಕುಸ್ತಿಪಟುಗಳಿಗೆ ಬೆಂಬಲ ಸೂಚಿಸಿದರು.

ಎಡಿಪಿ ನೇಮಕಾತಿಗಳಲ್ಲಿ ಇನ್ನು ಲಿಂಗ ತಾರತಮ್ಯ ಇಲ್ಲ

ನವದೆಹಲಿ (ಪಿಟಿಐ): ಅಮ್ಯೂನಿಷನ್ ಡಿಪೋ... (ಎಡಿಪಿ) ಎಲ್ಲ ನೇಮಕಾತಿಗಳಲ್ಲಿ ಇನ್ನು ಮುಂದೆ ಲಿಂಗ ತಾರತಮ್ಯ ಇಲ್ಲ. ಮಹಿಳೆ ಮತ್ತು ಪುರುಷರಿಗೆ ಪ್ರತ್ಯೇಕವಾಗಿ ಮೀಸಲಾತಿ ನಿಗದಿಪಡಿಸುವುದನ್ನು ರದ್ದುಪಡಿಸಲಾಗುವುದು ಎಂದು ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಎಡಿಪಿ ನೇಮಕಾತಿಯಲ್ಲಿ ಮಹಿಳೆಯರಿಗೆ ಕೇವಲ ಶೇ 10ರಷ್ಟು ಹುದ್ದೆಗಳನ್ನು ಮೀಸಲಿಟ್ಟದ್ದಕ್ಕೆ ಸುಪ್ರೀಂಕೋರ್ಟ್ ಏ.11ರಂದು ಅಸಮಾಧಾನ ವ್ಯಕ್ತಪಡಿಸಿತ್ತು.

ಮೇ 8ರಂದು ಸರ್ಕಾರದ ಪರ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಎಂ.ನಟರಾಜ್, ಮಹಿಳೆ ಮತ್ತು ಪುರುಷರಿಗೆ ಪ್ರತ್ಯೇಕ ಮೀಸಲಾತಿಯನ್ನು ತೆಗೆದುಹಾಕಲು ಸರ್ಕಾರ ನಿರ್ಧರಿಸಿದೆ. ಭವಿಷ್ಯದ ಎಲ್ಲ ನೇಮಕಾತಿಗಳ ಲಿಂಗ ತಟಸ್ಥವಾಗಿರಲಿವೆ ಎಂದು ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ, ವಿಕ್ರಮ್ ನಾಥ್ ಮತ್ತು ಸಂಜಯ್ ಕರೋಲ್ ಅವರಿಗೆ ತಿಳಿಸಿದ್ದರು. ಆದೇಶವನ್ನು ಬುಧವಾರ ಸುಪ್ರೀಂ ಕೋರ್ಟ್ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ಕೊಯಮತ್ತೂರಿನ ಗೋಪಿಕಾ ನಾಯರ್ ನೇತೃತ್ವದ ಮಹಿಳಾ ದಂತ ವೈದ್ಯರ ತಂಡ ಈ ನಿಟ್ಟಿನಲ್ಲಿ ಅರ್ಜಿ ಸಲ್ಲಿಸಿತ್ತು. ಈಗಿರುವ ವ್ಯವಸ್ಥೆಯಲ್ಲಿ ಪುರುಷರಿಗೆ 2,394 ರ‍್ಯಾಂಕ್‌ವರೆಗೂ ಕಟ್‌ಆಫ್ ಇದ್ದರೆ, ಮಹಿಳೆಯರಿಗೆ ಕಟಾಫ್ ರ‍್ಯಾಂಕ್ 235 ಮಾತ್ರ ಇರುವುದನ್ನು ಸುಪ್ರೀಂ ಕೋರ್ಟ್ ಗಂಭೀರವಾಗಿ ಪರಿಗಣಿಸಿ, ಮಹಿಳೆಯರೂ ಭಾರಿ ಪ್ರತಿಭಾನ್ವಿತರಾಗಿರುವ ಕ್ಷೇತ್ರದಲ್ಲಿ ಇಂತಹ ತಾರತಮ್ಯ ಇರಬಾರದು ಎಂದು ಸೂಚಿಸಿತ್ತು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,266
ಇಂದಿನ ಅಂತ್ಯ	18,315
▲	49
ದಿನದ ಗರಿಷ್ಠ	18,326

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹515
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹520

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1660 (1670)
ಸೋಯಾ (ರಿಫೈನ್ಡ್)	₹985 (990)
ಸೂರ್ಯಕಾಂತಿ (ರಿಫೈನ್ಡ್)	₹985 (995)
ಪಾಮೋಲಿನ್	₹948 (954)

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹153
ಆರ್‌ಎಸ್‌ಎಸ್-5	₹147.50
ಗುಡ್ ಲಾಟ್	₹133

(ಪ್ರತಿ ಕೆ.ಜಿಗೆ)

ವೆಲ್ನಿಕ್ ಇಂಡಿಯಾದಿಂದ ನ್ಯೂಟ್ರಿಗೇನ್ ಪ್ಲಸ್ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೆಲ್ನಿಕ್ ಇಂಡಿಯಾ ಲಿಮಿಟೆಡ್ ಕಂಪನಿಯು ದೇಶದ ಮಾರುಕಟ್ಟೆಗೆ ‘ನ್ಯೂಟ್ರಿಗೇನ್ ಪ್ಲಸ್’ ಎನ್ನುವ ಹೊಸ ಉತ್ಪನ್ನ ಬಿಡುಗಡೆ ಮಾಡಿದೆ. ತೂಕ ಹೆಚ್ಚಿಸಿಕೊಳ್ಳುವ ಆಯುರ್ವೇದಿಕ್ ಪೌಡರ್ ಇದು ಎಂದು ಕಂಪನಿ ಹೇಳಿದೆ.

29 ಬಗೆಯ ವಿಟಮಿನ್ ಮತ್ತು ಮಿನರಲ್‌ಗಳ ಜೊತೆಗೆ ಅಶ್ವಗಂಧ, ಶತಾವರಿ ಸೇರಿದಂತೆ 6 ಗಿಡಮೂಲಿಕೆಗಳನ್ನು ಸಹ ಇದು ಒಳಗೊಂಡಿದೆ.

ನ್ಯೂಟ್ರಿಗೇನ್

ಈ ಉತ್ಪನ್ನಕ್ಕೆ ಯಾವುದೇ ಕೃತಕ ಬಣ್ಣ ಮತ್ತು ಪರಿಮಳವನ್ನು ಸೇರಿಸಿಲ್ಲ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

‘ನಮ್ಮ ಗ್ರಾಹಕರಿಗೆ ನ್ಯೂಟ್ರಿಗೇನ್ ಪ್ಲಸ್ ಪರಿಚಯಿಸಲು ಸಂತೋಷ ಆಗುತ್ತಿದೆ. ಈ ಉತ್ಪನ್ನ ಹೊರತರಲು ನಾವು ಬಹಳ ದೀರ್ಘ ಸಮಯದ ಕೆಲಸ ಮಾಡುತ್ತಿದ್ದೆವು. ಆಯುರ್ವೇದಿಕ್ ನ್ಯೂಟ್ರಾಸುಟಿಕಲ್ (ಆರೋಗ್ಯವರ್ಧಕ ಆಹಾರ ವಸ್ತುಗಳು) ಮಾರುಕಟ್ಟೆಯಲ್ಲಿ ಪರಿವರ್ತನೆ ತರಲು ಕಾರಣವಾಗುವ ವಿಶ್ವಾಸವಿದೆ’ ಎಂದು ವೆಲ್ನಿಕ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಸುಖದೇವ್ ಗಜ್ಜೋಟ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಲ್‌ಆ್ಯಂಡ್‌ಟಿ ಲಾಭ ಏರಿಕೆ

ನವದೆಹಲಿ (ಪಿಟಿಐ): ಎಂಜಿನಿಯರಿಂಗ್ ಮತ್ತು ನಿರ್ಮಾಣ ಕ್ಷೇತ್ರದ ಪ್ರಮುಖ ಕಂಪನಿಯಾಗಿರುವ ಎಲ್‌ಆ್ಯಂಡ್‌ಟಿ, ಮಾರ್ಚ್ ತ್ರೈಮಾಸಿಕದ ಫಲಿತಾಂಶ ಪ್ರಕಟಿಸಿದ್ದು, ಕಂಪನಿಯ ನಿವ್ವಳ ಲಾಭವು ₹3,986 ಕೋಟಿಗೆ ಏರಿಕೆ ಆಗಿದೆ.

ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಕಂಪನಿಯು ₹3,621 ಕೋಟಿ ನಿವ್ವಳ ಲಾಭ ಗಳಿಸಿತ್ತು.

ಕಂಪನಿಯ ವರಮಾನವು ಶೇಕಡ 10ರಷ್ಟು ಒಟ್ಟು ವೆಚ್ಚಗಳು ಶೇ 11ರಷ್ಟು ಹೆಚ್ಚಳ ಕಂಡಿವೆ. ಆಡಳಿತ ಮಂಡಳಿಯು ಪ್ರತಿ ಷೇರಿಗೆ ₹24ರಷ್ಟು ಅಂತಿಮ ಡಿವಿಡೆಂಡ್ ಘೋಷಿಸಿದೆ.

ಕಂಪನಿಯ ಕಾರ್ಯನಿರ್ವಾಹಕೇತರ ಅಧ್ಯಕ್ಷ ಎ.ಎಂ. ನಾಯ್ಕ್ ಅವರು ಸೆಪ್ಟೆಂಬರ್ 30ರಂದು ಅನ್ವಯವಾಗುವಂತೆ ತಮ್ಮ ಸ್ಥಾನ ತ್ಯಜಿಸಲಿದ್ದಾರೆ ಎಂದು ಕಂಪನಿ ಹೇಳಿದೆ. ಅವರು ಕಂಪನಿಯ ಗೌರವಾಧ್ಯಕ್ಷರಾಗಿ ಮುಂದುವರಿಯಲಿದ್ದಾರೆ.

ಸ್ಥಳೀಯ ಪಾಲುದಾರರಿಗೆ ಹೆಚ್ಚು ಷೇರು: ಎಂಜಿ

ನವದೆಹಲಿ (ಪಿಟಿಐ): ಎಂಜಿ ಮೋಟರ್ ಇಂಡಿಯಾ ಕಂಪನಿಯು ಎರಡರಿಂದ ನಾಲ್ಕು ವರ್ಷಗಳಲ್ಲಿ ತನ್ನ ಷೇರುಗಳಲ್ಲಿ ಬಹುಪಾಲನ್ನು ಸ್ಥಳೀಯ ಪಾಲುದಾರರಿಗೆ ಮಾರಲು ಯೋಜನೆ ರೂಪಿಸುತ್ತಿರುವುದಾಗಿ ಬುಧವಾರ ಹೇಳಿದೆ.

ಭಾರತದಲ್ಲಿ 5 ವರ್ಷಗಳ ವಹಿವಾಟಿನ ಕಾರ್ಯಸೂಚಿಯ ಭಾಗವಾಗಿ ಈ ಕ್ರಮಕ್ಕೆ ಕಂಪನಿ ಮುಂದಾಗಿದೆ. ಬ್ರಿಟಿಷ್ ಬ್ರ್ಯಾಂಡ್ ಆಗಿರುವ ಎಂಜಿ ಮೋಟರ್ ಸದ್ಯ ಚೀನಾದ ಎಸ್‌ಎಐಸಿ ಮೋಟರ್ ಕಾರ್ಪ್‌ನ ಒಡೆತನದಲ್ಲಿದೆ.

2028ರ ಒಳಗಾಗಿ ದೇಶದಲ್ಲಿ ತನ್ನ ಕಾರ್ಯಾಚರಣೆ ವಿಸ್ತರಿಸಲು ಕಂಪನಿಯು ₹5 ಸಾವಿರ ಕೋಟಿ ಹೂಡಿಕೆ ಯೋಜನೆ ಹೊಂದಿದೆ. ತನ್ನ ಮುಂದಿನ ಹಂತದ ಬೆಳವಣಿಗೆಗಾಗಿ ಬಂಡವಾಳ ಸಂಗ್ರಹಿಸಲು ಮುಂದಾಗಿದೆ.

ಚೀನಾದ ಮಾತೃಸಂಸ್ಥೆಯಿಂದ ಹೆಚ್ಚಿನ ಬಂಡವಾಳ ಸಂಗ್ರಹಿಸುವ ಯೋಜನೆ ಇದುವರೆಗೆ ಯಶಸ್ವಿಯಾಗಿಲ್ಲ.

ಮುಂಬೈ ಧಾರಣೆ

ಶೇಂಗಾ

10–5–2023

ಜಾವಾ 70/80(ಹೊಸ)	11750-11800
ಜಾವಾ 80/90(ಹೊಸ)	11150-11200
ದಪ್ಪ ಮಧ್ಯಪ್ರದೇಶ(ಹೊಸ)	11300-11400
ದಪ್ಪ ಗುಜರಾತ್(ಹೊಸ)	12300-12400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1670 (1680)
ಒಂದು ಬಾರಿ ಚಲಿಸಿದ	1665 (1675)
ಸೋಯಾ ಕಚ್ಚಾ	872 (890)
ಪಾಮ್ ಬಾರಿ ಚಲಿಸಿದ	946 (952)
ಸೂರ್ಯಕಾಂತಿ ಎಣ್ಣೆ ಕಚ್ಚಾ	900 (910)

ಚಿನ್ನ - ಬೆಳ್ಳಿ (ಜಿಎಸ್‌ಟಿ ಸೇರಿ)

ಅಪರಂಜಿ ಚಿನ್ನ 10ಗ್ರಾಂ
61,500 (61,200)
ಬೆಳ್ಳಿ ಕೆ.ಜಿ ₹76,600 (76,350)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಬಿಕ್ಕಟ್ಟು ಪರಿಹರಿಸಲು ವೃತ್ತಿಪರರ ನೇಮಕ

ಗೋ ಫಸ್ಟ್ ಮಂಡಳಿ ಅಮಾನತು

ನವದೆಹಲಿ (ಪಿಟಿಐ): ‘ಹಣಕಾಸಿಗೆ ಸಂಬಂಧಿಸಿದ ಹೊಣೆಗಾರಿಕೆಗಳನ್ನು ನಿಭಾಯಿಸಲು ನಮ್ಮಿಂದ ಆಗುತ್ತಿಲ್ಲ’ ಎಂದು ಗೋ ಫಸ್ಟ್ ಕಂಪನಿಯು ಸ್ವಯಂಪ್ರೇರಿತವಾಗಿ ಸಲ್ಲಿಸಿದ್ದ ಅರ್ಜಿಯನ್ನು ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ (ಎನ್‌ಸಿಎಲ್‌ಟಿ) ವಿಚಾರಣೆಗೆ ಅಂಗೀಕರಿಸಿದೆ.

ಕಂಪನಿಯ ಆಡಳಿತ ಮಂಡಳಿಯನ್ನು ಅಮಾನತಿನಲ್ಲಿ ಇರಿಸಲಾಗಿದೆ. ಗೋ ಫಸ್ಟ್‌ಗೆ ಲೀಸ್ ಆಧಾರದಲ್ಲಿ ನೀಡಿರುವ ವಿಮಾನಗಳನ್ನು ಹಿಂಪಡೆಯುವಂತಿಲ್ಲ ಎಂದು ಲೀಸ್ ನೀಡಿರುವ ಕಂಪನಿಗಳಿಗೆ ಎನ್‌ಸಿಎಲ್‌ಟಿ ಹೇಳಿದೆ.

ಗೋ ಫಸ್ಟ್ ಕಂಪನಿಯಲ್ಲಿ ಏಳು ಸಾವಿರಕ್ಕೂ ಹೆಚ್ಚು ನೌಕರರಿದ್ದಾರೆ. ಕಂಪನಿಯಲ್ಲಿನ ಬಿಕ್ಕಟ್ಟನ್ನು ಪರಿಹರಿಸಲು ಎನ್‌ಸಿಎಲ್‌ಟಿ, ವೃತ್ತಿಪರರನ್ನು (ಐಆರ್‌ಪಿ) ನೇಮಕ ಮಾಡಿದೆ. ಐಆರ್‌ಪಿ ಆಗಿ ನೇಮಕಗೊಂಡಿರುವ ಅಭಿಲಾಷ್ ಲಾಲ್ ಅವರು ನೌಕರರನ್ನು ಕೆಲಸದಿಂದ ತೆಗೆಯುವಂತಿಲ್ಲ ಎಂದು ಎನ್‌ಸಿಎಲ್‌ಟಿ ಆದೇಶಿಸಿದೆ.

ಗೋ ಫಸ್ಟ್ ಕಂಪನಿಯು ₹11,463 ಕೋಟಿ ಸಾಲದ ಹೊರೆ ಹೊತ್ತಿದೆ. ಎನ್‌ಸಿಎಲ್‌ಟಿ ಎದುರು ಇರುವ ಅರ್ಜಿಯ ವಿಚಾರಣೆ ಪೂರ್ಣಗೊಳ್ಳುವವರೆಗೆ ಕಂಪನಿಯು ತನ್ನ ಆಸ್ತಿಯನ್ನು ವರ್ಗಾವಣೆ ಮಾಡುವಂತಿಲ್ಲ, ಮಾರಾಟ ಮಾಡುವಂತಿಲ್ಲ.

‘ಐಆರ್‌ಪಿ ಆಗಿ ನೇಮಕಗೊಂಡಿರುವ ಅಭಿಲಾಷ್ ಲಾಲ್ ಅವರು ಕಂಪನಿಯ ಚಟುವಟಿಕೆಗಳು ಮುಂದುವರಿಯುವಂತೆ ಮಾಡಲು ಹಾಗೂ ಕಂಪನಿಯ ಸೇವೆಗಳು ಸುಗಮವಾಗಿ ಲಭ್ಯವಾಗುವಂತೆ ಮಾಡಲು ಎಲ್ಲ ಕ್ರಮಗಳನ್ನು ಕೈಗೊಳ್ಳಬೇಕು’ ಎಂದು ಎನ್‌ಸಿಎಲ್‌ಟಿ ಹೇಳಿದೆ.

ಕಂಪನಿಯ ಆಡಳಿತ ಮಂಡಳಿಯನ್ನು ಅಮಾನತಿನಲ್ಲಿ ಇರಿಸಿರುವ ಎನ್‌ಸಿಎಲ್‌ಟಿ, ಆಡಳಿತ ಮಂಡಳಿಯ ಸದಸ್ಯರು ಲಾಲ್ ಅವರಿಗೆ ಎಲ್ಲ ನೆರವು ನೀಡಬೇಕು ಎಂದು ಸೂಚಿಸಿದೆ.

ಮುಖ್ಯಾಂಶಗಳು

- ನೌಕರರನ್ನು ಕೆಲಸದಿಂದ ತೆಗೆಯದಂತೆ ಎನ್‌ಸಿಎಲ್‌ಟಿ ಆದೇಶ
- ₹11,463 ಕೋಟಿ ಸಾಲದಲ್ಲಿ ಇರುವ ವಿಮಾನಯಾನ ಕಂಪನಿ
- ಸಾಲ ವಸೂಲಿಗೆ ನ್ಯಾಯ ಮಂಡಳಿ ತಡೆ

ವಾಟ್ಸ್‌ಆ್ಯಪ್‌ನಿಂದ ಖಾಸಗಿತನ ಉಲ್ಲಂಘನೆ: ಕೇಂದ್ರ ಪರಿಶೀಲನೆ

ನವದೆಹಲಿ (ಪಿಟಿಐ): ಸ್ಮಾರ್ಟ್‌ಫೋನ್ ಬಳಕೆಯಲ್ಲಿ ಇಲ್ಲದಿದ್ದ ಹೊತ್ತಿನಲ್ಲಿಯೂ ವಾಟ್ಸ್‌ಆ್ಯಪ್ ಅದರ ಮೈಕ್ರೊಫೋನ್ ಸೌಲಭ್ಯವನ್ನು ಬಳಸುತ್ತಿತ್ತು ಎಂಬ ಆರೋಪದ ಬಗ್ಗೆ ಕೇಂದ್ರ ಸರ್ಕಾರ ಪರಿಶೀಲನೆ ನಡೆಸಲಿದೆ ಎಂದು ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಖಾತೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ತಿಳಿಸಿದ್ದಾರೆ.

‘ನಾನು ನಿದ್ರೆ ಮಾಡುತ್ತಿದ್ದ ಹೊತ್ತಿನಲ್ಲಿ ವಾಟ್ಸ್‌ಆ್ಯಪ್ ಮೈಕ್ರೊಫೋನ್‌ನನ್ನು ಬಳಕೆ ಮಾಡುತ್ತಿತ್ತು’ ಎಂದು ಟ್ವಿಟರ್‌ನ ಎಂಜಿನಿಯರಿಂಗ್ ನಿರ್ದೇಶಕ ಫೋಡ್ ದಾಬಿರಿ ಆರೋಪಿಸಿದ್ದರು. ಅವರ ಟ್ವೀಟ್‌ಗೆ ಪ್ರತಿಕ್ರಿಯೆ ನೀಡಿರುವ ಚಂದ್ರಶೇಖರ್ ಅವರು, ‘ಈ ಉಲ್ಲಂಘನೆಯನ್ನು ಒಪ್ಪಿಕೊಳ್ಳಲು ಆಗದು, ಇದು ಖಾಸಗಿತನದ ಉಲ್ಲಂಘನೆ’ ಎಂದು ಹೇಳಿದ್ದಾರೆ.

‘ಈ ಬಗ್ಗೆ ನಾವು ತಕ್ಷಣ ಪರಿಶೀಲಿಸುತ್ತೇವೆ. ಖಾಸಗಿತನದ ಉಲ್ಲಂಘನೆ ಆಗಿದ್ದಲ್ಲಿ ಕ್ರಮ ಕೈಗೊಳ್ಳುತ್ತೇವೆ’ ಎಂದು ಅವರು ತಿಳಿಸಿದ್ದಾರೆ. ಟ್ವಿಟರ್ ಎಂಜಿನಿಯರ್ ಮಾಡಿರುವ ಆರೋಪಕ್ಕೆ ಉತ್ತರಿಸಿರುವ ವಾಟ್ಸ್‌ಆ್ಯಪ್, ‘ಇದು ಆ್ಯಂಡ್ರಾಯ್ಡ್‌ನಲ್ಲಿನ ಒಂದು ಬಗ್‌ನಿಂದ ಆಗಿರಬಹುದು ಎಂದು ಭಾವಿಸಿದ್ದೇವೆ’ ಎಂದು ಹೇಳಿದೆ.

‘ಬಳಕೆದಾರರಿಂದ ಅನುಮತಿ ದೊರೆತ ನಂತರ ವಾಟ್ಸ್‌ಆ್ಯಪ್, ಬಳಕೆದಾರರು ಕರೆ ಮಾಡುವ ಸಂದರ್ಭದಲ್ಲಿ, ವಾಯ್ಸ್‌ನೋಟ್ (ಧ್ವನಿ ಟಿಪ್ಪಣಿ) ಸಿದ್ಧಪಡಿಸುವಾಗ ಅಥವಾ ವಿಡಿಯೊ ಸೆರೆಹಿಡಿಯುವಾಗ ಮಾತ್ರ ಮೈಕ್ ಸೌಲಭ್ಯವನ್ನು ಬಳಸುತ್ತದೆ. ಆ ಹೊತ್ತಿನಲ್ಲಿಯೂ, ಮೈಕ್ ಎನ್‌ಕ್ರಿಪ್ಟ್ ಆಗಿರುತ್ತದೆ. ಬಳಕೆದಾರರು ಹೇಳುತ್ತಿರುವುದನ್ನು ವಾಟ್ಸ್‌ಆ್ಯಪ್ ಕೇಳಿಸಿಕೊಳ್ಳುವುದಿಲ್ಲ’ ಎಂದು ವಾಟ್ಸ್‌ಆ್ಯಪ್ ವಿವರಣೆ ನೀಡಿದೆ.

ನಿದ್ರೆ ಮಾಡುತ್ತಿದ್ದ ಹೊತ್ತಿನಲ್ಲಿ ವಾಟ್ಸ್‌ಆ್ಯಪ್ ತಮ್ಮ ಸ್ಮಾರ್ಟ್‌ಫೋನ್‌ನ ಮೈಕ್ರೊಫೋನ್ ಸೌಲಭ್ಯವನ್ನು ಹಲವು ಸಂದರ್ಭಗಳಲ್ಲಿ ಬಳಕೆ ಮಾಡುತ್ತಿತ್ತು ಎಂದು ಹೇಳುವ ಸ್ಕ್ರೀನ್ ಶಾಟ್‌ಗಳನ್ನು ಟ್ವಿಟರ್ ಎಂಜಿನಿಯರ್ ಹಂಚಿಕೊಂಡಿದ್ದಾರೆ. ಇದಕ್ಕೆ ಟ್ವಿಟರ್ ಮುಖ್ಯಸ್ಥ ಇಲಾನ್ ಮಸ್ಕ್ ಕೂಡ ಪ್ರತಿಕ್ರಿಯಿಸಿದ್ದಾರೆ. ‘ವಾಟ್ಸ್‌ಆ್ಯಪ್ ನಂಬಲು ಆಗುವುದಿಲ್ಲ’ ಎಂದು ಹೇಳಿದ್ದಾರೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರಯೋಜನಕ್ಕಾಗಿ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Wanted

ಬೆಂಗಳೂರಿನಲ್ಲಿ ಮನೆ ಕೆಲಸ ಮಾಡುವವರು, ಮಕ್ಕಳನ್ನು ನೋಡಿಕೊಳ್ಳುವವರು (ಮಹಿಳೆ) ಬೇಕಾಗಿದ್ದಾರೆ. ಸಂಬಳ :10k ರಿಂದ 15k ಉಚಿತ ಊಟ ವಸತಿ ಸೌಲಭ್ಯವಿದೆ ಸಂಪರ್ಕಿಸಿ: 8296577964

ತಕ್ಷಣ ಬೇಕಾಗಿದ್ದಾರೆ, ಬೆಂಗಳೂರಿನಲ್ಲಿ M.R.S ಕಂಪನಿಗೆ ಆಫೀಸ್ ಕೆಲಸಕ್ಕೆ ಮಹಿಳೆಯರು PUC, BA, BCom, BSc, BBM, MA, M.Com, MSc, G.N.M., A.N.M. BSc/MSc Nursing ಆಗಿರುವಂತಹ ಮಹಿಳೆಯರು ತಕ್ಷಣ ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು, ಉಚಿತ ಊಟ-ವಸತಿ ಸಂಬಳ 15,000 ರಿಂದ 17,000/- ಬೆಂಗಳೂರು-56 ತಕ್ಷಣ ಸಂಪರ್ಕಿಸಿ: 7349463892, 8904463086

Part-Time Jobs

ಮನೆಯಿಂದಲೇ ಕೆಲಸ ನಿಮ್ಮ ಬಿಡುವಿನ ವೇಳೆಯಲ್ಲಿ ಯಾವುದೇ ಟಾರ್ಗೆಟ್ ಇಲ್ಲದೇ ಪೇಪರ್ ಪ್ಯಾಕಿಂಗ್ ಮೆಡಿಕಲ್ ಬಾಕ್ಸ್, ಪ್ಯಾಕಿಂಗ್ ಪೆನ್ಸಿಲ್ ಪ್ಯಾಕಿಂಗ್ ಕೆಲಸಮಾಡಿ ಗಳಿಸಿ ವಾರಕ್ಕೆ 8000-15000/- 6360827045

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ‘ಕೊರಿಯರ್ ಸೌಲಭ್ಯವಿದೆ. 8884777502, 8884777503.

General

ಕರ್ನಾಟಕದಾದ್ಯಂತ ಹೆಸರಾಂತಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ ಯುವತಿಯರು ಬೇಕಾಗಿದ್ದಾರೆ. ವಸತಿಯೊಂದಿಗೆ Salary+ OT 18800- 78000/-. 9964435081, 9964435077

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೊಟ್ಟಿದ್ದಾರೆ. ಸಂಬಳ 16,000- 80,000. 7760014526, 7795199673

ಪ್ರವಾಸ

Travel

ಕಾಶಿ ಗಯಾ ಪ್ರಯಾಗ ಪುರಿ,ಕೋನಾರ್ಕ್,ಭುವನೇಶ್ವರ್ 22.05.2023 ರಿಂದ 10 ದಿನಗಳು, ಕಾಶ್ಮೀರ್ ಗುಲ್ ಮಾರ್ಗ್,ಪೆಲ್‌ಗಾಂವ್ ವೈಷ್ಣೋದೇವಿ. 08.06.2023 15.06.2023 ರಿಂದ 9 ದಿನಗಳು. ನೇಪಾಳ,ಮುಕ್ತಿನಾಥ್,ಕಾಶಿ 23.06.2023 ರಿಂದ 10 ದಿನಗಳು, ಸ್ವಯಂಭೂ ಅಮರನಾಥ್ ಕಾಶ್ಮೀರ್,ವೈಷ್ಣೋದೇವಿ. 05.07.2023 12.07.2023 ರಿಂದ 9 ದಿನಗಳು, ಸಂಪರ್ಕಿಸಿ: 26508925 9980993631 ಶ್ರೀಚೈತ್ರ ಟ್ರಾವಲ್ಸ್, ಚಾಮರಾಜಪೇಟೆ ಬೆಂಗಳೂರು.18

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 08/06 ಚಾರ್‌ಧಾಮ್ ಕೇದಾರನಾಥ, ಬದ್ರಿನಾಥ್.01/06 ಗುರುವಾಯೂರು, ಕೊಚ್ಚಿನ್, ಅಲೆಪ್ಪಿ. 22/06 ಕಾಶಿ ಯಾತ್ರೆ. 9964527782,95910177 82

ಪ್ರಜಾವಾಣಿ

ಮಹೇಂದ್ರಸಿಂಗ್ ಧೋನಿ ಮಿಂಚು; ಮಥೀಷ್ ಪಥಿರಾಣ, ಚಾಹರ್ ಅಮೋಘ ಬೌಲಿಂಗ್

ಸೂಪರ್ ಕಿಂಗ್ಸ್‌ಗೆ ತಲೆಬಾಗಿದ ಡೆಲ್ಲಿ

ಚೆನ್ನೈ (ಪಿಟಿಐ): ಬುಧವಾರ ರಾತ್ರಿ ಚೆಪಾಕ್ ಕ್ರೀಡಾಂಗಣದಲ್ಲಿ ಸೇರಿದ್ದ ತನ್ನ ಅಭಿಮಾನಿಗಳಿಗೆ ಮಹೇಂದ್ರಸಿಂಗ್ ಧೋನಿ ಬಳಗವು ಗೆಲುವಿನ ಕಾಣಿಕೆ ನೀಡಿತು.

ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಪಂದ್ಯದಲ್ಲಿ 27 ರನ್‌ಗಳಿಂದ ಜಯಿಸಿತು. ಇದರೊಂದಿಗೆ ಪ್ಲೇಆಫ್ ಪ್ರವೇಶದ್ವಾರಕ್ಕೆ ಮತ್ತಷ್ಟು ಸನಿಹ ಬಂದು ನಿಂತಿತು. ಮೊದಲು ಬ್ಯಾಟಿಂಗ್ ಮಾಡಿದ ಚೆನ್ನೈ ಸೂಪರ್ ಕಿಂಗ್ಸ್ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 167 ರನ್‌ಗಳನ್ನು ಪೇರಿಸಿತು. ಗುರಿ ಬೆನ್ನಟ್ಟಿದ ಡೆಲ್ಲಿ ತಂಡಕ್ಕೆ 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 140 ರನ್ ಗಳಿಸಲಷ್ಟೇ ಸಾಧ್ಯವಾಯಿತು.

ಚೆನ್ನೈ ತಂಡದ ಅನುಭವಿ ಬೌಲರ್ ದೀಪಕ್ ಚಾಹರ್ (28ಕ್ಕೆ2) ಹಾಗೂ ಯುವ ಬೌಲರ್ ಮಥೀಷ್ ಪಥಿರಾಣ (37ಕ್ಕೆ3) ಅಮೋಘ ಬೌಲಿಂಗ್ ಮಾಡಿದರು. ಡೆಲ್ಲಿ ತಂಡದ ಬ್ಯಾಟಿಂಗ್ ಪಡೆಗೆ ತಡೆಯೊಡ್ಡಿದ್ದರು.

ಡೆಲ್ಲಿಗೆ ಇನಿಂಗ್ಸ್‌ನ ಮೊದಲ ಓವರ್‌ನಲ್ಲಿಯೇ ದೀಪಕ್ ಚಾಹರ್ ಆಘಾತ ನೀಡಿದರು. ಡೇವಿಡ್ ವಾರ್ನರ್ ವಿಕೆಟ್ ಉರುಳಿಸಿದ ದೀಪಕ್ ಸಂಭ್ರಮಿಸಿದರು. ಮೂರನೇ ಓವರ್‌ನಲ್ಲಿ ಫಿಲಿಪ್ ಸಾಲ್ಟ್ ವಿಕೆಟ್ ಕೂಡ ದೀಪಕ್ ಪಾಲಾಯಿತು. ಮಧ್ಯಮ ಕ್ರಮಾಂಕದ ಮನೀಷ್ ಪಾಂಡೆ, ಅಕ್ಷರ್ ಪಟೇಲ್ ಹಾಗೂ ಕೊನೆಯಲ್ಲಿ ಲಲಿತ್ ಯಾದವ್ ವಿಕೆಟ್‌ಗಳನ್ನು ಪಥಿರಾಣ ತಮ್ಮ ಬುಟ್ಟಿಗೆ ಹಾಕಿಕೊಂಡರು.

ಮಿಂಚಿನ ಫೀಲ್ಡಿಂಗ್ ಪ್ರದರ್ಶಿಸಿದ ಅಜಿಂಕ್ಯ ರಹಾನೆ ಹಾಗೂ ಮೋಯಿನ್ ಅಲಿ ಅವರು ಎರಡು ರನ್ ಔಟ್‌ಗಳಿಗೆ ಕಾರಣರಾದರು. ಇದರಿಂದಾಗಿ ತಂಡದ ರನ್ ಗಳಿಕೆಯ ವೇಗಕ್ಕೆ ಕಡಿವಾಣ ಬಿದ್ದಿತು. ತುಸು ಹೋರಾಟ ತೋರಿದ ರಿಲಿ ರೊಸೊ (35; 37ಎ) ಅವರಿಗೂ ಜಡೇಜ ತಡೆಯೊಡ್ಡುವಲ್ಲಿ ಸಫಲರಾದರು.

ಚೆನ್ನೈ ತಂಡದ ಮಹೇಂದ್ರಸಿಂಗ್ ಧೋನಿ ಬ್ಯಾಟಿಂಗ್ ಪರಿ–ಪಿಟಿಐ ಚಿತ್ರ

ಮನ ಗೆದ್ದ ಧೋನಿ: ಚೆನ್ನೈ ಸೂಪರ್ ಕಿಂಗ್ಸ್ ತಂಡದ ಅಗ್ರಕ್ರಮಾಂಕದ ಬ್ಯಾಟರ್‌ಗಳು ನಿರೀಕ್ಷಿತ ಪ್ರದರ್ಶನ ತೋರಲಿಲ್ಲ. ಆದರೆ, ಧೋನಿ ತಮ್ಮ ತೋಳಿನಲ್ಲಿ ಇನ್ನೂ ಸಿಕ್ಸರ್ ಎತ್ತುವ ತಾಕತ್ತು ಇದೆ ಎಂಬುದನ್ನು ತೋರಿಸಿದರು. 9 ಎಸೆತಗಳಲ್ಲಿ 20 ರನ್ ಗಳಿಸಿದ ಅವರ ಆಟದಿಂದ ಚೆನ್ನೈ ಹೋರಾಟದ ಮೊತ್ತ ಗಳಿಸಿತು.

ಡೆಲ್ಲಿ ಸ್ಪಿನ್ನರ್ ಅಕ್ಷರ್ ಪಟೇಲ್ (27ಕ್ಕೆ2) ಹಾಗೂ ಮಧ್ಯಮವೇಗಿ ಮಿಚೆಲ್ ಮಾರ್ಷ್ (18ಕ್ಕೆ3) ಅವರ ಉತ್ತಮ ಬೌಲಿಂಗ್‌ನಿಂದಾಗಿ ಚೆನ್ನೈ ತಂಡದ ಬ್ಯಾಟರ್‌ಗಳು ಬೀಸಾಟವಾಡಲು ಸಾಧ್ಯವಾಗಲಿಲ್ಲ. ಇನಿಂಗ್ಸ್‌ನ ಐದನೇ ಓವರ್‌ನಲ್ಲಿ ಅಕ್ಷರ್ ಎಸೆತದಲ್ಲಿ ಡೆವೊನ್ ಕಾನ್ವೆ ಔಟಾದರು. ಏಳನೇ ಓವರ್‌ನಲ್ಲಿ ಋತುರಾಜ್ ಕೂಡ ಅಕ್ಷರ್‌ಗೆ ವಿಕೆಟ್ ಒಪ್ಪಿಸಿದರು.

ಇದರೊಂದಿಗೆ ಇನಿಂಗ್ಸ್ ಮೇಲೆ ಬಿಗಿಹಿಡಿತ ಸಾಧಿಸುವಲ್ಲಿ ಡೆಲ್ಲಿ ಬೌಲಿಂಗ್ ಪಡೆ ಬಹುತೇಕ ಯಶಸ್ವಿಯಾಯಿತು. ಅಜಿಂಕ್ಯ ರಹಾನೆ (21; 20ಎ) , ಶಿವಂ ದುಬೆ (25; 12ಎ) ಹಾಗೂ ಅಂಬಟಿ ರಾಯುಡು (23; 17ಎ) ಇನಿಂಗ್ಸ್‌ಗೆ ಬಲ ತುಂಬಲು ಪ್ರಯತ್ನಿಸಿದರು.

ಆದರೆ ಮಧ್ಯಮ ಕ್ರಮಾಂಕವನ್ನು ಲಲಿತ್ ಯಾದವ್, ಕುಲದೀಪ್ ಯಾದವ್ ಮತ್ತು ಖಲೀಲ್ ಅಹಮದ್ ಕಾಡಿದರು. ರನ್ ಗಳಿಕೆಗೆ ಕಡಿವಾಣ ಹಾಕಿದರು. ಇದರಿಂದಾಗಿ ತಂಡವು 126 ರನ್‌ಗಳಿಗೆ ಆರು ವಿಕೆಟ್ ಕಳೆದುಕೊಂಡಿತ್ತು. ಈ ಹಂತದಲ್ಲಿ ಕ್ರೀಸ್‌ಗೆ ಬಂದ ಧೋನಿಗೆ ಅಭಿಮಾನಿಗಳು ಹರ್ಷೋದ್ಗಾರಗಳೊಂದಿಗೆ ಸ್ವಾಗತಿಸಿದರು. ಇನ್ನೊಂದೆಡೆ ರವೀಂದ್ರ ಜಡೇಜ ಇದ್ದರು.

ಇವರಿಬ್ಬರ ಚುರುಕಿನ ಆಟದಿಂದಾಗಿ ಕೊನೆಯ 22 ಎಸೆತಗಳಲ್ಲಿ 40 ರನ್‌ಗಳು ಹರಿದುಬರುವಂತಾಯಿತು. ಮಾರ್ಷ್ ಹಾಕಿದ ಕೊನೆಯ ಓವರ್‌ನಲ್ಲಿ ಜಡೇಜ ಹಾಗೂ ಧೋನಿ ಔಟಾದರು.

ಸ್ಕೋರ್ ಕಾರ್ಡ್

ಚೆನ್ನೈ ಸೂಪರ್ ಕಿಂಗ್ಸ್ 8ಕ್ಕೆ167 (20 ಓವರ್‌ಗಳಲ್ಲಿ)
ಋತುರಾಜ್ ಸಿ ಅಮನ್ ಬಿ ಅಕ್ಷರ್ 24 (18ಎ, 4X4)
ಡೆವೊನ್ ಎಲ್‌ಬಿಡಬ್ಲ್ಯು ಬಿ ಅಕ್ಷರ್ 10 (13ಎ, 4X1)
ಅಜಿಂಕ್ಯ ಸಿ ಮತ್ತು ಬಿ ಲಲಿತ್ 21 (20ಎ, 4X2)
ಮೋಯಿನ್ ಸಿ ಮಾರ್ಷ್ ಬಿ ಕುಲದೀಪ್ 7 (12ಎ)
ಶಿವಂ ಸಿ ವಾರ್ನರ್ ಬಿ ಮಾರ್ಷ್ 25 (12ಎ, 6X3)
ರಾಯುಡು ಸಿ ರಿಪಲ್ ಬಿ ಖಲೀಲ್ 23 (17ಎ, 4X1, 6X1)
ಜಡೇಜ ಸಿ ಅಕ್ಷರ್ ಬಿ ಮಾರ್ಷ್ 21 (16ಎ, 4X1, 6X1)
ಧೋನಿ ಸಿ ವಾರ್ನರ್ ಬಿ ಮಾರ್ಷ್ 20 (9ಎ, 4X1, 6X2)
ದೀಪಕ್ ಔಟಾಗದೆ 1 (2ಎ)
ತುಷಾರ್ ಔಟಾಗದೆ 0 (1ಎ)
ಇತರೆ: 15 (ಬೈ 1, ಲೆಗ್‌ಬೈ 4, ವೈಡ್ 10)
ವಿಕೆಟ್ ಪತನ: 1–32 (ಡೆವೊನ್ ಕಾನ್ವೆ; 4.1), 2–49 (ಋತುರಾಜ್ ಗಾಯಕವಾಡ; 6.1), 3–64 (ಮೋಯಿನ್ ಅಲಿ; 9.4), 4–77 (ಅಜಿಂಕ್ಯ ರಹಾನೆ; 11.1), 5–113 (ಶಿವಂ ದುಬೆ; 14.2), 6–126 (ಅಂಬಟಿ ರಾಯುಡು; 16.2), 7–164 (ರವೀಂದ್ರ ಜಡೇಜ; 19.2), 8–166 (ಮಹೇಂದ್ರಸಿಂಗ್ ಧೋನಿ; 19.5)
ಬೌಲಿಂಗ್: ಖಲೀಲ್ ಅಹಮದ್ 4–0–32–1, ಇಶಾಂತ್ ಶರ್ಮಾ 2–0–23–0, ಲಲಿತ್ ಯಾದವ್ 3–0–34–1, ಅಕ್ಷರ್ ಪಟೇಲ್ 4–0–27–2, ಕುಲದೀಪ್ ಯಾದವ್ 4–0–28–1, ಮಿಚೆಲ್ ಮಾರ್ಷ್ 3–0–18–3

ಡೆಲ್ಲಿ ಕ್ಯಾಪಿಟಲ್ಸ್ 8ಕ್ಕೆ 140 (20 ಓವರ್‌ಗಳಲ್ಲಿ)
ವಾರ್ನರ್ ಸಿ ರಹಾನೆ ಬಿ ಚಾಹರ್ 0 (2ಎ)
ಸಾಲ್ಟ್ ಸಿ ರಾಯುಡು ಬಿ ಚಾಹರ್ 17 (11ಎ, 4X1, 6X2)
ಮಾರ್ಷ್ ರನೌಟ್ (ರಹಾನೆ) 5 (4ಎ, 4X1)
ಮನೀಷ್ ಎಲ್‌ಬಿಡಬ್ಲ್ಯು ಬಿ ಪಥಿರಾಣ 27 (29ಎ, 4X1, 6X2)
ರೊಸೊ ಸಿ ಪಥಿರಾಣ ಬಿ ಜಡೇಜ 35 (37ಎ, 4X2, 6X1)
ರಿಪಲ್ ರನೌಟ್ (ಮೋಯಿನ್) 10 (16ಎ), ಅಕ್ಷರ್ ಸಿ ರಹಾನೆ ಬಿ ಪಥಿರಾಣ 21 (12ಎ, 4X2, 6X1)
ಅಮನ್ ಔಟಾಗದೆ 2 (3ಎ)
ಲಲಿತ್ ಬಿ ಪಥಿರಾಣ 12 (5ಎ, 4X3)
ಕುಲದೀಪ್ ಔಟಾಗದೆ 0 (1ಎ)
ಇತರೆ: 11 (ಲೆಗ್‌ಬೈ 6, ವೈಡ್ 5)
ವಿಕೆಟ್ ಪತನ: 1-0 (ಡೇವಿಡ್ ವಾರ್ನರ್, 0.2), 2-20 (ಫಿಲ್ ಸಾಲ್ಟ್, 2.3), 3-25 (ಮಿಚೆಲ್ ಮಾರ್ಷ್, 3.1), 4-84 (ಮನೀಷ್ ಪಾಂಡೆ, 12.6), 5-89 (ರಿಲಿ ರೊಸೊ, 14.3), 6-116 (ಅಕ್ಷರ್ ಪಟೇಲ್, 17.5), 7-125 (ರಿಪಾಲ್ ಪಟೇಲ್, 18.5), 8-140 (ಲಲಿತ್ ಯಾದವ್, 19.5)
ಬೌಲಿಂಗ್: ದೀಪಕ್ ಚಾಹರ್ 3–0–28–2, ತುಷಾರ್ ದೇಶಪಾಂಡೆ 3–0–18–0, ಮಹೀಶ್ ತೀಕ್ಷಣ 2–0–16–0, ರವೀಂದ್ರ ಜಡೇಜ 4–0–19–1, ಮೋಯಿನ್ ಅಲಿ 4–0–16–0, ಮಥೀಷ್ ಪಥಿರಾಣ 4–0–37–3
ಫಲಿತಾಂಶ: ಚೆನ್ನೈ ಸೂಪರ್ ಕಿಂಗ್ಸ್‌ಗೆ 27 ರನ್‌ಗಳ ಜಯ

‘ಗಲ್ಲಿ ಕ್ರಿಕೆಟ್ ಬ್ಯಾಟಿಂಗ್ ನೆನಪಿಸಿದ ಸೂರ್ಯ’

ಮುಂಬೈ (ಪಿಟಿಐ): ಮುಂಬೈ ಇಂಡಿಯನ್ಸ್ ತಂಡದ ಬ್ಯಾಟರ್ ಸೂರ್ಯಕುಮಾರ್ ಯಾದವ್ ಅವರು ಮಂಗಳವಾರದ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ ಅಬ್ಬರಿಸಿದ್ದರು.

35 ಎಸೆತಗಳಲ್ಲಿ 83 ರನ್ ಗಳಿಸಿದ್ದ ಅವರ ಆಟವನ್ನು ವೀಕ್ಷಕ ವಿವರಣೆಕಾರ ಸುನಿಲ್ ಗಾವಸ್ಕರ್ ಶ್ಲಾಘಿಸಿದ್ದಾರೆ.

’ಆರ್‌ಸಿಬಿ ಬೌಲರ್‌ಗಳ ಎಸೆತಗಳನ್ನು ಸೂರ್ಯ ಲೀಲಾಜಾಲವಾಗಿ ಆಡಿದರು. ಗಲ್ಲಿ ಕ್ರಿಕೆಟ್‌ನಲ್ಲಿ ಬೌಲಿಂಗ್ ಪುಡಿಗಟ್ಟುವ ಮಾದರಿಯಲ್ಲಿ ಅವರ ಆಟವಿತ್ತು‘ ಎಂದು ಗಾವಸ್ಕರ್ ಸ್ಟಾರ್ ಸ್ಪೋರ್ಟ್ ಕ್ರಿಕೆಟ್ ಲೈವ್‌ನಲ್ಲಿ ವಿಶ್ಲೇಷಿಸಿದ್ದಾರೆ.

’ಆರ್‌ಸಿಬಿ ಎದುರಿನ ಪಂದ್ಯದಲ್ಲಿ ಸೂರ್ಯ ಮೊದಲಿಗೆ ಲಾಂಗ್ ಆನ್ ಹಾಗೂ ಲಾಂಗ್ ಆಫ್ ಕ್ಷೇತ್ರಗಳಿಗೆ ಚೆಂಡನ್ನು ಹೊಡೆದರು. ಪಂದ್ಯ ಮುಂದುವರಿದಂತೆ ಮೈದಾನದ ಎಲ್ಲ ಭಾಗಗಳಿಗೂ ಚೆಂಡನ್ನು ಹೊಡೆದಟ್ಟಿದರು. ಸೂರ್ಯ ಕೈ ಚಲನೆ ಚುರುಕು ಮತ್ತು ಶಕ್ತಿಯುತವಾಗಿದೆ’ ಎಂದರು.

ಮುಂಬೈ ತಂಡದ ಸೂರ್ಯಕುಮಾರ್ ಯಾದವ್ –ಎಎಫ್‌ಪಿ ಚಿತ್ರ

ಕೋಲ್ಕತ್ತಕ್ಕೆ ರಾಜಸ್ಥಾನ ಸವಾಲು

ಈಡನ್ ಅಂಗಳದಲ್ಲಿ ನಿತೀಶ್–ಸಂಜು ಪಡೆಗಳ ಹಣಾಹಣಿ

ಕೋಲ್ಕತ್ತ (ಪಿಟಿಐ): ಈಡನ್ ಗಾರ್ಡನ್ ಕ್ರೀಡಾಂಗಣದಲ್ಲಿ ಗುರುವಾರ ಕೋಲ್ಕತ್ತ ನೈಟ್ ರೈಡರ್ಸ್ ಮತ್ತು ರಾಜಸ್ಥಾನ ರಾಯಲ್ಸ್ ತಂಡಗಳು ಮುಖಾಮುಖಿಯಾಗಲಿವೆ.

ಪ್ಲೇ ಆಫ್ ಹಂತ ಪ್ರವೇಶಿಸುವ ಹಾದಿಯಲ್ಲಿ ಉಭಯ ತಂಡಗಳಿಗೂ ಈ ಪಂದ್ಯದ ಗೆಲುವು ಮಹತ್ವದ್ದಾಗಿದೆ. ಆದ್ದರಿಂದ ರೋಚಕ ಹಣಾಹಣಿ ನಡೆಯುವ ನಿರೀಕ್ಷೆ ಇದೆ.

ರಾಜಸ್ಥಾನ ತಂಡವು ಐದು ಹಾಗೂ ಕೋಲ್ಕತ್ತ ತಂಡವು ಆರನೇ ಸ್ಥಾನದಲ್ಲಿವೆ. ಉಭಯ ತಂಡಗಳ ಖಾತೆಯಲ್ಲಿಯೂ ತಲಾ ಹತ್ತು ಅಂಕ ಗಳಿವೆ. ಆದರೆ, ರಾಜಸ್ಥಾನ ತಂಡವು ನಿವ್ವಳ ರನ್‌ರೇಟ್‌ನಲ್ಲಿ ಸ್ವಲ್ಪ ಮುಂದೆ ಇದೆ. ಎರಡೂ ತಂಡಗಳಿಗೆ ಇನ್ನೂ ತಲಾ ಮೂರು ಪಂದ್ಯಗಳಷ್ಟೇ ಉಳಿದಿವೆ. ಇಷ್ಟೂ ಪಂದ್ಯಗಳಲ್ಲಿ ಗೆಲ್ಲುವ ತಂಡಕ್ಕೆ ನಾಲ್ಕರ ಘಟ್ಟ ಪ್ರವೇಶದ ಸಾಧ್ಯತೆ ಇದೆ.

ಇದರಿಂದಾಗಿ ಈ ಪಂದ್ಯವು ಮಹತ್ವದ್ದಾಗಿದೆ. ಕೆಕೆಆರ್ ತಂಡವು ಕಳೆದೆರಡು ಪಂದ್ಯಗಳಲ್ಲಿ ಸತತ ಜಯ ದಾಖಲಿಸಿದೆ. ಮಧ್ಯಮ ಕ್ರಮಾಂಕದಲ್ಲಿ ರಿಂಕು ಸಿಂಗ್, ನಾಯಕ ನಿತೀಶ್ ರಾಣಾ ಅವರು ಗೆಲುವಿಗೆ ತಮ್ಮ ಕಾಣಿಕೆಯನ್ನು ನೀಡುವಲ್ಲಿ ಸಮರ್ಥರಾಗಿದ್ದಾರೆ.

ಆರಂಭಿಕ ಜೋಡಿ ಜೇಸನ್ ರಾಯ್ ಹಾಗೂ ಗುರ್ಬಾಜ್ ಲಯಕ್ಕೆ ಮರಳುವ ಅಗತ್ಯವಿದೆ. ವೆಂಕಟೇಶ್ ಅಯ್ಯರ್ ಕೂಡ ತಮ್ಮ ನೈಜ ಆಟವಾಡಿದರೆ ತಂಡದ ಬ್ಯಾಟಿಂಗ್ ಬಲ ಹೆಚ್ಚಲಿದೆ.

ರಾಜಸ್ಥಾನ ರಾಯಲ್ಸ್ ತಂಡದ ಯಶಸ್ವಿ ಜೈಸ್ವಾಲ್ –ಎಎಫ್‌ಪಿ ಚಿತ್ರ

ಬೌಲಿಂಗ್ ವಿಭಾಗವೂ ಚೆನ್ನಾಗಿದೆ. ಸ್ಪಿನ್ನರ್ ವರುಣ್ ಚಕ್ರವರ್ತಿ, ಸುಯಶ್ ಶರ್ಮಾ, ಹರ್ಷಿತ್ ರಾಣಾ, ಮಧ್ಯಮ ವೇಗಿ ಶಾರ್ದೂಲ್ ಠಾಕೂರ್ ಎದುರಾಳಿ ಬ್ಯಾಟರ್‌ಗಳಿಗೆ ತಡೆ ಯೊಡ್ಡುವ ಸಮರ್ಥರಾಗಿದ್ದಾರೆ. ಈ ಋತುವಿನಲ್ಲಿ ಉಭಯ ತಂಡಗಳೂ ಇದೇ ಮೊದಲ ಸಲ ಮುಖಾಮುಖಿಯಾಗುತ್ತಿವೆ.

ಆದರೆ ರಾಜಸ್ಥಾನ ತಂಡವು ತನ್ನ ಕಳೆದ ಮೂರು ಪಂದ್ಯಗಳಲ್ಲಿಯೂ ಸತತ ಸೋಲು ಅನುಭವಿಸಿದೆ.

ಆರಂಭಿಕ ಜೋಡಿ ಯಶಸ್ವಿ ಜೈಸ್ವಾಲ್, ಜೊಸ್ ಬಟ್ಲರ್ ಉತ್ತಮ ಜೊತೆಯಾಟಗಳನ್ನು ದಾಖಲಿಸಿದ್ದಾರೆ. ನಾಯಕ ಸಂಜು ಸ್ಯಾಮ್ಸನ್ ಕೂಡ ಕಳೆದ ಪಂದ್ಯದಲ್ಲಿ ಅರ್ಧಶತಕ ಹೊಡೆದು ಲಯಕ್ಕೆ ಮರಳಿದ್ದಾರೆ. ಇದರಿಂದಾಗಿ ಬ್ಯಾಟಿಂಗ್‌ನಲ್ಲಿ ಅಷ್ಟೇನೂ ಚಿಂತೆಯಿಲ್ಲ. ಆದರೆ, ಬೌಲಿಂಗ್ ವಿಭಾಗದಲ್ಲಿ ಸ್ಥಿರತೆಯ ಕೊರತೆ ಎದ್ದುಕಾಣುತ್ತಿದೆ.

200 ರನ್‌ಗಳಿಗಿಂತಲೂ ಹೆಚ್ಚಿನ ಮೊತ್ತವನ್ನು ರಕ್ಷಿಸಿಕೊಳ್ಳುವಲ್ಲಿಯೂ ಬೌಲರ್‌ಗಳು ವಿಫಲರಾಗಿದ್ದಾರೆ. ಯಜುವೇಂದ್ರ ಚಾಹಲ್ ಹಾಗೂ ಕುಲದೀಪ್ ಯಾದವ್ ಅವರ ಸ್ಪಿನ್ ಬೌಲಿಂಗ್ ಪರಿಣಾಮಕಾರಿಯಾಗಿದೆ. ಆದರೆ ಉಳಿದ ಬೌಲರ್‌ಗಳಿಂದ ಅಂತಹ ಆಟ ಮೂಡಿಬಂದಿಲ್ಲ. ಕೆಲವು ದಿನಗಳ ಹಿಂದಷ್ಟೇ ಅಗ್ರ ಎರಡರಲ್ಲಿದ್ದ ತಂಡವು ಕೆಳಕ್ಕೆ ಜಾರಿದೆ. ಈಗ ಪುಟಿದೇಳಲು ಹರಸಾಹಸಪಡುತ್ತಿದೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ವಾಹಿನಿ, ಜಿಯೊ ಸಿನೆಮಾ ಆ್ಯಪ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಗುಜರಾತ್	11	8	3	0	16	0.951
ಚೆನ್ನೈ	12	7	4	1	15	0.493
ಮುಂಬೈ	11	6	5	0	12	-0.255
ಲಖನೌ	11	5	5	1	11	0.294
ರಾಜಸ್ಥಾನ	11	5	6	0	10	0.388
ಕೋಲ್ಕತ್ತ	11	5	6	0	10	-0.079
ಬೆಂಗಳೂರು	11	5	6	0	10	-0.345
ಪಂಜಾಬ್	11	5	6	0	10	-0.441
ಹೈದರಾಬಾದ್	10	4	6	0	8	-0.472
ಡೆಲ್ಲಿ	11	4	7	0	8	-0.605

ಬುಧವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)

ಆಟಗಾರ	ತಂಡ	ವಿಕೆಟ್
ಶಮಿ	ಗುಜರಾತ್	19

ಆರೆಂಜ್ ಕ್ಯಾಪ್ (ಹೆಚ್ಚು ರನ್)

ಆಟಗಾರ	ತಂಡ	ರನ್
ಡುಪ್ಲೆಸಿ	ಆರ್‌ಸಿಬಿ	576

ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಆಟಗಾರ ರಿಂಕು ಸಿಂಗ್ –ಪಿಟಿಐ ಚಿತ್ರ

ಜೀವಕ್ಕೆ ಅಪಾಯ: ಇಮ್ರಾನ್ ಆತಂಕ

ಪಾಕಿಸ್ತಾನದಲ್ಲಿ ಭುಗಿಲೆದ್ದ ಹಿಂಸಾಚಾರ; ಸಾವಿರಕ್ಕೂ ಹೆಚ್ಚು ಜನರ ಬಂಧನ

ಇಸ್ಲಾಮಾಬಾದ್ / ಲಾಹೋರ್ (ಪಿಟಿಐ): ಭ್ರಷ್ಟಾಚಾರ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರು ತಮ್ಮ ಜೀವಕ್ಕೆ ಅಪಾಯವಿದೆ ಎಂದು ರಾಷ್ಟ್ರೀಯ ಭಯೋತ್ಪಾದನಾ ವಿರೋಧಿ ನ್ಯಾಯಾಲಯಕ್ಕೆ ಬುಧವಾರ ತಿಳಿಸಿದ್ದಾರೆ.

‘ವಿಚಾರಣೆ ವೇಳೆ ಇಮ್ರಾನ್ ಖಾನ್ ಅವರು, ಪ್ರಧಾನಿ ಶೆಹಬಾಜ್ ಷರೀಫ್ ಅವರ ವಿರುದ್ಧದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಪ್ರಮುಖ ಸಾಕ್ಷಿಯಾಗಿದ್ದ ಮಕ್ಸೂದ್ ಚಪ್ರಾಸಿಗೆ ಆದ ಗತಿಯೇ ತನಗೂ ಆಗಬಹುದೆಂಬ ಆತಂಕ ವ್ಯಕ್ತಪಡಿಸಿದ್ದಾರೆ’ ಎಂದು ‘ದಿ ಎಕ್ಸ್‌ಪ್ರೆಸ್ ಟ್ರಿಬ್ಯೂನ್’ ವರದಿ ಮಾಡಿದೆ. ಮಕ್ಸೂದ್ ಚಪ್ರಾಸಿ ಕಳೆದ ವರ್ಷ ಹೃದಯ ಸ್ತಂಭನದಿಂದ ಮೃತಪಟ್ಟಿದ್ದರು. ಆದರೆ, ಮಕ್ಸೂದ್ ಅವರ ಸಾವು ನಿಗೂಢವಾಗಿ ಉಳಿದಿದೆ ಎನ್ನಲಾಗಿದೆ.

ಎನ್‌ಎಬಿ ವಶಕ್ಕೆ ಒಪ್ಪಿಸುವ ಮೊದಲು, ಭ್ರಷ್ಟಾಚಾರ ವಿರೋಧಿ ನ್ಯಾಯಾಲಯ ಸಂಖ್ಯೆ 1ರಲ್ಲಿ ನ್ಯಾಯಾಧೀಶ ಮುಹಮ್ಮದ್ ಬಷೀರ್ ಅವರ ಎದುರು ಖಾನ್ ಅವರು ‘ಕಳೆದ 24 ತಾಸುಗಳಿಂದ ನಾನು ಶೌಚಾಲಯಕ್ಕೂ ಹೋಗಿಲ್ಲ. ಅವರು ಇಂಜೆಕ್ಷನ್ ಕೊಡುತ್ತಾರೆ ಮತ್ತು ನಾನು ನಿಧಾನವಾಗಿ ಸಾಯಬೇಕಾಗುತ್ತದೆ’ ಎಂದು ಆತಂಕ ತೋಡಿಕೊಂಡರು. ತಮ್ಮ ಖಾಸಗಿ ವೈದ್ಯ ಡಾ.ಫೈಸಲ್ ಸುಲ್ತಾನ್ ಅವರನ್ನು ಸಂಪರ್ಕಿಸಲು ಅನುಮತಿ ನೀಡುವಂತೆಯೂ ಮನವಿ ಮಾಡಿದರು.

ಅಲ್‌-ಖಾದಿರ್ ಟ್ರಸ್ಟ್ ಹೆಸರಿನಲ್ಲಿ ರಾಷ್ಟ್ರದ ಖಜಾನೆಯ ಸುಮಾರು 5,000 ಕೋಟಿ ಪಾಕ್ ರೂಪಾಯಿ ಲೂಟಿ ಮಾಡಿದ ಪ್ರಕರಣದ ತನಿಖೆಗಾಗಿ ಖಾನ್ ಅವರನ್ನು 14 ದಿನಗಳು ವಶಕ್ಕೆ ನೀಡುವಂತೆ ಎನ್‌ಎಬಿ ಪರ ವಕೀಲರು ಮನವಿ ಮಾಡಿದರು. ಇದನ್ನು ವಿರೋಧಿಸಿದ ಖಾನ್ ಅವರ ವಕೀಲರು, ಆರೋಪಗಳು ಸುಳ್ಳು. ತಕ್ಷಣವೇ ಖಾನ್ ಅವರನ್ನು ಬಿಡುಗಡೆ ಮಾಡುವಂತೆ ನ್ಯಾಯಾಧೀಶರಿಗೆ ಮನವಿ ಮಾಡಿದರು. ವಾದ ಆಲಿಸಿದ ನಂತರ ನ್ಯಾಯಾಲಯ, ಖಾನ್ ಅವರನ್ನು ಎಂಟು ದಿನಗಳು ಎನ್‌ಎಬಿ ವಶಕ್ಕೆ ಒಪ್ಪಿಸಿತು.

ಖಾನ್ ಬಂಧನ ಎತ್ತಿಹಿಡಿದಿರುವ ಹೈಕೋರ್ಟ್ ಆದೇಶ ಪ್ರಶ್ನಿಸಿ ಖಾನ್ ಅವರ ಪಿಟಿಐ ಪಕ್ಷವು ಬುಧವಾರ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದೆ.

ಇಸ್ಲಾಮಾಬಾದ್‌ನ ಪೊಲೀಸ್ ಪ್ರಧಾನ ಕಚೇರಿ ಹೊರಗೆ ಇಮ್ರಾನ್ ಖಾನ್ ಅವರ ಪಿಟಿಐ ಪಕ್ಷದ ಕಾರ್ಯಕರ್ತರು ಮತ್ತು ಪೊಲೀಸರ ನಡುವೆ ಬುಧವಾರ ಘರ್ಷಣೆ ನಡೆಯಿತು– ಎಎಫ್‌ಪಿ ಚಿತ್ರ

ಮುಂದುವರಿದ ಹಿಂಸಾಚಾರ, ಪಿಟಿಐ ನಾಯಕರ ಬಂಧನ: ಇಮ್ರಾನ್ ಖಾನ್ ಬಂಧನದ ನಂತರ ಪಾಕಿಸ್ತಾನ ಹಿಂಸಾತ್ಮಕ ಪ್ರತಿಭಟನೆಗಳಿಗೆ ಸಾಕ್ಷಿಯಾಗಿದೆ. ಘರ್ಷಣೆಯಿಂದ ಕಳೆದ 24 ತಾಸುಗಳಲ್ಲಿ ಏಳು ಜನರು ಮೃತಪಟ್ಟಿದ್ದು, 300ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಪಿಟಿಐನ 1,150 ಕಾರ್ಯಕರ್ತರನ್ನು ಪೊಲೀಸರು ಬಂಧಿಸಿದ್ದಾರೆ.

ಪಂಜಾಬ್ ಪ್ರಾಂತ್ಯವೊಂದರಲ್ಲೇ ಕನಿಷ್ಠ 14 ಸರ್ಕಾರಿ ಕಟ್ಟಡಗಳಿಗೆ ಮತ್ತು 21 ಪೊಲೀಸ್ ವಾಹನಗಳಿಗೆ ಹಾಗೂ ಸರ್ಕಾರಿ ನಿಯಂತ್ರಣದ ‘ರೇಡಿಯೊ ಪಾಕಿಸ್ತಾನ’ ಕಟ್ಟಡಕ್ಕೆ ಪ್ರತಿಭಟನಕಾರರು ಬೆಂಕಿ ಹಚ್ಚಿದ್ದಾರೆ. ಪಾಕಿಸ್ತಾನದ ಅಸೋಸಿಯೇಟೆಡ್ ಪ್ರೆಸ್ ಕಚೇರಿಯು ಧ್ವಂಸಗೊಂಡಿದೆ.

ಪಿಟಿಐ ಪ್ರಧಾನ ಕಾರ್ಯದರ್ಶಿ ಅಸಾದ್ ಉಮರ್, ಉಪಾಧ್ಯಕ್ಷ ಶಾ ಮಹಮೂದ್ ಖುರೇಷಿ, ಪಂಜಾಬ್ ಮಾಜಿ ಗವರ್ನರ್ ಉಮರ್ ಸರ್ಫರಾಜ್ ಚೀಮಾ ಅವರನ್ನು ಬುಧವಾರ ಬಂಧಿಸಲಾಗಿದೆ. ಪಂಜಾಬ್, ಖೈಬರ್ ಪಖ್ತುಂಖ್ವಾ, ಬಲೂಚಿಸ್ತಾನದಲ್ಲಿ ಭದ್ರತೆಗೆ ಸೇನೆ ನಿಯೋಜಿಸಲಾಗಿದೆ. ಅನಿರ್ದಿಷ್ಟಾವಧಿಗೆ ಇಂಟರ್‌ನೆಟ್ ಸ್ಥಗಿತಗೊಳಿಸಲಾಗಿದೆ.

ಹಣ ಅಕ್ರಮ ವರ್ಗಾವಣೆ: ಪಾಕ್ ಪ್ರಧಾನಿ, ಪುತ್ರ ದೋಷಮುಕ್ತ

ಇಸ್ಲಾಮಾದ್ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ಮತ್ತು ಅವರ ಪುತ್ರ ಹಮ್ಜ ಅವರನ್ನು ರಾಷ್ಟ್ರೀಯ ಭ್ರಷ್ಟಾಚಾರ ನಿಗ್ರಹ ದಳ (ಎನ್‌ಎಬಿ) ಆರೋಪ ಮುಕ್ತಗೊಳಿಸಿರುವುದಾಗಿ ಬುಧವಾರ ಮಾಧ್ಯಮ ವರದಿ ಹೇಳಿದೆ.

ಪ್ರಕರಣದ ಮರು ತನಿಖೆ ನಡೆಸಿದ ನಂತರ ಎನ್‌ಎಬಿಯು, ತಂದೆ– ಮಗ ಇಬ್ಬರೂ ಈ ಪ್ರಕರಣದಲ್ಲಿ ‘ಮುಗ್ಧರು’. ಈ ಪ್ರಕರಣದಲ್ಲಿ ಪ್ರಧಾನಿ ಮತ್ತು ಅವರ ಕುಟುಂಬದವರು ಭಾಗಿಯಾಗಿರುವುದಕ್ಕೆ ಯಾವುದೇ ಸಾಕ್ಷಿ ಇಲ್ಲವೆಂದು ಎನ್‌ಎಬಿಯು, ಭ್ರಷ್ಟಾಚಾರ ವಿರೋಧಿ ನ್ಯಾಯಾಲಯಕ್ಕೆ ಸೋಮವಾರ ಸಲ್ಲಿಸಿದ ಮಧ್ಯಂತರ ವರದಿಯಲ್ಲಿ ಹೇಳಿದೆ ಎಂದೂ ‘ಸಮಾ ಟಿ.ವಿ’ ತನ್ನ ವೆಬ್‌ಸೈಟ್‌ನಲ್ಲಿ ವರದಿ ಮಾಡಿದೆ.

ಪ್ರಧಾನಿ ಶೆಹಬಾಜ್ ಮತ್ತು ಅವರ ಪತ್ನಿ ನುಸ್ರತ್ ಶೆಹಬಾಜ್, ಪುತ್ರ ಹಮ್ಜ ಶೆಹಬಾಜ್ ಹಾಗೂ ಇತರರು ಹಣ ಅಕ್ರಮ ವರ್ಗಾವಣೆಯಲ್ಲಿ ಭಾಗಿಯಾಗಿರುವುದಾಗಿ ಆರೋಪಿಸಿ, ಭ್ರಷ್ಟಾಚಾರ ನಿಗ್ರಹ ದಳವು 2020ರಲ್ಲಿ ಪ್ರಕರಣ ದಾಖಲಿಸಿತ್ತು.

ಈ ಪ್ರಕರಣದ ವಿಚಾರಣೆಯನ್ನು ನ್ಯಾಯಾಧೀಶ ಖಮರ್ ಉಲ್ ಜಮಾನ್ ನಡೆಸುತ್ತಿದ್ದು, ಬುಧವಾರ ನಡೆದ ವಿಚಾರಣೆ ವೇಳೆ ಹಮ್ಜ ಶೆಹಬಾಜ್ ಅವರು ವೈದ್ಯಕೀಯ ಕಾರಣಗಳಿಗಾಗಿ ಖುದ್ದು ಹಾಜರಿಗೆ ವಿನಾಯಿತಿ ಕೋರಿ ಅರ್ಜಿ ಸಲ್ಲಿಸಿದರು. ಇದನ್ನು ಕೋರ್ಟ್ ಮಾನ್ಯ ಮಾಡಿತು.

ನ್ಯಾಯಾಲಯವು ವಿಚಾರಣೆಯನ್ನು ಮೇ 24ರವರೆಗೆ ಮುಂದೂಡಿತು. ಪ್ರಧಾನಿಯ ಅಳಿಯ ಹರೂನ್ ಯೂಸುಫ್ ಅಜೀಜ್ ಮತ್ತು ಸಹ ಆರೋಪಿ ಸೈಯದ್ ಮುಹಮ್ಮದ್ ತಾಹಿರ್ ನಖ್ವಿ ಅವರಿಗೆ ಮೇ 24ರವರೆಗೆ ಮಧ್ಯಂತರ ಜಾಮೀನು ವಿಸ್ತರಿಸಿತು.

ಸಂಕ್ಷಿಪ್ತ ಸುದ್ದಿ

ಸೈಬರ್ ಅಪರಾಧ ವಿರುದ್ಧ ಹೋರಾಟ

ಲಬುವಾನ್ ಬಜೊ, ಇಂಡೋನೇಷ್ಯಾ (ಎಪಿ): ಗಡಿಯಲ್ಲಿ ಕಾನೂನು ಸುವ್ಯವಸ್ಥೆಯನ್ನು ಬಿಗಿಗೊಳಿಸಲು ಮತ್ತು ಸಾರ್ವಜನಿಕ ಶೈಕ್ಷಣಿಕ ವ್ಯವಸ್ಥೆಯನ್ನು ಸುಧಾರಿಸಲು ಆಸಿಯಾನ್ ರಾಷ್ಟ್ರಗಳ (ಆಗ್ನೇಯ ಏಷ್ಯಾ ರಾಷ್ಟ್ರಗಳ ಒಕ್ಕೂಟ) ನಾಯಕರು ಒಪ್ಪಿಗೆ ನೀಡಿದ್ದಾರೆ ಎಂದು ಗುರುವಾರ ನಡೆಯಲಿರುವ ಪ್ರಾದೇಶಿಕ ಶೃಂಗದಲ್ಲಿ ಅಂಗೀಕರಿಸಲಿರುವ ಕರಡು ನಿರ್ಣಯದಲ್ಲಿ ತಿಳಿಸಲಾಗಿದೆ.

ಆಗ್ನೇಯ ಏಷ್ಯಾ ದೇಶಗಳ ಕಾರ್ಮಿಕರನ್ನು ಅಪಹರಿಸಿ ಬೇರೆ ದೇಶಗಳಿಗೆ ಕೊಂಡೊಯ್ದು ಅಲ್ಲಿ ಆನ್‌ಲೈನ್ ವಂಚನೆಯಲ್ಲಿ ತೊಡಗುವಂತೆ ಒತ್ತಾಯಿಸುವ ದಂಧೆಯ ವಿರುದ್ಧ ಹೋರಾಡುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಅದರಲ್ಲಿ ತಿಳಿಸಲಾಗಿದೆ.

ಇಲ್ಲಿ ನಡೆದ ಸಮಾವೇಶದಲ್ಲಿ ಭಾಗಿಯಾಗಿದ್ದ ಆಸಿಯಾನ್ ನಾಯಕರು, ಇಲ್ಲಿಂದ ಅಪಹರಿಸುವ ವ್ಯಕ್ತಿಗಳನ್ನು ತಂತ್ರಜ್ಞಾನದ ದುರ್ಬಳಕೆ ಉದ್ದೇಶಕ್ಕೆ ಬಳಕೆ ಮಾಡಿಕೊಳ್ಳುತ್ತಿರುವ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದರು.

ಅಮೆರಿಕ ಭೇಟಿ: ಕೋವಿಡ್ ಲಸಿಕೆ ಕಡ್ಡಾಯ ಇಲ್ಲ

ವಾಷಿಂಗ್ಟನ್ (ರಾಯಿಟರ್ಸ್): ಅಮೆರಿಕಕ್ಕೆ ಬರಲು ಬಯಸುವ ವಿದೇಶಿಯರು ಕಡ್ಡಾಯವಾಗಿ ಕೋವಿಡ್ ಲಸಿಕೆ ಪಡೆದಿರಬೇಕು ಎಂಬ ಆದೇಶವನ್ನು ಅಧ್ಯಕ್ಷ ಜೋ ಬೈಡನ್ ಅವರು ಮಂಗಳವಾರ ಹಿಂಪಡೆದಿದ್ದು ಮೇ 12ರಿಂದ ಇದು ಜಾರಿಗೆ ಬರಲಿದೆ.

ಕೋವಿಡ್ ತುರ್ತುಪರಿಸ್ಥಿತಿಯನ್ನು 2021ರ ಸೆಪ್ಟೆಂಬರ್‌ನಲ್ಲಿ ಬೈಡನ್ ಅವರು ಜಾರಿಗೊಳಿಸಿದ್ದರು. ಈ ನಿಯಮವು ಅಮೆರಿಕದ ಸರ್ಕಾರಿ ಉದ್ಯೋಗಿಗಳು ಮತ್ತು ಗುತ್ತಿಗೆ ನೌಕರರಿಗೂ ಅನ್ವಯಿಸಿತ್ತು. ಅವರಿಗೂ ಕೂಡ ಈ ವಿನಾಯಿತಿ ನೀಡಲಾಗಿದೆ.

ಜೂನ್‌ನಲ್ಲಿ ಪ್ರಧಾನಿ ಮೋದಿ ಅಮೆರಿಕ ಭೇಟಿ

ವಾಷಿಂಗ್ಟನ್ (ಪಿಟಿಐ): ‘ಪ್ರಧಾನಿ ನರೇಂದ್ರ ಮೋದಿ ಅವರು ಜೂನ್ 22ರಂದು ಅಮೆರಿಕಕ್ಕೆ ಅಧಿಕೃತ ಭೇಟಿ ನೀಡಲಿದ್ದಾರೆ’ ಎಂದು ಶ್ವೇತಭವನ ಬುಧವಾರ ತಿಳಿಸಿದೆ. ಈ ವೇಳೆ ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ಮೋದಿ ಅವರಿಗೆ ಔತಣಕೂಟ ಆಯೋಜಿಸಲಿದ್ದಾರೆ ಎಂದೂ ಅದು ತಿಳಿಸಿದೆ.

‘ಪ್ರಧಾನಿ ಮೋದಿ ಹಾಗೂ ಅಧ್ಯಕ್ಷ ಬೈಡನ್ ಅವರ ಭೇಟಿಯು ಭಾರತ ಮತ್ತು ಅಮೆರಿಕದ ನಡುವಿನ ನಿಕಟ ಸಂಬಂಧವನ್ನು ಮತ್ತಷ್ಟು ಗಟ್ಟಿಗೊಳಿಸಲಿದೆ’ ಎಂದು ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಕೆರಿನ್ ಜೀನ್ ಪೆರ್ರೆ ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಹೆಚ್ಚುತ್ತಿರುವ ಅವಧಿಪೂರ್ವ ಜನನ ಪ್ರಮಾಣ

ಕೇಪ್‌ಟೌನ್ (ಪಿಟಿಐ): 2020ರಲ್ಲಿ ಅಂದಾಜು 1.34 ಕೋಟಿ ಶಿಶುಗಳು ಅವಧಿಗೆ ಮೊದಲೇ ಜನಿಸಿದ್ದು, ಈ ಪೈಕಿ ಶೇ 45ರಷ್ಟು ಮಕ್ಕಳು ಭಾರತ, ಚೀನಾ, ಪಾಕಿಸ್ತಾನ, ನೈಜೀರಿಯಾ ಮತ್ತು ಇಥಿಯೋಪಿಯಾದಲ್ಲಿ ಜನಿಸಿವೆ ಎಂದು ವಿಶ್ವ ಆರೋಗ್ಯ ಸಂಸ್ಥೆ, ಯುನಿಸೆಫ್ ಬುಧವಾರ ಬಿಡುಗಡೆ ಮಾಡಿದ ವರದಿಯಲ್ಲಿ ತಿಳಿಸಿದೆ.

46 ದೇಶಗಳ 140ಕ್ಕೂ ಹೆಚ್ಚು ಸ್ವಯಂಸೇವಕರು ‘ಬಾರ್ನ್ ಟೂ ಸೂನ್: ಡಿಕೇಡ್ ಆಫ್ ಆ್ಯಕ್ಷನ್ ಆನ್ ಪ್ರೀ ಟರ್ಮ್ ಬರ್ತ್’ ಎಂಬ ಶೀರ್ಷಿಕೆಯಡಿ ವರದಿ ಸಿದ್ಧಪಡಿಸಿದೆ. ಅದನ್ನು ವಿಶ್ವ ಆರೋಗ್ಯ ಸಂಸ್ಥೆ, ಯುನಿಸೆಫ್ ಜೊತೆಗೆ ಮಹಿಳೆಯರು, ಮಕ್ಕಳು ಮತ್ತು ಯುವಕರಿಗಾಗಿ ಇರುವ ವಿಶ್ವದ ಅತಿದೊಡ್ಡ ಒಕ್ಕೂಟವಾದ ಪಿಎಂಎನ್‌ಸಿಎಚ್‌ಗೆ ಕಳುಹಿಸಲಾಗಿದೆ.

2010ರಲ್ಲಿ ಶೇ 9.8ರಷ್ಟು ಇದ್ದ ಜಾಗತಿಕ ಪ್ರಸವಪೂರ್ವ ಜನನ ಪ್ರಮಾಣವು 2020ರಲ್ಲಿ ಶೇ 9.9 ರಷ್ಟಾಗಿದೆ. ಅಂದಾಜು 1 ಕೋಟಿ 34 ಲಕ್ಷ ಶಿಶುಗಳು 2020ರಲ್ಲಿ ಅವಧಿಗೂ ಮೊದಲೇ ಜನಿಸಿವೆ. ಸುಮಾರು 10 ಲಕ್ಷ ಶಿಶುಗಳು ಪ್ರಸವಪೂರ್ವ ತೊಡಕುಗಳಿಂದ ಸಾಯುತ್ತಿವೆ ಎಂದು ವರದಿ ತಿಳಿಸಿದೆ.

2020ರಲ್ಲಿ ಬಾಂಗ್ಲಾದೇಶದಲ್ಲಿ ಅತಿಹೆಚ್ಚು ಶೇ 16.2ರಷ್ಟು ಅವಧಿಪೂರ್ವ ಜನನ ಪ್ರಮಾಣವಿದ್ದರೆ, ಮಲಾವಿಯಲ್ಲಿ ಶೇ 14.5ರಷ್ಟು, ಪಾಕಿಸ್ತಾನದಲ್ಲಿ ಶೇ 14.4ರಷ್ಟು ಇತ್ತು. ಅಭಿವೃದ್ಧಿ ಹೊಂದಿದ ದೇಶಗಳಾದ ಗ್ರೀಸ್‌ನಲ್ಲಿ ಶೇ 11.6, ಅಮೆರಿಕದಲ್ಲಿ ಶೇ 10ರಷ್ಟು ಇದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಬ್ರಿಟನ್‌ನಲ್ಲಿ ಮಾದಕವಸ್ತುಗಳ ಕಳ್ಳಸಾಗಣೆ ಪ್ರಕರಣ

ಭಾರತ ಮೂಲದ ಮೂವರಿಗೆ ಜೈಲು ಶಿಕ್ಷೆ

ಲಂಡನ್ (ಪಿಟಿಐ): ಸಂಘಟಿತ ಅಪರಾಧಗಳಲ್ಲಿ ತೊಡಗುತ್ತಿದ್ದ, ಭಾರತ ಮೂಲದ ಮೂವರು ಸೇರಿದಂತೆ ನಾಲ್ಕು ಮಂದಿಗೆ ಬ್ರಿಟನ್‌ನ ನ್ಯಾಯಾಲಯವು ಕೆನಡದಿಂದ ಬ್ರಿಟನ್‌ಗೆ ಮಾದಕವಸ್ತು ಕಳ್ಳಸಾಗಣೆ ಮಾಡಿದ ಪ್ರಕರಣದಲ್ಲಿ 15 ವರ್ಷ ಜೈಲು ಶಿಕ್ಷೆ ವಿಧಿಸಿ ತೀರ್ಪು ನೀಡಿದೆ.

ಕುರಾನ್ ಗಿಲ್, ಜಗ್ ಸಿಂಗ್ ಮತ್ತು ಗೋವಿಂದ್ ಬಹಿಯಾ ಶಿಕ್ಷೆಗೊಳಗಾಗದವರು. ಇವರು ಸಂಘಟಿತ ಅಪರಾಧಗಳಲ್ಲಿ ತೊಡಗುತ್ತಿದ್ದ ಗುಂಪೊಂದರ ಸದಸ್ಯರಾಗಿದ್ದರು. ಫೆಬ್ರುವರಿಯಲ್ಲಿ ತಮ್ಮ ಸಹಚರ ಗ್ರೆಗೊರಿ ಬ್ಲಾಕ್‌ಲಾಕ್ ನೊಡನೆ ಎರಡು ದೊಡ್ಡ ಪೆಟ್ಟಿಗೆಗಳಲ್ಲಿ ಗಾಂಜಾ ಕಳ್ಳಸಾಗಣೆ ಮಾಡುತ್ತಿದ್ದ ವೇಳೆ ಹೀಥ್ರೂ ವಿಮಾನ ನಿಲ್ದಾಣದಲ್ಲಿ ಬ್ರಿಟನ್‌ನ ಗಡಿ ಭದ್ರತಾ ಪಡೆಯ ಕೈಗೆ ಸಿಕ್ಕಿಬಿದ್ದಿದ್ದರು.

ಆರೋಪ ಸಾಬೀತಾಗಿ ಕಳೆದ ತಿಂಗಳು ದಕ್ಷಿಣ ಲಂಡನ್‌ನ ವೂಲ್‌ವಿಚ್ ಕ್ರೌನ್ ಕೋರ್ಟ್ ಇವರಿಗೆ ಜೈಲು ಶಿಕ್ಷೆ ವಿಧಿಸಿದೆ.

ಪುರುಷರ ವಿಶ್ವ ಬಾಕ್ಸಿಂಗ್: ನಾಲ್ಕರ ಘಟ್ಟಕ್ಕೆ ನಿಶಾಂತ್; ಐತಿಹಾಸಿಕ ಸಾಧನೆಯತ್ತ ಭಾರತ

ಸೆಮಿಗೆ ಹುಸಾಮುದ್ದೀನ್, ದೀಪಕ್

ಮುಖ್ಯಾಂಶಗಳು

- ಕಿರ್ಗಿಸ್ತಾನದ ನುರ್ಜಿಗಿತ್ ದಿಯುಶೆಬೆವ್ ಎದುರು ಗೆದ್ದ ದೀಪಕ್
- ಬಲ್ಗೇರಿಯಾದ ಜೆ. ಡಿಯಾಜ್ ಇಬನೆಜ್ ವಿರುದ್ಧ ಹುಸಾಮುದ್ದೀನ್‌ಗೆ ಗೆಲುವು

ತಾಷ್ಕೆಂಟ್ (ಪಿಟಿಐ): ಜಯದ ಓಟ ಮುಂದುವರಿಸಿದ ಭಾರತದ ದೀಪಕ್ ಬೊರಿಯಾ, ಮೊಹಮ್ಮದ್ ಹುಸಾಮುದ್ದೀನ್ ಮತ್ತು ನಿಶಾಂತ್ ದೇವ್ ಅವರು ಪುರುಷರ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಬುಧವಾರ ಸೆಮಿಫೈನಲ್ ತಲುಪಿದ್ದಾರೆ. ಇದರೊಂದಿಗೆ ಮೂವರೂ ಪದಕ ಖಚಿತಪಡಿಸಿದ್ದಾರೆ.

ಎರಡು ಪದಕ ಜಯಿಸಿದ್ದು ಭಾರತದ ಈ ಹಿಂದಿನ ಶ್ರೇಷ್ಠ ಸಾಧನೆಯಾಗಿತ್ತು. 2019ರ ಆವೃತ್ತಿಯಲ್ಲಿ ಅಮಿತ್ ಪಂಘಲ್ ಬೆಳ್ಳಿ ಮತ್ತು ಮನೀಷ್ ಕೌಶಿಕ್ ಕಂಚು ಜಯಿಸಿದ್ದರು. ಈ ಬಾರಿ ಈಗಾಗಲೇ ಮೂರು ಪದಕ ಖಚಿತವಾದ್ದರಿಂದ ಐತಿಹಾಸಿಕ ಸಾಧನೆ ಮೂಡಿಬರುವುದು ಸ್ಪಷ್ಟ.

ಇಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ 51 ಕೆಜಿ ವಿಭಾಗದ ಎಂಟರ ಘಟ್ಟದ ಬೌಟ್‌ನಲ್ಲಿ ದೀಪಕ್ 5–0ಯಿಂದ ಕಿರ್ಗಿಸ್ತಾನದ ನುರ್ಜಿಗಿತ್ ದಿಯುಶೆಬೆವ್ ಅವರನ್ನು ಪರಾಭವಗೊಳಿಸಿದರು. ಬೌಟ್‌ನ ಆರಂಭದಿಂದಲೇ ಉಭಯ ಬಾಕ್ಸರ್‌ಗಳ ಮಧ್ಯೆ ಜಿದ್ದಾಜಿದ್ದಿ ಪೈಪೋಟಿ ನಡೆಯಿತು. ಸ್ವಲ್ಪ ದೂರದಿಂದಲೇ ನಿಖರ ಪಂಚ್‌ಗಳನ್ನು ಪ್ರಯೋಗಿಸಿದ ದೀಪಕ್ ಅವರು ಎದುರಾಳಿಯನ್ನು ಕಂಗೆಡಿಸಿದರು.

ಮೊದಲ ಸುತ್ತಿನಲ್ಲಿ 5–0ಯಿಂದ ಮೇಲುಗೈ ಸಾಧಿಸಿದ ಭಾರತದ ಬಾಕ್ಸರ್, ಎರಡನೇ ಸುತ್ತಿನಲ್ಲೂ ಸಂಯೋಜಿತ ಪಂಚ್‌ಗಳ ಮೂಲಕ ದಿಯುಶೆಬೆವ್ ಅವರನ್ನು ಕಾಡಿದರು. ಎರಡು ಸುತ್ತುಗಳ ಮುನ್ನಡೆಯ ಬಳಿಕ ಬೌಟ್‌ನ ಅಂತಿಮ ಮೂರು ನಿಮಿಷಗಳಲ್ಲಿ ದೀಪಕ್, ಹೆಚ್ಚು ರಕ್ಷಣಾತ್ಮಕ ಆಟಕ್ಕೆ ಮೊರೆಹೋದರು. ಗೆಲುವು ಒಲಿಸಿಕೊಂಡರು.

ಶುಕ್ರವಾರ ನಡೆಯಲಿರುವ ಸೆಮಿಫೈನಲ್‌ನಲ್ಲಿ ದೀಪಕ್ ಅವರು ಫ್ರಾನ್ಸ್‌ನ ಬಿ. ಬೆನ್ನಾಮಾ ಎದುರು ಕಣಕ್ಕಿಳಿಯುವರು.

57 ಕೆಜಿ ವಿಭಾಗದ ಎಂಟರಘಟ್ಟದ ಮತ್ತೊಂದು ಹಣಾಹಣಿಯಲ್ಲಿ ಕಾಮನ್‌ವೆಲ್ತ್ ಗೇಮ್ಸ್ ಕಂಚಿನ ಪದಕ ವಿಜೇತ ಹುಸಾಮುದ್ದೀನ್ ಅವರಿಗೆ 4–3ರಿಂದ ಬಲ್ಗೇರಿಯಾದ ಜೆ. ಡಿಯಾಜ್ ಇಬನೆಜ್ ವಿರುದ್ಧ ಗೆಲುವು ಒಲಿಯಿತು.

ಈ ಬೌಟ್‌ನಲ್ಲಿ ಉಭಯ ಬಾಕ್ಸರ್‌ಗಳಿಂದ ಬಿರುಸಿನ ಪಂಚ್‌ಗಳ ಪ್ರಯೋಗ ನಡೆಯಿತು. ಅಂತಿಮವಾಗಿ ಗೆಲುವು ಹುಸಾಮುದ್ದೀನ್ ಅವರದಾಯಿತು. ಮುಂದಿನ ಬೌಟ್‌ನಲ್ಲಿ ಭಾರತದ ಬಾಕ್ಸರ್‌ಗೆ ಕ್ಯೂಬಾದ ಸೈದೆಲ್ ಹೊರ್ಟಾ ಸವಾಲು ಎದುರಾಗಿದೆ.

ದೀಪಕ್, ನಿಶಾಂತ್ (ಮೇಲಿನವರು) ಮತ್ತು ಹುಸಾಮುದ್ದೀನ್– ಭಾರತ ಬಾಕ್ಸಿಂಗ್ ಫೆಡರೇಷನ್ ಮೀಡಿಯಾ ಚಿತ್ರ

71 ಕೆಜಿ ವಿಭಾಗದ ಬೌಟ್‌ನಲ್ಲಿ ನಿಶಾಂತ್ ಸುಲಭ ಗೆಲುವು ದಾಖಲಿಸಿದರು. 22 ವರ್ಷದ ಬಾಕ್ಸರ್ ಕ್ವಾರ್ಟರ್‌ಫೈನಲ್ ಸೆಣಸಾಟದಲ್ಲಿ ಅವರು 5–0ಯಿಂದ ಕ್ಯೂಬಾದ ಜೋರ್ಗ್ ಕ್ಯುಲ್ಲರ್ ಅವರನ್ನು ಮಣಿಸಿದರು. ಹೋದ ಆವೃತ್ತಿಯಲ್ಲಿ ಕ್ವಾರ್ಟರ್‌ಫೈನಲ್‌ನಲ್ಲಿ ಎಡವಿದ್ದ ಭಾರತದ ಬಾಕ್ಸರ್, ಈ ಬೌಟ್‌ನಲ್ಲಿ ಚುರುಕಿನ ಹೊಡೆತಗಳ ಮೂಲಕ ಎದುರಾಳಿಯನ್ನು ವಿಚಲಿತಗೊಳಿಸಿದರು.

ನಿಶಾಂತ್ ಅವರು ಮುಂದಿನ ಬೌಟ್‌ನಲ್ಲಿ ಏಷ್ಯನ್ ಚಾಂಪಿಯನ್, ಕಜಕಸ್ತಾನದ ಅಸ್ಲನ್‌ಬೆಕ್ ಶಿಂಬರ್ಜನೊವ್ ಅವರಿಗೆ ಮುಖಾಮುಖಿಯಾಗುವರು.

ಭಾರತ ಇದುವರೆಗೆ ವಿಶ್ವ ಚಾಂಪಿಯನ್‌ಷಿಪ್‌ಗಳಲ್ಲಿ ಏಳು ಪದಕ ಜಯಿಸಿದೆ.

ವಿಜೇಂದರ್ ಸಿಂಗ್ (ಕಂಚು, 2009), ವಿಕಾಸ್ ಕೃಷ್ಣ (ಕಂಚು, 2011), ಶಿವ ಥಾಪಾ (ಕಂಚು, 2015), ಗೌರವ್ ಬಿಧುರಿ (ಕಂಚು, 2017), ಅಮಿತ್ ಪಂಘಲ್ (ಬೆಳ್ಳಿ, 2019), ಮನೀಷ್ ಕೌಶಿಕ್ (ಕಂಚು, 2019) ಮತ್ತು ಆಕಾಶ್ ಕುಮಾರ್ (ಕಂಚು, 2021) ಇದುವರೆಗೆ ಪದಕ ಜಯಿಸಿದವರು.

ಜೂನಿಯರ್ ಹಾಕಿ: ಭಾರತ ತಂಡಕ್ಕೆ ಪ್ರೀತಿ ನಾಯಕಿ

ನವದೆಹಲಿ (ಪಿಟಿಐ): ಪ್ರತಿಭಾವಂತ ಡಿಫೆಂಡರ್ ಪ್ರೀತಿ ಅವರನ್ನು ಭಾರತ ಜೂನಿಯರ್ ಮಹಿಳಾ ಹಾಕಿ ತಂಡದ ನಾಯಕಿಯನ್ನಾಗಿ ನೇಮಕ ಮಾಡಲಾಗಿದೆ. ಬುಧವಾರ ಹಾಕಿ ಇಂಡಿಯಾ ಪ್ರಕಟಿಸಿದ ತಂಡದಲ್ಲಿ ಒಟ್ಟು 18 ಆಟಗಾರ್ತಿಯರು ಸ್ಥಾನ ಗಳಿಸಿದ್ದಾರೆ.

ಈ ತಂಡವು ಜೂನ್ 2ರಿಂದ ಜಪಾನ್ ದೇಶದ ಕಾಕಾಮಿಗಾಹರಾದಲ್ಲಿ ನಡೆಯಲಿರುವ ಜೂನಿಯರ್ ಏಷ್ಯಾ ಕಪ್ ಟೂರ್ನಿಯಲ್ಲಿ ಆಡಲಿದೆ. ಎ ಗುಂಪಿನಲ್ಲಿರುವ ಭಾರತ ತಂಡವು ಕೊರಿಯಾ, ಮಲೇಷ್ಯಾ, ತೈಪೆ ಹಾಗೂ ಉಜ್ಬೇಕಿಸ್ತಾನ ತಂಡಗಳನ್ನು ಎದುರಿಸಲಿದೆ.

ಈ ಟೂರ್ನಿಯಲ್ಲಿ ಅಗ್ರ ಮೂರು ಸ್ಥಾನ ಪಡೆಯುವ ತಂಡಗಳು ಜೂನಿಯರ್ ವಿಶ್ವಕಪ್ ಟೂರ್ನಿಯಲ್ಲಿ ಆಡಲು ಅರ್ಹತೆ ಗಿಟ್ಟಿಸಲಿವೆ.

ತಂಡ: ಡಿಫೆಂಡರ್ಸ್: ಪ್ರೀತಿ (ನಾಯಕಿ), ಮಹಿಮಾ ಟೆಟೆ, ನೀಲಂ, ರೊಪ್ನಿ ಕುಮಾರಿ, ಅಂಜಲಿ ಬರ್ವಾ, ಮಿಡ್‌ಫೀಲ್ಡರ್ಸ್: ಖುತುಜಾ ದಾದಸೊ ಪಿಸಾಲ್, ಮಂಜು ಚೊರಾಸಿಯಾ, ಜ್ಯೋತಿ ಚೆಟ್ರಿ, ವೈಷ್ಣವಿ ವಿಠಲ್ ಫಳ್ಕೆ, ಸುಜಾತಾ ಕುಜುರ್, ಮನಶ್ರೀ ನರೇಂದ್ರ ಶೇಡಗೆ, ಫಾರ್ವರ್ಡ್ಸ್: ಮುಮ್ತಾಜ್ ಖಾನ್, ದೀಪಿಕಾ (ಉಪ ನಾಯಕಿ), ದೀಪಿಕಾ ಸೊರೆಂಗ್, ಅನು, ಸುನಿಲಿತಾ ಟೊಪ್ಪೊ.

ಗೋಲ್ ಕೀಪರ್ಸ್: ಮಾಧುರಿ ಕಿಂಡೊ, ಅದಿತಿ ಮಹೇಶ್ವರಿ.

ರಾಹುಲ್‌ಗೆ ಶಸ್ತ್ರಚಿಕಿತ್ಸೆ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಆಟಗಾರ ಕೆ.ಎಲ್. ರಾಹುಲ್ ಅವರು ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದಾರೆ.

ರಾಹುಲ್ ಅವರು ಈ ಕುರಿತ ಸಾಮಾಜಿಕ ಜಾಲತಾಣಗಳಲ್ಲಿ ಬರೆದುಕೊಂಡಿದ್ದಾರೆ.

‘ನನ್ನ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿದೆ. ವೈದ್ಯರು ಹಾಗೂ ವೈದ್ಯಕೀಯ ಸಿಬ್ಬಂದಿಗೆ ಧನ್ಯವಾದಗಳು. ಚೇತರಿಸಿಕೊಳ್ಳುತ್ತಿದ್ದೇನೆ’ ಎಂದು ಐಪಿಎಲ್ ಟೂರ್ನಿಯಲ್ಲಿ ಲಖನೌ ಸೂಪರ್ ಜೈಂಟ್ಸ್ ತಂಡದ ನಾಯಕರೂ ಆಗಿರುವ ರಾಹುಲ್ ಹೇಳಿದ್ದಾರೆ.

ಈ ತಿಂಗಳ ಆರಂಭದಲ್ಲಿ ನಡೆದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಎದುರಿನ ಐಪಿಎಲ್ ಪಂದ್ಯದಲ್ಲಿ ರಾಹುಲ್ ಅವರ ತೊಡೆಗೆ ಗಾಯವಾಗಿತ್ತು. ಹೀಗಾಗಿ ಅವರು ಐಪಿಎಲ್ ಹಾಗೂ ಮುಂದಿನ ತಿಂಗಳು ನಡೆಯಬೇಕಿರುವ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ಫೈನಲ್‌ನಿಂದ ಹೊರಗುಳಿದಿದ್ದಾರೆ.

ಕೆ.ಎಲ್‌.ರಾಹುಲ್

ರಾಹುಲ್ ಬದಲಿಗೆ ಭಾರತ ತಂಡದಲ್ಲಿ ಇಶಾನ್ ಕಿಶನ್ ಅವರಿಗೆ ಸ್ಥಾನ ನೀಡಲಾಗಿದೆ.

ಶೂಟಿಂಗ್: ರಿಧಮ್‌ಗೆ ಕಂಚು

ನವದೆಹಲಿ (ಪಿಟಿಐ): ಭಾರತದ ರಿಧಮ್ ಸಂಗ್ವಾನ್ ಅವರು ಐಎಸ್‌ಎಸ್‌ಎಫ್ ವಿಶ್ವಕಪ್ (ಪಿಸ್ತೂಲ್ ಮತ್ತು ರೈಫಲ್) ಶೂಟಿಂಗ್ ಟೂರ್ನಿಯಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದಾರೆ.

ಅಜರ್‌ಬೈಜಾನ್‌ನ ಬಾಕುವಿನಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಬುಧವಾರ ಮಹಿಳೆಯರ 10 ಮೀಟರ್ಸ್ ಏರ್ ಪಿಸ್ತೂಲ್ ವಿಭಾಗದಲ್ಲಿ ಅವರಿಗೆ ಪದಕ ಒಲಿದಿದೆ.

ಫೈನಲ್‌ನಲ್ಲಿ ರಿಧಮ್ 219.1 ಪಾಯಿಂಟ್ಸ್ ಗಳಿಸಿದರು. ಗ್ರೀಸ್‌ನ ಅನ್ನಾ ಕೊರಾಕಾಕಿ (241.3 ಪಾಯಿಂಟ್ಸ್) ಚಿನ್ನ ಮತ್ತು ಉಕ್ರೇನ್‌ನ ಒಲೆನಾ ಕೊಸ್ಟೆವಿಚ್ (240.6) ಬೆಳ್ಳಿ ಜಯಿಸಿದರು.

ರಿಧಮ್ ಸಂಗ್ವಾನ್– ಎಸ್‌ಎಐ ಮೀಡಿಯಾ ಟ್ವಿಟರ್ ಚಿತ್ರ

ಪುರುಷರ ಮತ್ತು ಮಹಿಳೆಯರ 10 ಮೀಟರ್ಸ್ ಏರ್ ಪಿಸ್ತೂಲ್ ವಿಭಾಗಗಳಲ್ಲಿ ಫೈನಲ್ಸ್ ತಲುಪಿದ್ದ ಸರಬ್ಜೋತ್ ಸಿಂಗ್ ಮತ್ತು ಇಶಾ ಸಿಂಗ್ ಪದಕ ತಪ್ಪಿಸಿಕೊಂಡರು.

ಇಶಾ ಆರನೇ ಸ್ಥಾನ ಗಳಿಸಿದರೆ, ಇದೇ ವಿಭಾಗದಲ್ಲಿ ಸ್ಪರ್ಧಿಸಿದ್ದ ದಿವ್ಯಾ ಟಿ.ಎಸ್. ಅವರು17ನೇ ಸ್ಥಾನ ಗಳಿಸಿದರು.

ಕೆಎಸ್‌ಎಫ್‌ಎ ಅಧ್ಯಕ್ಷ, ಎಐಎಫ್‌ಎಫ್ ಉಪಾಧ್ಯಕ್ಷರಾಗಿ ಸೇವೆ

ಫುಟ್‌ಬಾಲ್ ಆಡಳಿತಗಾರ ಖಲೀಲ್ ಇನ್ನಿಲ್ಲ

ಬೆಂಗಳೂರು: ರಾಷ್ಟ್ರೀಯ ಮತ್ತು ರಾಜ್ಯ ಫುಟ್‌ಬಾಲ್ ಸಂಸ್ಥೆಗಳ ಆಡಳಿತದಲ್ಲಿ ದೀರ್ಘಕಾಲ ಕಾರ್ಯನಿರ್ವಹಿಸಿದ್ದ ಕರ್ನಾಟಕದ ಎ.ಆರ್. ಖಲೀಲ್ (91) ಅವರು ಆರ್‌ವಿ ರಸ್ತೆಯ ತಮ್ಮ ನಿವಾಸದಲ್ಲಿ ಬುಧವಾರ ನಿಧನರಾದರು.

ಅಖಿಲ ಭಾರತ ಫುಟ್‌ಬಾಲ್ ಸಂಸ್ಥೆಯ(ಎಐಎಫ್‌ಎಫ್), ಉಪಾಧ್ಯಕ್ಷ, ಖಜಾಂಚಿಯಾಗಿ, ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆಯಲ್ಲಿ (ಕೆಎಸ್‌ಎಫ್‌ಎ) ಅಧ್ಯಕ್ಷರಾಗಿಯೂ ಖಲೀಲ್ ಸೇವೆ ಸಲ್ಲಿಸಿದ್ದರು. ಇತ್ತೀಚೆಗೆ ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದರು.

ಕೆಎಸ್‌ಎಫ್‌ಎ ಅಧ್ಯಕ್ಷರಾಗಿ ಸುಮಾರು 28 ವರ್ಷ ಕಾರ್ಯನಿರ್ವಹಿಸಿದ್ದ ಅವರು, ರಾಜ್ಯದಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪಂದ್ಯಗಳನ್ನು ಆಯೋಜಿಸುವಲ್ಲಿ ಮುಖ್ಯ ಪಾತ್ರ ವಹಿಸಿದ್ದರು. ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣ ನಿರ್ಮಾಣದಲ್ಲಿಯೂ ಅವರ ಪಾತ್ರ ಗಣನೀಯವಾಗಿತ್ತು.

ಎ.ಆರ್‌. ಖಲೀಲ್

ಆಡಳಿತದ ಹಾದಿ: 1932ರ ಮೇ 4ರಂದು ಜನಿಸಿದ್ದ ಖಲೀಲ್ ಅವರು, ಜವಾಹರ್ ಯೂನಿಯನ್ ‘ಎ’ ಡಿವಿಷನ್ ಕ್ಲಬ್‌ನ ಮುಖ್ಯಸ್ಥರಾಗುವ ಮೂಲಕ ತಮ್ಮ ಆಡಳಿತದ ಅಭಿಯಾನ ಆರಂಭಿಸಿದರು. 1953ರಲ್ಲಿ ಬೆಂಗಳೂರು ಜಿಲ್ಲಾ ಫುಟ್‌ಬಾಲ್ ಸಂಸ್ಥೆ (ಬಿಡಿಎಫ್‌ಎ) ಸದಸ್ಯರಾದರು. 1961–81ರ ಅವಧಿಯಲ್ಲಿ ಕೆಎಸ್‌ಎಫ್‌ಎ ಖಜಾಂಚಿ, 1981–89ರಲ್ಲಿ ಉಪಾಧ್ಯಕ್ಷರಾದರು. 1989ರಿಂದ 2018ರವರೆಗೆ ಕೆಎಸ್‌ಎಫ್‌ಎ ಅಧ್ಯಕ್ಷರಾಗಿದ್ದರು.

1990ರಲ್ಲಿ ಎಐಎಫ್‌ಎಫ್ ಖಜಾಂಚಿ, 2008ರಿಂದ 2012ರವರೆಗೆ ಉಪಾಧ್ಯಕ್ಷರಾಗಿ ಮತ್ತು 2013ರಲ್ಲಿ ಐ– ಲೀಗ್ ಸಮಿತಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಏಷ್ಯನ್ ಫುಟ್‌ಬಾಲ್ ಕಾನ್ಫೆಡರೇಷನ್‌ನ ಕಾರ್ಯಕಾರಿ ಸಮಿತಿ ಸದಸ್ಯರಾಗಿ 25 ವರ್ಷಗಳ ನಿರಂತರ ಸೇವೆ ಸಲ್ಲಿಸಿದ್ದ ಅವರಿಗೆ ಚಿನ್ನದ ಪದಕ ಪ್ರದಾನ ಮಾಡಿ ಗೌರವಿಸಲಾಗಿತ್ತು.

ಖಲೀಲ್ ಖಲೀಲ್ ಅವರ ಅಂತ್ಯಕ್ರಿಯೆ ಬುಧವಾರ ನೆರವೇರಿತು. ಅವರಿಗೆ ಪತ್ನಿ ನೂರ್‌ಜಹಾನ್ ಮತ್ತು ನಾಲ್ವರು ಪುತ್ರಿಯರಿದ್ದಾರೆ. ಖಲೀಲ್ ಅವರ ನಿಧನಕ್ಕೆ ಎಐಎಫ್‌ಎಫ್ ಮತ್ತು ಕೆಎಸ್‌ಎಫ್‌ಎ ಪದಾಧಿಕಾರಿಗಳು ಸಂತಾಪ ಸೂಚಿಸಿದ್ದಾರೆ.

ಕ್ರಿಕೆಟ್: ಐಸಿಸಿಯಿಂದ ಬಿಸಿಸಿಐಗೆ

₹ 9500 ಕೋಟಿ ಆದಾಯ ನಿರೀಕ್ಷೆ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಬೊಕ್ಕಸಕ್ಕೆ ಮುಂದಿನ ಐದು ವರ್ಷಗಳಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್‌ನಿಂದ ವಾರ್ಷಿಕವಾಗಿ ದೊಡ್ಡಮಟ್ಟದ ಆದಾಯ ಹರಿದುಬರಲಿದೆ.

2023–2027ರ ಅವಧಿಯಲ್ಲಿ (ಎಫ್‌ಟಿಪಿ) ಐಸಿಸಿಯ ವರಮಾನ ಹಂಚಿಕೆಯಲ್ಲಿ ಬಿಸಿಸಿಐಗೆ ಸುಮಾರು ₹ 9500 ಕೋಟಿ ಲಭಿಸುವ ನಿರೀಕ್ಷೆಯಿದೆ. ಐಸಿಸಿ ಇನ್ನೂ ಅಧಿಕೃತವಾಗಿ ಈ ವಿಷಯವನ್ನು ಪ್ರಕಟಿಸಿಲ್ಲ. ಆದರೆ ವಿಶ್ವಸನೀಯ ಮೂಲಗಳು ಖಚಿತಪಡಿಸಿವೆ.

ಶೀಘ್ರದಲ್ಲಿಯೇ ಬಿಸಿಸಿಐಗೆ ಐಸಿಸಿಯ ವಾರ್ಷಿಕ ಆದಾಯದಲ್ಲಿ ಶೇ 38.50ರಷ್ಟು ಪಾಲು ದೊರೆಯಲಿದೆ. ಅಂದರೆ ಐಸಿಸಿಯ ವಾರ್ಷಿಕ ₹ 4900 ಕೋಟಿ ಆದಾಯದಲ್ಲಿ ಬಿಸಿಸಿಐಗೆ ಸುಮಾರು ₹ 1850 ಕೋಟಿಗೂ ಹೆಚ್ಚು ಲಭಿಸುವ ಸಾಧ್ಯತೆ ಇದೆ.

’ಇದು ಪ್ರಸ್ತಾವ ಮಾದರಿಯಾಗಿದೆ. ಐಸಿಸಿ ಟೂರ್ನಿಗಳಲ್ಲಿ ತಂಡಗಳ ಪ್ರದರ್ಶನ ಹಾಗೂ ವಾಣಿಜ್ಯ ಚಟುವಟಿಕೆ ಮತ್ತು ರ‍್ಯಾಂಕಿಂಗ್ ಆಧಾರದಲ್ಲಿ ವರಮಾನ ಹಂಚಿಕೆಯಾಗಲಿದೆ. ಸದ್ಯ ಭಾರತವು ಐಸಿಸಿಗೆ ದೊಡ್ಡ ಮಟ್ಟದ ಆದಾಯ ತಂದುಕೊಡುತ್ತಿದೆ’ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಇಎಸ್‌ಪಿಎನ್ ಕ್ರಿಕ್‌ಇನ್ಫೋ ವರದಿಯನ್ವಯ ಐಸಿಸಿಯಿಂದ ಆದಾಯ ಹಂಚಿಕೆಯಲ್ಲಿ ಗರಿಷ್ಠ ಪಾಲು ಪಡೆಯುತ್ತಿರುವ ಸಂಸ್ಥೆ ಬಿಸಿಸಿಐ ಆಗಿದೆ. ನಂತರದ ಸ್ಥಾನಗಳಲ್ಲಿ ಇಂಗ್ಲೆಂಡ್ ಕ್ರಿಕೆಟ್ ಬೋರ್ಡ್ (ಶೇ 6.89), ಕ್ರಿಕೆಟ್ ಆಸ್ಟ್ರೇಲಿಯಾ (ಶೇ 6.25) ಹಾಗೂ ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಶೇ 5.75) ಇವೆ.

2018–2022ರ ಎಫ್‌ಟಿಪಿ ಅವಧಿಯಲ್ಲಿ ಬಿಸಿಸಿಐಗೆ ಲಭಿಸಿದ್ದಕ್ಕಿಂತಲೂ ದುಪ್ಪಟ್ಟು ವರಮಾನ ಮುಂದಿನ ಅವಧಿಯಲ್ಲಿ ಸಿಗುವ ನಿರೀಕ್ಷೆ ಇದೆ.

ಫುಟ್‌ಬಾಲ್: ಅಂಟೊನಿಯೊ ನಿಧನ

ಮೆಕ್ಸಿಕೊ ಸಿಟಿ (ಎಪಿ): ಐದು ವಿಶ್ವಕಪ್ ಟೂರ್ನಿಗಳನ್ನು ಆಡಿದ ವಿಶ್ವದ ಮೊದಲ ಆಟಗಾರ ಖ್ಯಾತಿಯ ಮೆಕ್ಸಿಕೊದ ಅಂಟೊನಿಯೊ ಕರ್ಬಜಲ್ (93) ಮಂಗಳವಾರ ನಿಧನರಾದರು. ರಕ್ತದೊತ್ತಡ ತೊಂದರೆಯಿಂದ ಬಳಲುತ್ತಿದ್ದ ಅವರು ಆಸ್ಪತ್ರೆಗೆ ದಾಖಲಾಗಿದ್ದರು.

ಗೋಲ್‌ಕೀಪರ್ ಅಂಟೊನಿಯೊ 1950–66ರ ಅವಧಿಯಲ್ಲಿ ವಿಶ್ವಕಪ್ ಟೂರ್ನಿಗಳ 11 ಪಂದ್ಯಗಳಲ್ಲಿ ಮೆಕ್ಸಿಕೊ ತಂಡವನ್ನು ಪ್ರತಿನಿಧಿಸಿದ್ದರು. ರಫೆಲ್ ಮಾರ್ಕ್ವೆಜ್, ಆ್ಯಂಡ್ರೆಸ್ ಗರ್ಡಾಡೊ ಮತ್ತು ಗಿಲೆರ್ಮೊ ಒಚಾವ ಮೆಕ್ಸಿಕೊ ತಂಡಕ್ಕಾಗಿ 5 ವಿಶ್ವಕಪ್ ಆಡಿದವರು. ಅರ್ಜೆಂಟೀನಾದ ಲಯೊನೆಲ್ ಮೆಸ್ಸಿ, ಪೋರ್ಚುಗಲ್‌ನ ಕ್ರಿಸ್ಟಿಯಾನೊ ರೊನಾಲ್ಡೊ, ಜರ್ಮನಿಯ ಲೋಥರ್ ಮಥುವಾಸ್ ಮತ್ತು ಇಟಲಿಯ ಗಿಯಾನ್‌ಲೂಗಿ ಬಫೋನ್ 5 ವಿಶ್ವಕಪ್‌ಗಳಲ್ಲಿ ಕಾಣಿಸಿಕೊಂಡ ಆಟಗಾರರಾಗಿದ್ದಾರೆ.